ಕರ್ನಾಟಕ ವಿಧಾನಸಭೆ

ಸೋಮವಾರ 23ನೇ ಅಕ್ಟೋಬರ್ 2000 ಸದನವು ವಿಧಾನಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ 2 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು

೧. ಪ್ರಮಾಣ ವಚನ ಸ್ವೀಕಾರ :

ಅಧ್ಯಕ್ಷರು : ಮಾನ್ಯ ಸದಸ್ಯರಾದ ಶ್ರೀ ಭರಮಗೌಡ ಅಲಗೌಡ ರಾಜು ಕಾಗೆ (ಕಾಗವಾಡ) ರವರು ಪ್ರಮಾಣ ವಚನ ಸ್ವೀಕರಿಸುವುದು.

(ಈ ಹಂತದಲ್ಲಿ ಮಾನ್ಯ ಸದಸ್ಯರು ಪ್ರಮಾಣವಚನವನ್ನು ಸ್ವೀಕರಿಸಿದರು)

೨. ಸಂತಾಪ ಸೂಚನೆ :

ವಿಷಯ : ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರು ಮತ್ತು ಇತರ೧೯ ಜನ ಗಣ್ಯ ವ್ಯಕ್ತಿಗಳ ನಿಧನ ಹೊಂದಿದ ಬಗ್ಗೆ.

ಅಧ್ಯಕ್ಷರು : ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಲಾಯಿತು.

ಮಾನ್ಯ ಸಭಾಧ್ಯಕ್ಷರು

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪ, ಕರ್ನಾಟಕದ ಮಾಜಿ ರಾಜ್ಯಪಾಲರಾದ ಶ್ರೀ ಧರ್ಮವೀರ, ವಿಧಾನಸಭೆಯ ಸದಸ್ಯರಾಗಿದ್ದು ಈ ಪಾಸಗೌಡ ಉರುಫ್ ಪೋಪಟ್ ಅಪ್ಪಗೌಡ ಪಾಟೀಲ್, ವಿಧಾನಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಎ.ಆರ್. ಪಂಚಗಮಿ, ಶ್ರೀ ಬಿ.ಎಸ್. ಚಂದ್ರಶೇಖರಯ್ಯ, ಶ್ರೀ ಪಿ.ಬಿ. ಓಂಕಾರಮೂರ್ತಿ, ಶ್ರೀ ಆರ್. ಹೆಚ್. ಗೂಡವಾಲ, ಶ್ರೀ ಬಸನಗೌಡ, ಶ್ರೀ ಬಿ.ಶಿವಣ್ಣ, ಶ್ರೀ ಶಂಕರಪ್ಪ ಸುಗುರಪ್ಪ ಕವಿಶೆಟ್ಟಿ, ಶ್ರೀ ಎಸ್. ಇಸಾಮಿಯಾ, ಶ್ರೀ ಕೆ.ಎಸ್. ಕಾಳಮರಿಗೌಡ, ಶ್ರೀ ಆರ್. ಅನಂತರಾಮನ್, ಶ್ರೀ ಎಂ.ಎಸ್ ಕೃಷ್ಣನ್, ಶ್ರೀ ಡಿ. ಎಸ್. ನಾಡಕರ್ಣಿ, ಶ್ರೀ ಡಿ. ಮುನಿಚಿನ್ನಪ್ಪ, ಶ್ರೀ ಎನ್.ಜಯಣ್ಣ, ಶ್ರೀಮತಿ ಡಿ.ಜಿ. ಹೇಮಾವತಿ ಹಾಗೂ ಶ್ರೀ ಟಿ.ಜಿ. ಸತ್ಯನಾರಾಯಣ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

೧. ಶ್ರೀ ಎಸ್. ನಿಜಲಿಂಗಪ್ಪ

ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ನಿಜಲಿಂಗಪ್ಪ ಅವರು ೧೦ನೇ ಡಿಸೆಂಬರ್, ೧೯೦೨ ರಂದು ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಹಲವಾಗಲು ಗ್ರಾಮದಲ್ಲಿ ಜನಿಸಿ ಮೈಸೂರು ಉಚ್ಚನ್ಯಾಯಾಲಯದ ನ್ಯಾಯವಾದಿಗಳಾಗಿ ವೃತ್ತಿಯನ್ನು ಪ್ರಾರಂಭಿಸಿದ್ದರು. ಕೃಷಿ ಕುಟುಂಬದಲ್ಲಿ ಜನಿಸಿದ್ದ ಶ್ರೀಯುತರು ಎಸ್.ಎನ್. ಎಂದೇ ಖ್ಯಾತಿ ಹೊಂದಿ, ಕರ್ನಾಟಕ ಏಕೀಕರಣದ ಹರಿಕಾರ, ಹಿರಿಯ ಮುತ್ಸದ್ಧಿ, ಅಪ್ಪಟ ಗಾಂಧಿವಾದಿ ಎಂದು ಹೆಸರಾದವರು ಭೌತಿಕ ಜೀವನದಲ್ಲಿ ಅತ್ಯುನ್ನತ ಪದವಿವರೆಗೆ ಏರಿದ್ದ ಶ್ರೀಯುತರು ಹಲವು ವರ್ಷ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು.

ಬಡಕುಟುಂಬದಲ್ಲಿ ಜನಿಸಿದರೂಅವರಿವರ ಸಹಾಯದಿಂದ ದಾವಣಗೆರೆಯಲ್ಲಿ ಅತಿ ಹೆಚ್ಚು ಅಂಕಗಳೊಂದಿಗೆ ಮ್ಯಾಟ್ರಿಕುಲೇಷನ್ ಪಾಸಾದ ಶ್ರೀ ನಿಜಲಿಂಗಪ್ಪನವರು ಬೆಂಗಳೂರು ಹಾಗೂ ಪುಣೆಗಳಲ್ಲಿ ಪದವಿ ಹಾಗೂ ಕಾನೂನು ವಿದ್ಯಾಭ್ಯಾಸ ಮಾಡಿ ವಕೀಲಿ ವೃತ್ತಿ ಪ್ರಾರಂಭಿಸಿದರು. ೧೯೨೪ರಲ್ಲಿ ಬೆಳಗಾವಿಯಲ್ಲಿ ಮಹಾತ್ಮಾ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲುಗೊಂಡ ನಿಜಲಿಂಗಪ್ಪನವರು ಅವರ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮಿಕಿದರು. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದ ಈ ನಾಯಕ ಬದುಕಿನ ಕೊನೆಯವರೆಗೆ ಗಾಂಧಿ ಪ್ರಣೀತ ತತ್ವಗಳಿಂದ ಹಿಂದೆ ಸರಿಯಲಿಲ್ಲ. ಅವರು ನಿತ್ಯ ಧರಿಸುತ್ತಿದ್ದ ಶುಭ್ರ ಖಾದಿ ವಸ್ತ್ರದ ಹಾಗೆಯೇ ತಮ್ಮ ಇಡೀ ಜೀವನವನ್ನೂ ನಿಷ್ಕಳಂಕವಾಗಿ ಉಳಿಸಿಕೊಂಡು ಬಂದವರು. ಸಾರ್ವಜನಿಕ ಜೀವನದಲ್ಲಿನ ಭ್ರಷ್ಟಾಚಾರವನ್ನು ಕಂಡು ಕೆಂಡ ಕಾರುತ್ತಿದ್ದ ಶ್ರೀಯುತರು ಗ್ರಾಮೀಣ ಭಾರತದ ಏಳಿಗೆಯ ಬಗ್ಗೆಯೇ ಮಾತನಾಡುತಿದ್ದರು. ನೀರಾವರಿ ಹಾಗೂ ವಿದ್ಯುತ್ ಸವಲತ್ತುಗಳ ಬಗ್ಗೆಯೂ ಒತ್ತಿ ಹೇಳುತ್ತಿದ್ದರು.

ಸುಮಾರು ಮುಕ್ಕಾಲು ಶತಮಾನಕ್ಕೂ ಧೀರ್ಘಕಾಲ ಈ ದೇಶದ ಆಗುಹೋಗುಗಳಿಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದ ಶ್ರೀಯುತರ ಬಹುದೊಡ್ಡ ಸಾಧನೆ ಎಂದರೆ ಕರ್ನಾಟಕದ ಏಕೀಕರಣಕ್ಕಾಗಿ ನಿರಂತರವಾಗಿ ಧ್ವನಿ ಎತ್ತಿದ್ದು. ೧೯೫೨ ರಿಂದ ೫೬ ರವರೆಗೆ ಲೋಕಸಭಾ ಸದಸ್ಯರಾಗಿದ್ದ ಅವರು ತಮ್ಮ ಏಕೀಕೃತ ಕರ್ನಾಟಕದ ಕನಸಿಗೆ ಅನೇಕ ಅಡ್ಡಿ ಆಡಚಣೆಗಳು ಬಂದರೂ ಎದೆಗುಂದದೆ, ಸಂಸತ್ತಿನಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯ ಅಗತ್ಯವನ್ನು ಸತತವಾಗಿ ಪ್ರಸ್ತಾಪಿಸಿದರು. ೧೯೫೬ರ ನವೆಂಬರ್ ಒಂದರಂದೇ ಏಕೀಕೃತ ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ನಾಡಿನ ಬಹುತೇಕ ಪತ್ರಿಕೆಗಳು ಅಖಂಡ ಕರ್ನಾಟಕದ ಧೈರ್ಯಶಾಲಿ ಮುಖಂಡ ಎಂದು ಬಣ್ಣಿಸಿದ್ದವು.

೧೯೫೬ ರಿಂದ ೫೮ ಮತ್ತು ೬೨ರಿಂದ ೬೮ರ ಎರಡು ಅವಧಿಗಳಿಗೆ ಆಗಿನ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಎನ್. ಅವರು ತಮ್ಮ ಅಧಿಕಾರಾವಧಿಯಲ್ಲಿ ಶರಾವತಿ ಜಲ ವಿದ್ಯುತ್ ಯೋಜನೆಯನ್ನು ಸಾಕಾರಗೊಳಿಸಿ, ಕರ್ನಾಟಕವನ್ನು ವಿದ್ಯುತ್ ಕ್ಷೇತ್ರದಲ್ಲಿ ಒಂದು ಸ್ವಾವಲಂಬಿ ರಾಜ್ಯವಾಗುವಂತೆ ಮಾಡಿದರು. ಅನೇಕ ಮಹತ್ವದ ನೀರಾವರಿ ಯೋಜನೆಗಳಿಗೂ ಅವರು ನಾಂದಿ ಹಾಡಿದರು.

೧೯೫೮ ರಷ್ಟು ಹಿಂದೆಯೇ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಗದ್ದುಗೆಯನ್ನು ಏರಿದ ನಿಜಲಿಂಗಪ್ಪನವರು ತದನಂತರ ಕಾಂಗ್ರೆಸ್ ಪಕ್ಷವು ಮೊಟ್ಟ ಮೊದಲ ಬಾರಿಗೆ ವಿಭಜನೆ ಆಗುವವರೆಗೆ ಅದರ ಅಧ್ಯಕ್ಷರಾಗಿದ್ದರು.

ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ್ದ ನಿಜಲಿಂಗಪ್ಪನವರು ೧೯೬೨ ರಲ್ಲಿ ಹೊಸದುರ್ಗ ವಿಧಾನಸಭೆ ಚುನಾವಣೆಯಲ್ಲಿ ಸೋತರೂ, ಬಾಗಲಕೋಟೆಯ ಜನತೆ ನಿಜಲಿಂಗಪ್ಪನವರ ನೆರವಿಗೆ ಧಾವಿಸಿ ಬಂದು ಅವರನ್ನು ಅವಿರೋಧವಾಗಿ ಆರಿಸಿ ಕಳುಹಿಸಿದರು.

ಕರ್ನಾಟಕ ಸರ್ಕಾರವು ಶ್ರೀ ನಿಜಲಿಂಗಪ್ಪನವರು ಈ ರಾಜ್ಯಕ್ಕೆ ಹಾಗೂ ದೇಶಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಕರ್ನಾಟಕ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು.

ಶ್ರೀ ನಿಜಲಿಂಗಪ್ಪನವರು ದಿನಾಂಕ ೦೮-೦೮-೨೦೦೦ ದಂದು ನಿಧನ ಹೊಂದಿದರು.

೨. ಶ್ರೀ ಧರ್ಮವೀರ

ಕರ್ನಾಟಕದ ಮಾಜಿ ರಾಜ್ಯಪಾಲರಾಗಿದ್ದ ಶ್ರೀ ಧರ್ಮವೀರ ಅವರು ೧೯೩೦ರಲ್ಲಿ ಕೇಂದ್ರ ಸರ್ಕಾರದ ಸೇವೆಗೆ ಸೇರಿ ಹಲವಾರು ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ನವದೆಹಲಿಯ ಲೆಫ್ಟಿನೆಂಟ್ ಗವರ್ನರಾಗಿ, ಪಂಜಾಬ್, ಪಶ್ಚಿಮ ಬಂಗಾಳ ರಾಜ್ಯದ ರಾಜ್ಯಪಾಲರಾಗಿ ಹಾಗೂ ೧೯೭೯ ರಿಂದ ೧೯೭೨ ರವರೆಗೆ ಕರ್ನಾಟಕ ರಾಜ್ಯದ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ್ದರು. ೧೯೭೧ ರಲ್ಲಿ ಆಡಳಿತ ಜಾರಿಯಲ್ಲಿದ್ದಾಗ ರಾಜ್ಯದ ನಾಲ್ಕು ವಿಭಾಗಗಳಲ್ಲಿ 'ದರ್ಬಾರ್' ಪ್ರಾರಂಭಿಸಿದ್ದ ಕೀರ್ತಿ ಹೊಂದಿದವರು.

ಇವರು ಸಾರ್ವಜನಿಕ ಕ್ಷೇತ್ರಕ್ಕೆ ಸಲ್ಲಿಸಿದ್ದ ಸೇವೆಯನ್ನು ಗುರುತಿಸಿ ಕೇಂದ್ರ ಸರ್ಕಾರದವರು 'ಪದ್ಮಭೂಷಣ' ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು.

ಶ್ರೀಯುತರು ದಿನಾಂಕ ೧೬-೯-೨೦೦೦ ದಂದು ನಿಧನ ಹೊಂದಿದರು.

೩. ಶ್ರೀ ಪಾಸಗೌಡ ಉರುಫ್ ಪೋಪಟ್ ಅಪ್ಪಗೌಡ ಪಾಟೀಲ್

ವಿಧಾನಸಭೆಯ ಹಾಲಿ ಸದಸ್ಯರಾಗಿದ್ದ ಶ್ರೀ ಪಾಸಗೌಡ ಅವರು ೧೯೫೨ನೇ ಡಿಸೆಂಬರ್ ೧೪ ರಂದು ಜನಿಸಿದ್ದು, ವೃತ್ತಿಯಿಂದ ಕೃಷಿಕರಾಗಿದ್ದರು. ಹನ್ನೊಂದನೇ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಕಾಗವಾಡ ಕ್ಷೇತ್ರದಿಂದ ಆರಿಸಿ ಬಂದಿದ್ದ ಶ್ರೀಯುತರು ಅಥಣಿ ಸಕ್ಕರೆ ಕಾರ್ಖಾನೆ, ಹಿಪ್ಪರಗಿ ಬ್ಯಾರೇಜ್ ಅಭಿವೃದ್ಧಿಗೆ ದುಡಿದಿದ್ದರು.

ಶ್ರೀಯುತರು ದಿನಾಂಕ ೨೭-೦೬-೨೦೦೦ ದಂದು ನಿಧನ ಹೊಂದಿದರು.

೪. ಶ್ರೀ ಎ.ಆರ್. ಪಂಚಗವಿ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎ.ಆರ್. ಪಂಚಗವಿ ಅವರು ೧೯೧೩ ರಲ್ಲಿ ಜನಿಸಿದ್ದು ವೃತ್ತಿಯಲ್ಲಿ ನ್ಯಾಯವಾದಿಯಾಗಿದ್ದರು. ಬಾಂಬೆ ವಿಧಾನಸಭೆಯ ಸದಸ್ಯರಾಗಿ ೧೯೫೨ ರಿಂದ ೫೭ ರವರೆಗೆ ಸೇವೆ ಸಲ್ಲಿಸಿದ್ದ ಶ್ರೀಯುತರು ೧೯೫೭ ರಿಂದ ೬೨, ೬೭ರಿಂದ ೭೧ ರವರೆಗೆ ಗೋಕಾಕ್ ಕ್ಷೇತ್ರದಿಂದ ಮೈಸೂರು ವಿಧಾನಸಭೆಗೆ ಸದಸ್ಯರಾಗಿದ್ದು ದಿನಾಂಕ ೩೧-೩-೧೯೬೨ ರಿಂದ ೨೮-೦೨-೧೯೬೭ ರವರೆಗೆ ವಿಧಾನಸಭೆಯ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಹಿರಿಯ ಗಾಂಧಿವಾದಿ, ಸ್ವಾತಂತ್ರ್ಯ ಹೋರಾಟಗಾರರು ಆಗಿದ್ದು ಶ್ರೀಯುತರು ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ಸಂಸ್ಥಾಪಕರಾಗಿ, ರೆಡ್ಡಿ ಕೋ-ಆಪರೇಟಿವ್ ಬ್ಯಾಂಕ್ ಮತ್ತು ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ ೩೦-೦೫-೨೦೦೦ ದಂದು ನಿಧನ ಹೊಂದಿದರು.

೫. ಶ್ರೀ ಬಿ.ಎಸ್. ಚಂದ್ರಶೇಖರಯ್ಯ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಎಸ್ ಚಂದ್ರಶೇಖರಯ್ಯ ಅವರು ೧೯೨೭ನೇ ಫೆಬ್ರವರಿ ೧೫ ರಂದು ತಿಪಟೂರಿನಲ್ಲಿ ಜನಿಸಿದರು. ವೃತ್ತಿಯಲ್ಲಿ ವರ್ತಕರಾಗಿದ್ದು ಹಲವಾರು ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿಗೆ ದುಡಿದಿದ್ದರು. ಸಾರ್ವಜನಿಕ ಸೇವೆಯಲ್ಲಿ ಹೆಚ್ಚು ಆಸಕ್ತಿಯುಳ್ಳವರಾಗಿದ್ದರು.

ಶ್ರೀಯುತರು ೧೯೮೫ರಲ್ಲಿ ೮ನೇ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ತಿಪಟೂರು ಕ್ಷೇತ್ರದಿಂದ ಆರಿಸಿ ಬಂದಿದ್ದರು.

ಶ್ರೀಯುತರು ದಿನಾಂಕ ೨೫-೦೫-೨೦೦೦ ದಂದು ನಿಧನ ಹೊಂದಿದರು.

೬. ಶ್ರೀ ಪಿ.ಬಿ. ಓಂಕಾರಮೂರ್ತಿ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಪಿ. ಬಿ. ಓಂಕಾರಮೂರ್ತಿ ಅವರು ೧೬ನೇ ನವೆಂಬರ್ ೧೯೨೪ ರಂದು ಜನಿಸಿದರು. ವೃತ್ತಿಯಲ್ಲಿ ಕೃಷಿಕರಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿ ಜೈಲುವಾಸವನ್ನು ಅನುಭವಿಸಿದ್ದ ಶ್ರೀಯುತರು ಚಿಕ್ಕಮಗಳೂರು ಜಿಲ್ಲಾ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದು, ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ಆಸಕ್ತರಾಗಿದ್ದರು.

೧೯೮೫ ರಲ್ಲಿ ಎಂಟನೇ ವಿಧಾನಸಭೆಗೆ ಕಡೂರು ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ ೦೯ - ೦೬ - ೨೦೦೦ ದಂದು ನಿಧನ ಹೊಂದಿದರು.

೭. ಶ್ರೀ ಆರ್. ಹೆಚ್. ಗೂಡವಾಲ

ಶತಾಯುಷಿ ಶ್ರೀ ಆರ್.ಹೆಚ್. ಗೂಡವಾಲ ಅವರು ಕರ್ನಾಟಕ ರಾಜ್ಯದ ಅಲ್ಪ ಸಂಖ್ಯಾತರ ಆಯೋಗದ ಪ್ರಥಮ ಅಧ್ಯಕ್ಷರಾಗಿ ಅವರು ಸಲ್ಲಿಸಿದ ಸೇವೆ ಅನುಪಮ. ಕರ್ನಾಟಕ ರಾಜ್ಯ ವಕ್ಫ್ ಬೋರ್ಡಿನ ಸದಸ್ಯರಾಗಿ, ರಾಜ್ಯ ಸಾರಿಗೆ ನಿಗಮದ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದ ಶ್ರೀಯುತರು ೧೯೪೭ ರಿಂದ ೫೨ ರವರೆಗೆ ಬಾಂಬೆ ವಿಧಾನಸಭೆಯ ಸದಸ್ಯರಾಗಿದ್ದರು. ಶ್ರೀಯುತರು ಹುಬ್ಬಳ್ಳಿ ಮುನಿಸಿಪಲ್ ಕೌನ್ಸಿಲ್ ಸದಸ್ಯರಾಗಿ, ಮುನಿಸಿಪಲ್ ಸ್ಕೂಲ್ ಬೋರ್ಡ್ ಅಧ್ಯಕ್ಷರಾಗಿ ಗಣನೀಯ ಸೇವೆ ಸಲ್ಲಿಸಿ ಹೆಸರುವಾಸಿಯಾಗಿದ್ದರು.

ಶ್ರೀಯುತರು ದಿನಾಂಕ ೧೬-೦೬-೨೦೦೦ ದಂದು ನಿಧನ ಹೊಂದಿದರು.

೮. ಶ್ರೀ ಬಸನಗೌಡ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಸನಗೌಡ ಅವರು ಲಿಂಗಸಗೂರು ತಾಲ್ಲೂಕು ಸಹಕಾರಿ ಬ್ಯಾಂಕಿನ ನಿರ್ದೇಶಕರಾಗಿ, ಟಿ.ಎ.ಸಿ.ಎ. ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದು, ಹರಿಜನರಲ್ಲಿ ವ್ಯಾಪಕವಾಗಿದ್ದ ಬಸವಿ ಪದ್ಧತಿಯ ನಿರ್ಮೂಲನಕ್ಕೆ ಅಪಾರವಾಗಿ ಶ್ರಮಿಸಿದ್ದರು.

ಹೈದರಾಬಾದ್ ವಿಧಾನಸಭೆಯ ಸದಸ್ಯರಾಗಿದ್ದ ಶ್ರೀಯುತರು ೧೯೫೬ ರಿಂದ ೫೭ ಹಾಗೂ ೧೯೫೭ ರಿಂದ ೬೨ ರವರೆಗೆ ಮೈಸೂರು ವಿಧಾನಸಭೆಗೆ ಲಿಂಗಸಗೂರು ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ ೦೧-೦೭-೨೦೦೦ ದಂದು ನಿಧನ ಹೊಂದಿದರು.

೯. ಶ್ರೀ ಬಿ. ಶಿವಣ್ಣ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ. ಶಿವಣ್ಣ ಅವರು ೧೯೩೯ನೇ ಫೆಬ್ರವರಿ ೧೮ ರಂದು ರಾಯಚೂರು ಜಿಲ್ಲೆ ದೇವದುರ್ಗದಲ್ಲಿ ಜನಿಸಿದ್ದರು. ಬಿ.ಎ; ಎಲ್‌ಎಲ್‌ಬಿ ಹಾಗೂ ಎಲ್‌ಎಲ್‌ಎಂ ಪದವಿಗಳನ್ನು ಹೊಂದಿ ವಕೀಲರಾಗಿ ವೃತ್ತಿಯನ್ನು ಆರಂಭಿಸಿ, ಗುಲ್ಬರ್ಗಾದಲ್ಲಿರುವ ಕಾನೂನು ಕಾಲೇಜಿನ ಪ್ರಾಧ್ಯಾಪಕರಾಗಿಯೂ ಕಾರ್ಯನಿರ್ವಹಿಸಿದ್ದು ತುಳಿತಕ್ಕೊಳಗಾದ ಜನರ ಅಭಿವೃದ್ಧಿಗೆ ದುಡಿಯುತ್ತಿದ್ದರು. ಶ್ರೀಯುತರು ಐದನೇ , ಆರನೇ, ಏಳನೇ ಹಾಗೂ ಒಂಭತ್ತನೇ ವಿಧಾನಸಭೆಗೆ ಕಲ್ಮಲ ಹಾಗೂ ದೇವದುರ್ಗ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು.

ಅವಿವಾಹಿತರಾಗಿದ್ದ ಶ್ರೀಯುತರು ಶ್ರೀ ವೀರೇದ್ರ ಪಾಟೀಲ್, ಶ್ರೀ ಎಸ್. ಬಂಗಾರಪ್ಪ ಹಾಗೂ ಶ್ರೀ ಎಂ. ವೀರಪ್ಪ ಮೊಯ್ಲಿ ಅವರ ಸಚಿವ ಸಂಪುಟದಲ್ಲಿ ಹಣಕಾಸು ರಾಜ್ಯ ಸಚಿವರಾಗಿ, ಸಮಾಜ ಕಲ್ಯಾಣ ಸಚಿವರಾಗಿ, ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂ ವಿಜ್ಞಾನ ಹಾಗೂ ಕಾನೂನು ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದರು.

ಶ್ರೀಯುತರು ದಿನಾಂಕ ೧೦-೦೭-೨೦೦೦ದಂದು ನಿಧನ ಹೊಂದಿದರು.

೧೦. ಶ್ರೀ ಶಂಕರಪ್ಪ ಸುಗುರಪ್ಪ ಕವಿಶೆಟ್ಟಿ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಶಂಕರಪ್ಪ ಸುಗುರಪ್ಪ ಕವಿಶೆಟ್ಟಿ ಅವರು ೧೯೧೭ನೇ ಫೆಬ್ರವರಿ ೨೫ ರಂದು ಇಳ್ಕಲ್‌ನಲ್ಲಿ ಜನಿಸಿದರು. ವೃತ್ತಿಯಲ್ಲಿ ವ್ಯಾಪಾರಸ್ಥರಾಗಿದ್ದರು. ಸಮಾಜ ಸೇವಕರಾಗಿದ್ದು ಇವರು ಇಳ್ಕಲ್ ಟೌನ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. ೧೯೪೧ ರಲ್ಲಿ ನಡೆದ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಸೆರೆವಾಸ ಅನುಭವಿಸಿದ್ದ ಇವರಿಗೆ ೫೦ನೇ ಸುವರ್ಣ ಸ್ವಾತಂತ್ರ್ಯ ವರ್ಷದಲ್ಲಿ ಸರ್ಕಾರ ಗೌರವಿಸಿತ್ತು. ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ೧೯೭೮ ರಲ್ಲಿ ಹುನಗುಂದ ವಿಧಾನಸಭಾ ಕ್ಷೇತ್ರದಿಂದ ಆರನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀ ಯುತರು ದಿನಾಂಕ ೨-೮-೨೦೦೦ ದಂದು ನಿಧನ ಹೊಂದಿದರು.

೧೧. ಶ್ರೀ ಎಸ್. ಇಸಾಮಿಯಾ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಸ್. ಇಸಾಮಿಯಾ ಅವರು ೧೯೫೭ ರವರೆಗೆ ದೊಮ್ಮಘಟ್ಟ ಮಂಡಲ ಪಂಚಾಯಿತ್ತಿಯ ಅಧ್ಯಕ್ಷ ಹಾಗೂ ಪ್ರಧಾನರಾಗಿದ್ದರು. ೧೯೮೯ರಲ್ಲಿ ಭದ್ರಾವತಿಯಿಂದ ಒಂಭತ್ತನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ ೦೯-೦೮-೨೦೦೦ ದಂದು ನಿಧನ ಹೊಂದಿದರು.

೧೨. ಶ್ರೀ ಕೆ.ಎಸ್.ಕಾಳಮರಿಗೌಡ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ.ಎಸ್. ಕಾಳಮರಿಗೌಡ ಅವರು ೧೯೩೭ನೇ ಇಸವಿ ಅಕ್ಟೋಬರ್ ೨೦ ರಂದು ಕಿತ್ತೂರಿನಲ್ಲಿ ಜನಿಸಿದ್ದು ಕೃಷಿಕರಾಗಿದ್ದರು. ಸಮಜ ಸೇವಕರಾಗಿದ್ದ ಶ್ರೀಯುತರು ಆರು, ಏಳು ಹಾಗೂ ಒಂಭತ್ತನೇ ವಿಧಾನಸಭೆಯ ಸದಸ್ಯರಾಗಿ ಪಿರಿಯಾಪಟ್ಟಣ ಕ್ಷೇತ್ರದಿಂದ ಆರಿಸಿ ಬಂದಿದ್ದರು.

ಶ್ರೀಯುತರು ದಿನಾಂಕ ೨೭-೦೮-೨೦೦೦ ದಂದು ನಿಧನ ಹೊಂದಿದರು.

೧೩. ಶ್ರೀ ಆರ್. ಅನಂತರಾಮನ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಆರ್. ಅನಂತರಾಮನ್ ಅವರು ೧೯೫೨ ರಲ್ಲಿ ಬೆಂಗಳೂರು ನಗರಪಾಲಿಕೆಯ ಮೇಯರ್ ಆಗಿ ಕಾರ್ಯನಿರ್ವಹಿಸಿ, ೧೯೫೨ ರಿಂದ ೫೭ ರವರೆಗೆ ಬಸವನಗುಡಿ ಕ್ಷೇತ್ರದಿಂದ ವಿಧಾನಸಭೆಯ ಸದಸ್ಯರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ ೦೩-೦೯-೨೦೦೦ ದಂದು ನಿಧನ ಹೊಂದಿದರು.

೧೪. ಶ್ರೀ ಎಂ.ಎಸ್. ಕೃಷ್ಣನ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ.ಎಸ್. ಕೃಷ್ಣನ್ ಅವರು ೧೯೨೪ನೇ ಜನವರಿ ೬ ರಂದು ಜನಿಸಿದ್ದು, ಕಾರ್ಮಿಕ ಸಂಘಟನೆಯಲ್ಲಿ ನಿರತರಾಗಿದ್ದವರು. ಭಾರತೀಯ ಕಮ್ಯೂನಿಸ್ಟ್ ಪಕ್ಷದ ಹಿರಿಯ ಧುರೀಣರಾಗಿದ್ದ ಶ್ರೀಯುತರು ಕಾರ್ಮಿಕ ಸಮಸ್ಯೆಗಳ ಪರಿಹಾರಕ್ಕೆ ಹಲವರು ರಾಷ್ಟ್ರಗಳಿಗೆ ಭೇಟಿ ನೀಡಿದ್ದು, ಅಂತರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಹೆಚ್ಚು ತಿಳಿದವರಾಗಿದ್ದರು. ಶ್ರಮಿಕವರ್ಗದ ಏಳಿಗೆಗಾಗಿ ಐದು ದಶಕಗಳಿಗೂ ಹೆಚ್ಚು ದುಡಿದಿದ್ದ ಶ್ರೀಯುತರು, ನಾಲ್ಕು, ಐದು, ಏಳು ಹಾಗೂ ಎಂಟನೇ ವಿಧಾನಸಭೆಗೆ ಮಲ್ಲೇಶ್ವರಂ ಹಾಗೂ ರಾಜಾಜಿನಗರ ಕ್ಷೇತ್ರಗಳಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ ೫-೯-೨೦೦೦ ದಂದು ನಿಧನ ಹೊಂದಿದರು.

೧೫. ಶ್ರೀ ಡಿ.ಎಸ್. ನಾಡಕರ್ಣಿ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಡಿ.ಎಸ್. ನಾಡಕರ್ಣಿ ಅವರು ೨೪ನೇ ಜನವರಿ ೧೯೧೦ ರಂದು ಜನಿಸಿದ್ದು ಸಮಾಜ ಸೇವಕರಾಗಿದ್ದರು. ಅಂಕೋಲ ತಾಲ್ಲೂಕು ಬೋರ್ಡಿನ ಅಧ್ಯಕ್ಷರಾಗಿ, ಸಹಕಾರಿ ಹಂಚಿನ ಕಾರ್ಖಾನೆಯ ನಿರ್ದೇಶಕರಾಗಿ, ಸಣ್ಣೇಕಟ್ಟ ಸಹಕಾರಿ ಸಂಘದ ಸದಸ್ಯರಾಗಿ, ಕೆನರಾ ವೆಲ್‌ಫೇರ್ ಟ್ರಸ್ಟಿನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಗಾಂಧೀಜಿಯವರ ಕರೆಯ ಮೇರೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಂಡಿದ್ದರು. ಉತ್ತರ ಕರ್ನಾಟಕದಲ್ಲಿ ರೈತ ಚಳುವಳಿಯನ್ನು ಸಂಘಟಿಸಿದ್ದ ಶ್ರೀಯುತರು ಕೆನರಾ ವೆಲ್‌ಫೇರ್ ಟ್ರಸ್ಟಿನ ಮುಖಾಂತರ ಹಲವಾರು ಶೈಕ್ಷಣಿಕ ಸಂಸ್ಥೆಗಳನ್ನು ಪ್ರಾರಂಭಿಸಿದ್ದರು. ನಾಲ್ಕನೇ ಅಂಕೋಲ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ ೧೮-೦೯-೨೦೦೦ ದಂದು ನಿಧನ ಹೊಂದಿದರು.

೧೬. ಶ್ರೀ ಡಿ. ಮುನಿಚಿನ್ನಪ್ಪ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಡಿ. ಮುನಿಚಿನ್ನಪ್ಪ ಅವರು ೧೯೧೯ ರಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರು ಹಾಗೂ ವಾಣಿಜ್ಯೋದ್ಯಮಿಗಳು. ಹದಿನೇಂಟನೇ ವಯಸ್ಸಿನಲ್ಲಿಯೇ ಸಾರ್ವಜನಿಕ ಜೀವನಕ್ಕೆ ಬಂದು ಇವರು ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಗ್ರೂಪ್ ಪಂಚಾಯ್ತಿಯ ಅಧ್ಯಕ್ಷರಾಗಿದ್ದು . ಬೆಂಗಳೂರು ದಕ್ಷಿಣ ತಾಲ್ಲೂಕು ಪರಿಶಿಷ್ಟ ಜಾತಿ ಸಲಹಾ ಸಮಿತಿಗೆ ಸರ್ಕಾರದಿಂದ ನೇಮಕಗೊಂಡಿದ್ದ ಇವರು ಅದರ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ತಾಲ್ಲೂಕು ಬೋರ್ಡಿನ ಸದಸ್ಯರಾಗಿ ಹಾಗೂ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿ ಹಲವಾರು

ಜನಪರ ಕಾರ್ಯಗಳನ್ನು ಕೈಗೊಂಡಿದ್ದರು. ಮೂರನೇ ವಿಧಾನಸಭೆಯ ಸದಸ್ಯರಾಗಿದ್ದ ಶ್ರೀಯುತರು ೧೯೬೮ ರಿಂದ ೭೪ ರವರೆಗೆ ವಿಧಾನಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ ೧೯-೦೯-೨೦೦೦ ದಂದು ನಿಧನ ಹೊಂದಿದರು.

೧೭. ಶ್ರೀ ಎನ್. ಜಯಣ್ಣ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದು ಶ್ರೀ ಎನ್. ಜಯಣ್ಣ ಅವರು ೧೯೩೦ನೇ ಇಸವಿ ಮಾರ್ಚ್ ೧ ರಂದು ಚಳ್ಳಕೆರೆಯಲ್ಲಿ ಜನಿಸಿದ್ದು, ವೃತ್ತಿಯಲ್ಲಿ ವಾಣಿಜ್ಯೋದ್ಯಮಿಗಳಾಗಿದ್ದರು. ಹಲವಾರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದ ಶ್ರೀಯುತರು ಸಮಾಜ ಸೇವಕರು. ಆರನೇ ಹಾಗೂ ಒಂಭತ್ತನೇ ವಿಧಾನಸಭೆಯ ಸದಸ್ಯರಾಗಿ ಚಳ್ಳಕೆರೆ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು. ದಿನಾಂಕ ೨೧-೦೧-೯೩ ರಿಂದ ೧೭-೧೨-೯೪ ರವರೆಗೆ ವಿಧಾನಸಭೆಯಲ್ಲಿ ಸರ್ಕಾರಿ ಮುಖ್ಯ ಸಚೇತಕರಾಗಿಯೂ ಕಾರ್ಯನಿರ್ವಹಿಸಿದ್ದರು.

ಶ್ರೀಯುತರು ದಿನಾಂಕ ೧-೧೦-೨೦೦೦ ದಂದು ನಿಧನ ಹೊಂದಿದರು.

೧೮. ಶ್ರೀಮತಿ ಡಿ. ಜಿ. ಹೇಮಾವತಿ

ವಿಧಾನಸಭಾ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಡಿ. ಜಿ. ಹೇಮಾವತಿ ಅವರು ೧೯೫೪ ನೇ ಇಸವಿ ಜೂನ್ ೧೪ ರಂದು ಜನಿಸಿದ್ದು ಮಹಿಳಾ ಉದ್ಯಮಿಯಾಗಿದ್ದರು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನರ ಅಭಿವೃದ್ಧಿಗೆ ದುಡಿಯುತ್ತಿರುವ ಇವರು ಶಾಂತಿನಗರ ವಿಧಾನಸಭಾ ಕ್ಷೇತ್ರದಿಂದ ಹತ್ತನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು ಹಾಗೂ ಕಿಯೋನಿಕ್ಸ್ ಸಂಸ್ಥೆಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಶ್ರೀಮತಿ ಹೇಮಾವತಿ ಅವರು ದಿನಾಂಕ ೩-೧೦-೨೦೦೦ ದಂದು ನಿಧನ ಹೊಂದಿದರು.

೧೯. ಶ್ರೀ ಟಿ. ಜಿ. ಸತ್ಯನಾರಾಯಣ

ವಿಧಾನಸಭಾ ಮಾಜಿ ಸದಸ್ಯರಾಗಿದ್ದ ಶ್ರೀ ಟಿ. ಜಿ. ಸತ್ಯನಾರಾಯಣ ಅವರು ೧೯೧೫ನೇ ಇಸವಿ ಜುಲೈ ೧ರಂದು ಜನಿಸಿ ಉದ್ಯಮಿಯಾಗಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಶ್ರೀಯುತರು ೧೯೫೫ ರಿಂದ ೧೯೬೦ ರವರೆಗೆ ಬಳ್ಳಾರಿ ನಗರಸಭೆಯ ಅಧ್ಯಕ್ಷರಾಗಿ, ಬಳ್ಳಾರಿ ಜಿಲ್ಲಾ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷರಾಗಿ, ಜಿಲ್ಲಾ ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದು, ಮೂರನೇ ವಿಧಾನಸಭೆಗೆ ಬಳ್ಳಾರಿ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ ೯-೧೦-೨೦೦೦ ದಂದು ನಿಧನ ಹೊಂದಿದರು.

೨೦. ಶ್ರೀ ಶರಣಪ್ಪ ನಾಗಪ್ಪ ಕಲ್ಬುರ್ಗಿ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಶರಣಪ್ಪ ನಾಗಪ್ಪ, ಕಲ್ಬುರ್ಗಿ ಗುಲ್ಬರ್ಗ ಜಿಲ್ಲೆ ಯಾದಗೀರ್ ವಿಧಾನಸಭಾ ಕ್ಷೇತ್ರದಿಂದ ೬ನೇ ವಿಧಾನಸಭೆಗೆ ಆಯ್ಕೆಯಾಗಿ ೧೯೭೮ ಳಿಂದ ೧೯೮೩ ರವರೆಗೆ ಸೇವೆ ಸಲ್ಲಿಸಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಇವರು ಮೀನುಗಾರಿಕೆ ಸಹಕಾರ ಸಂಘದ

ಅಧ್ಯಕ್ಷರಾಗಿ ಮತ್ತು ಎ.ಪಿ.ಎಂ.ಸಿ. ಹಾಗೂ ಟಿ.ಎ.ಎಂ.ಪಿ.ಸಿ. ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಬಡ ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್‌ಗಳನ್ನು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟಿರುತ್ತಾರೆ.

ಶ್ರೀಯುತರು ದಿನಾಂಕ ೧೯-೧೦-೨೦೦೦ ದಂದು ಸೊಲ್ಲಾಪುರ ಆಸ್ಪತ್ರೆಯಲ್ಲಿ ನಿಧನರಾದರು.

+ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಸನ್ಮಾನ್ಯ ಅಧ್ಯಕ್ಷರೆ, ಈ ಸದನವನ್ನು ಶ್ರೀಮಂತಗೊಳಿಸಿದಂತಹ ಹಲವಾರು ನಾಯಕರು ನಮ್ಮನ್ನು ಬಿಟ್ಟು ಅಗಲಿದ್ದಾರೆ. ಅವರು ರಾಜ್ಯಕ್ಕೆ ಮಾಡಿದಂತಹ ಸೇವೆಯನ್ನು ಸ್ಮರಿಸಿ ಸದನದ ಶ್ರದ್ಧಾಂಜಲಿಗಳನ್ನು ಅವರಿಗೆ ಅರ್ಪಿಸುವ ಈ ಗೊತ್ತುವಳಿಯನ್ನು ನಾನು ಸಮರ್ಥನೆ ಮಾಡಿ ಮೃತರ ಗುಣಗಾನ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರು ಸಾರ್ವಜನಿಕ ಬದುಕಿನಲ್ಲಿ ಹೇಗೆ ತನ್ನ ಮುದ್ರೆಯನ್ನು ಒತ್ತಿಬಿಡಬೇಕು ಎನ್ನುವುದಕ್ಕೆ ಒಂದು ಜ್ವಲಂತ ನಿದರ್ಶನವಾಗಿದ್ದರು. ಅವರನ್ನು ನಾನು ಬಹಳ ವರ್ಷಗಳಿಂದ ನೋಡಿದ್ದೇನೆ, ಹಾಗೆಯೇ ಅವರನ್ನು ನೋಡುವ ಸೌಭಾಗ್ಯ ನನ್ನದಾಗಿತ್ತು. ಅವರ ಬಗ್ಗೆ ಹಲವಾರು ವಿಚಾರಗಳನ್ನು ನಾನು ರಾಜಕಾರಣಕ್ಕೆ ಬರುವ ಮೊದಲೇ ಅವರು ಸ್ವಾತಂತ್ರ್ಯ ಸೇನಾನಿಯಾಗಿ, ಹೇಗೆ ಹಿಂದಿನ ಹಳೆಯ ಮೈಸೂರು ರಾಜ್ಯದಲ್ಲಿ ಅತ್ಯಂತ ಪ್ರತಿಷ್ಠಿತ ಮುಖಂಡರಲ್ಲಿ ಒಬ್ಬರಾಗಿದ್ದರು ಎನ್ನತಕ್ಕಂಥಾದ್ದನ್ನು ನಾವು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕಾಲದಲ್ಲಿ ಅವರ ಬಗ್ಗೆ ತಿಳಿದುಕೊಂಡಿದ್ದೇನೆ. ಕರ್ನಾಟಕದ ಏಕೀಕರಣ ಇವತ್ತು ಆಗಿರಬೇಕಾದರೆ ಅದಕ್ಕೆ ಹಲವಾರು ಧುರೀಣರ ಕೊಡುಗೆ ಇದ್ದರೂ ಕೂಡ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರು ಆ ಏಕೀಕರಣಕ್ಕೆ ಮಾಡಿದಂತಹ ಪ್ರಾಮಾಣಿಕ ಪ್ರಯತ್ನದ ಫಲವಾಗಿ ಇಂದು ಸದನದಲ್ಲಿ ಏಕೀಕೃತ ಕರ್ನಾಟಕ ಪ್ರತಿನಿಸಿಧಿಗಳಾಗಿ ನಾವೆಲ್ಲರೂ ಕುಳಿತಿದ್ದೇವೆ ಎನ್ನತಕ್ಕಂಥಾದ್ದನ್ನು ನಾವು ಸ್ಮರಿಸಿಕೊಳ್ಳಬೇಕಾಗಿದೆ. ಶ್ರೀ ಎಸ್. ನಿಜಲಿಂಗಪ್ಪನವರು, ಶ್ರೀ ಕೆಂಗಲ್ ಹನುಮಂತಯ್ಯನವರು, ಶ್ರೀ ಸಾಹುಕಾರ ಚೆನ್ನಯ್ಯನವರು, ಈ ಮೂರು ಜನ ೧೯೫೫-೫೬ನೇ ಇಸವಿಯಲ್ಲಿ ಹಳೆಯ ಮೈಸೂರಿನಲ್ಲಿದ್ದಂತಹ ಪ್ರತಿರೋಧವನ್ನು ಜಯಿಸಿ, ಈ ಏಕೀಕರಣವನ್ನು ಸಾಧನೆ ಮಾಡಿ ಬಿಟ್ಟುಹೋದ ಪುಣ್ಯಾತ್ಮ ನಮ್ಮ ಸಿದ್ದವನಹಳ್ಳಿ ನಿಜಲಿಂಗಪ್ಪನವರು. ದೇಶಭಕ್ತಿ, ಗಾಂಧಿ ತತ್ವವನ್ನು ಅನುಷ್ಠಾನ ಮಾಡುವ ಬಗ್ಗೆ ಅವರಿಗೆ ಇದ್ದಂತಹ ನಿಷ್ಠೂರವಾದ ವಿಶ್ವಾಸ ಇವು ನಾವು ಅವರಲ್ಲಿ ನೋಡಬಹುದಾದಂತಹ ಗುಣಗಳಾಗಿದ್ದವು. ೧೯೨೪ನೇ ಇಸವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮ್ಮೇಳನ ಬೆಳಗಂನಲ್ಲಿ ನಡೆಯಿತು. ಈ ಒಂದು ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮಗಾಂಧೀಜಿಯವರು ಅಧ್ಯಕ್ಷರಾಗಿ ರಾರಾಜಿಸಿದರು. ಆ ಸಮಯದಲ್ಲಿ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರು ಕಾಂಗ್ರೆಸ್‌ಗೆ ಸೇರುವುದರ ಮೂಲಕ ಕಾಂಗ್ರೆಸ್‌ನಲ್ಲಿ ತಮ್ಮನ್ನು ತಾವೇ ಅರ್ಪಿಸಿಕೊಂಡರು. ತತ್ವನಿಷ್ಠೆಗೆ ಮತ್ತು ತಾವು ನಂಬಿದಂತಹ ಮೌಲ್ಯಗಳಿಗೆ ಯಾವತ್ತು ಕುಂದುಬಾರದ ಹಾಗೆ ನಿಜಲಿಂಗಪ್ಪನವರು ನಡೆದುಕೊಂಡರು ಎನ್ನತಕ್ಕಂತಹದ್ದನ್ನು ನಾವು ಬಹಳ ವಿಶ್ವಾಸದಿಂದ ಸ್ಮರಿಸಿಕೊಳ್ಳಬೇಕಾಗಿದೆ. ಇಂತಹ ಮೌಲ್ಯಗಳನ್ನು ಅವರು ಬದಿಗಿಟ್ಟು ಕೆಲವು ಕಾಂಪ್ರಮೈಸಸ್‌ನ್ನು ತಮ್ಮ ಜೀವನ ದಲ್ಲಿ ಮಾಡಿಕೊಳ್ಳತಕ್ಕಂತಹ ಮನೋಭಾವನೆಯನ್ನು ಅವರು ತೋರಿಸಿದ್ದರೆ, ಅವರು ಇನ್ನು ಏನೇನು ಆಗುತಿದ್ದರು ಎನ್ನತಕ್ಕಂಥಾದ್ದು ನಮೆಲ್ಲರಿಗೂ ಗೊತ್ತಿರತಕ್ಕಂತಹ ವಿಚಾರ. ಆದರೆ ಅವುಗಳೆಲ್ಲವೂ ಕೂಡ ಶ್ರೀಯುತರು ನಿಜಲಿಂಗಪ್ಪನವರು ದೃಷ್ಟಿಯಲ್ಲಿ ಗೌಣವಾದದ್ದು. ಅವರ ತತ್ವನಿಷ್ಠೆ ಜೀವನ ಮೌಲ್ಯಗಳು ಅವರನ್ನು ಜೀವನದ ಕೊನೆಯವರೆಗೂ ಕೂಡ ಒಂದು ದಾರಿಯಲ್ಲಿ ತೆಗೆದುಕೊಂಡು ಹೋದವು. ಶ್ರೀಯುತರು

ಸುಂದರವಾದ ಕರ್ನಾಟಕವನ್ನು ಕಟ್ಟಬೇಕೆಂದು ಹೇಳುತ್ತಿದ್ದರು. ನಿಸರ್ಗದ ಮೇಲೆ ಬಹಳ ಹೆಚ್ಚಿನ ಅಭಿಮಾನವನ್ನು ಇಟ್ಟಿದ್ದರು; ಆಕಾಶ ಎಷ್ಟು ಸುಂದರವಾಗಿದೆ, ಅರಣ್ಯ ಎಷ್ಟು ಸುಂದರವಾಗಿದೆ ಹಾಗೆಯೇ ನಕ್ಷತ್ರಗಳು ಎಷ್ಟು ಸುಂದರವಾಗಿವೆ, ನಾನು ಬೇಗ ನನ್ನ ಜೀವನದ ಕೊನೆಯನ್ನು ನೋಡುತ್ತಿಲ್ಲ. "I love to live. I would like to live as long as I can" ಎಂದು ಈ ರೀತಿಯಾಗಿ ಎಷ್ಟು ಸಾರಿ ನನ್ನ ಹತ್ತಿರ ಹೇಳುತ್ತಿದ್ದರು. ನಾನು ಈಗ ಈ ರಾಜ್ಯದ ೧೬ನೇ ಮುಖ್ಯಮಂತ್ರಿಯಾಗಿದ್ದೇನೆ. ಶ್ರೀಯುತರು ಯಾವ ಭಾಗದಿಂದ ಬಂದಿದ್ದರೋ ಮತ್ತೆ ಅಲ್ಲಿಗೇ ಹೋಗಬೇಕು ಎನ್ನತಕ್ಕಂತಹ ಕಾತುರತೆ ಅವರಲ್ಲಿ ನಾವು ಕಂಡಂತಹ ಒಂದು ವಿಶೇಷವಾದ ಗುಣವಾಗಿತ್ತು. ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳು, ಮಾಜಿ ಮಂತ್ರಿಗಳು ಮುಂದೆ ಮಂತ್ರಿಗಳಾಗುವವರೆಲ್ಲರೂ ಕೂಡ ಇಲ್ಲೇ ಸೆಟಲ್ ಆಗಿದ್ದೇವೆ. ಆದರೆ ನಿಜಲಿಂಗಪ್ಪನವರು ಮಾತ್ರ, ನಾನು ಚಿತ್ರದುರ್ಗದಿಂದ ಬಂದೆ, ಮತ್ತೆ ನಾನು ಚಿತ್ರದುರ್ಗಕ್ಕೆ ಹೋಗುತ್ತೇನೆ ಎನ್ನುವ ರೀತಿಯಲ್ಲಿ ನಡೆದುಕೊಂಡರು. ನಿಮ್ಮ ಅವಶ್ಯಕತೆ ಬೆಂಗಳೂರಿನಲ್ಲಿ ಬಹಳಷ್ಟು ಇದೆ, ನಾವು ನಿಮ್ಮನ್ನು ಹುಡುಕಿಕೊಂಡು ಚಿತ್ರದುರ್ಗಕ್ಕೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ, ಆದುದರಿಂದ ತಾವು ಬೆಂಗಳೂರಿನಲ್ಲೇ ಸೆಟಲ್ ಆಗಬೇಕೆಂದು ಎಷ್ಟೋ ಸಾರಿ ಹೇಳಿದಾಗ ಆಗುವುದಿಲ್ಲವೆಂದು ಹೇಳಿದರು. ಏಕೆಂದರೆ, ಇದು ನನ್ನ ನಂಬಿಕೆ, ಇದು ನನ್ನ ತತ್ವ, ನಾನು ಹುಟ್ಟಿದ ಭೂಮಿಗೆ ತೋರಿಸುತ್ತಾ ಇರತಕ್ಕಂತಹ ನಿಷ್ಠೆ, ನಾನು ಬೆಂಗಳೂರಿಗೆ ಬೇಕು ಎಂದರೆ ಬರುತ್ತೇನೆ, ಆದರೆ ನಾನು ಹೋಗಬೇಕಾಗಿರುವುದು ಚಿತ್ರದುರ್ಗಕ್ಕೆ ಎಂದು ಹೇಳಿದರು. ಎರಡು ವಿಚಾರದಲ್ಲಿ ಶ್ರೀಯುತ ನಿಜಲಿಂಗಪ್ಪನವರು ನಮ್ಮ ನಾಡನ್ನು ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಶ್ರೀಮಂತಗೊಳಿಸಿದರು. ಮೊದಲನೆಯದಾಗಿ ನೀರಾವರಿ ಯೋಜನೆಗಳಿಗೆ ಭದ್ರವಾದ ಬುನಾದಿಯನ್ನು ಹಾಕಿದರು. ಕನ್ನಂಬಾಡಿ ಕಟ್ಟೆಯನ್ನು ಕಟ್ಟಿ ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಮತ್ತು ದಿವಾನ್‌ರಾಗಿದ್ದಂತಹ ಶ್ರೀ ವಿಶ್ವೇಶ್ವರಯ್ಯನವರು ಇವತ್ತು ಹೇಗೆ ಅಜರಾಮರರಾಗಿದ್ದಾರೆಯೋ ಅದೇ ರೀತಿಯಲ್ಲೆ ೧೯೬೦ನೇ ಇಸವಿಯಲ್ಲಿ ಪ್ರಾರಂಭವಾದ ಕೃಷ್ಣ ಮೇಲ್ದಂಡೆ ಯೋಜನೆಯ ಬಗ್ಗೆ ವಿಶೇಷವಾದಂತಹ ಆಸಕ್ತಿಯಿಂದ ಉತ್ತರಭಾಗದಲ್ಲಿದ್ದಂತಹ ಬೆಂಗಾಡಿನ ಪ್ರದೇಶಗಳಿಗೆ ನೀರನ್ನು ಉಣಿಸಬೇಕು ಎನ್ನತಕ್ಕಂತಹ ಒಂದು ಪ್ರತಿಜ್ಞೆಯ ದಿಕ್ಕಿನಲ್ಲಿ ಈ ನಾಡನ್ನು ನಡೆಸಿಕೊಂಡು ಬಂದರು. ಇವತ್ತು ಆಲಮಟ್ಟಿ ಜಲಾಶಯದಲ್ಲಿ ೫೧೯ ಮೀಟರ್ ನೀರನ್ನು ಶೇಖರಿಸಿ ಇಡಬೇಕಾದರೆ ಅದು ನಿಜಲಿಂಗಪ್ಪನವರು ಮಾಡಿದಂತಹ ಶ್ಲಾಘನೀಯ ಕೆಲಸಗಳಿಗೆ ಜ್ವಲಂತವಾಗಿರತಕ್ಕಂತಹ, ಎದ್ದು ಕಾಣತಕ್ಕಂತಹ ಒಂದು ನಿದರ್ಶನವಾಗಿರುತ್ತದೆ. ಹಾಗೆಯೇ ಅವರು ಎರಡನೆಯ ಆದ್ಯತೆಯನ್ನು ವಿದ್ಯುತ್ ಉತ್ಪಾದನೆಗೆ ಕೊಟ್ಟರು. ಶರಾವತಿ ವಿದ್ಯುತ್ ಉತ್ಪಾದನಾ ವಿಚಾರಗಳಿಗೆ ಚಾಲನೆ ಕೊಟ್ಟಂತಹವರು ಮಾನ್ಯ ಸಿದ್ದವನಹಳ್ಳಿ ನಿಜಲಿಂಗಪ್ಪನವರು. ಆನಂತರ ಕಾಳಿ ವಿದುತ್ ಉತ್ಪಾದನೆಗೂ ಕೂಡ ಅವರು ಚಾಲನೆ ಕೊಟ್ಟರು. ಗ್ರಾಮೀಣ ಪ್ರದೇಶಗಳಿಗೆ ಒಂದು ಕಡೆ ನೀರಾವರಿ ಮತ್ತು ವಿದ್ಯುತ್ ಅವಶ್ಯಕತೆ ಇರುವುದರಿಂದ ಈ ಎರಡು ಕ್ಷೇತ್ರಗಳಿಗೆ ಮಾನ್ಯ ನಿಜಲಿಂಗಪ್ಪನವರು ಏನು ಆದ್ಯತೆಯನ್ನು ಕೊಟ್ಟರೋ ಅದೇ ಆದ್ಯತೆಯನ್ನು ಕೊಡುವುದಕ್ಕೆ ಈ ಸರ್ಕಾರ ಕಟ್ಟಿಬದ್ಧವಾಗಿದೆ, ಈ ದಿಕ್ಕಿನಲ್ಲಿ ಇವತ್ತು ಕೂಡ ನಾವು ಪ್ರಯತ್ನವನ್ನು ಮುಂದುವರಿಸುತ್ತಿದ್ದೇವೆ ಎನ್ನತಕ್ಕಂಥಾದ್ದು ಮಾನ್ಯ ನಿಜಲಿಂಗಪ್ಪನವರ ಆತ್ಮಕ್ಕೆ ಶಾಂತಿಯನ್ನು ತಂದುಕೊಡತಕ್ಕಂತಹ ಬೆಳವಣಿಗೆಯಾಗಿದೆ ಎಂದು ನಾನು ಭಾವನೆ ಮಾಡಿಕೊಳ್ಳುತ್ತೇನೆ. ಸಾರ್ವಜನಿಕ ಜೀವನದಲ್ಲಿ ಹೇಗೆ ಬದುಕಬೇಕು, ಹೇಗೆ ಬಾಳಬೇಕು ಎನ್ನುವುದಕ್ಕೆ ಶ್ರೀಯುತ ನಿಜಲಿಂಗಪ್ಪನವರು ಮಾದರಿಯಾಗಿದ್ದರು.

೨.೩೦ ಪಿ.ಎಂ.

ಅವರ ನಿಷ್ಠೂರ ಆದರೆ ನಿಗರ್ವಿ ನಡವಳಿಕೆ, ಸತ್ಯನಿಷ್ಠೆ ಮತ್ತು ಪ್ರಾಮಾಣಿಕತೆ, ತತ್ವಗಳ ವಿಚಾರದಲ್ಲಿ ರಾಜಿಯಾಗದ ದಿಟ್ಟನಿಲುವು. ಎಲ್ಲಕ್ಕೂ ಮಿಗಿಲಾಗಿರುವುದು ಅವರ ನಾಡನಿಷ್ಠೆ. ಸಾರ್ವಜನಿಕ ಜೀವನದಲ್ಲಿ ಇರುವ ನಮಗೆಲ್ಲರಿಗೂ ಆದರ್ಶಪ್ರಾಯವಾದಂಥ ಜೀವನವನ್ನು ನಡೆಸಿದರು ಮತ್ತು ನಾವು ಅದನ್ನು ಅನುಕರಣೆ ಮಾಡಲಿ ಹಾಗೆಂದು ಹೇಳಿ ನಮ್ಮನ್ನು ಬಿಟ್ಟುಹೋಗಿದ್ದಾರೆ. ಅವರ ಕೊನೆಯ ದಿನಗಳನ್ನು ಸಹ ನಾನು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕಾಗುತ್ತದೆ. ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಅವರನ್ನು ಸೇರಿಸಿದ್ದೆವು. ಚೆನ್ನಾಗಿಯೇ ಇದ್ದರು ಆದರೆ ಅವರ ಕಾಲಿಗೆ ಫ್ರ್ಯಾಕ್ಚರ್ ಆಗಿದ್ದರಿಂದ ಅವರ ಚಲನವಲನಗಳಿಗೆ ಬಹಳ ದೊಡ್ಡ ಆಘಾತ ಉಂಟಾಯಿತು. ಇನ್ನೂ ನಾಲ್ಕು ದಿವಸ ನೀವು ಬೆಂಗಳೂರಿನಲ್ಲೇ ಇದ್ದರೆ ನಿಮ್ಮನ್ನು ಉಳಿಸಿಕೊಳ್ಳವಂಥ ಗೌರವ ನಮ್ಮ ನಾಡಿನ ಎಲ್ಲರದ್ದಾಗುತ್ತದೆ ಎಂದು ನಾನು ಬಹಳವಾಗಿ ಅವರಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೆ. ಆದರೆ ಮಾನ್ಯ ನಿಜಲಿಂಗಪ್ಪ ಅವರು ಒಲ್ಲೆ ಎಂದರು. ಅವರಿಗೆ ಜ್ಞಾಪಕಶಕ್ತಿ ಬಂದಾಗ ನನ್ನನ್ನು ನೋಡಿದ ತಕ್ಷಣ ನನ್ನ ಎರಡೂ ಕೈಗಳನ್ನು ಭದ್ರವಾಗಿ ಹಿಡಿದುಕೊಂಡು 'ದುರ್ಗ, ದುರ್ಗ' ಎಂದು ಹೇಳಿದರು; ನಂತರ 'ನನ್ನನ್ನು ದುರ್ಗಕ್ಕೆ ಕರೆದುಕೊಂಡು ಹೋಗಿ' ಎಂದು ಹೇಳಿದರು. ಅದಕ್ಕೆ ನಾನು ಅವರ ಮಕ್ಕಳು ಮತ್ತು ಅವರ ಸಂಸಾರದವರ ಜೊತೆಯಲ್ಲಿ ಚರ್ಚೆ ಮಾಡಿ, ಆನಂತರ ಅವರ ಕೊನೆಯ ಇಚ್ಛೆ ಏನಿತ್ತು ಅದನ್ನು ನೆರವೇರಿಸತಕ್ಕದ್ದು ನಮ್ಮ ಮೇಲೆ ಬಿದ್ದಿರತಕ್ಕಂಥ ಹೊಣೆಗಾರಿಕೆಯಾಗಿತ್ತು. ಆದ್ದರಿಂದ ಅವರನ್ನು ಚಿತ್ರದುರ್ಗಕ್ಕೆ ಕಳಿಸಿಕೊಟ್ಟು ಅವರ ಕೊನೆಯ ಉಸಿರು ದುರ್ಗದಲ್ಲಿ ಆಗಲಿ ಎಂದು ನಾವು ಒಟ್ಟುಗೂಡಿ ತೀರ್ಮಾನ ಮಾಡಿದೆವು. ಅವರು ಇಲ್ಲಿ (೧೯೬೨ನೇ ಇಸವಿಯಲ್ಲಿ ರಾಜ್ಯದ ಮುಖ್ಯಮಂತ್ರಿಗಳಾಗಿ ಕುಳಿತಿರುತ್ತಿದ್ದ ಸಂದರ್ಭದಲ್ಲಿ ನಾನು ಅಲ್ಲಿ ಕುಳಿತಿರುತ್ತಿದ್ದೆ. ಸಭೆಯೊಳಗೆ ಈಗ ಹೇಗೆ ನೀವು ಹೋರಾಟ ಮಾಡುತ್ತೀರೋ ಹಾಗೆ ಅವರೂ ನಾವು ಹೋರಾಟ ಮಾಡಿದ್ದೆವು. ಅವರಿಗೆ ಅವತ್ತು ನಾನು ಹೇಳಿದ್ದೆ, ಏನೆಂದರೆ ಯಾವತ್ತಾದರೂ ಒಂದು ದಿವಸ ನೀವು ಇಲ್ಲಿ ಬಂದು ಕೊರುತ್ತೀರಿ ಎಂದು. ಅದಕ್ಕೆ ಅವರು ಹೇಳಿದರು "My young friend is day dreaming" ಎಂದು ಅವರಿಗೆ ವಿಧಾನಸಭೆಯಲ್ಲಿ ಹೊಸದಾಗಿ ಬಂದಿರತಕ್ಕಂಥ ಸದಸ್ಯರ ಬಗ್ಗೆ ವಿಶೇಷವಾದ ಕಾಳಜಿ ಇತ್ತು, ಅಭಿಮಾನ ಇತ್ತು. ಅವರಿಗೆ ವಿಶೇಷವಾದಂಥ ಪ್ರೋತ್ಸಾಹವನ್ನು ಕೊಡುತ್ತಿದ್ದರು. ಆಗ ನನಗೆ ಇನ್ನೂ ಮದುವೆಯಾಗಿರಲಿಲ್ಲ. ನಾನು ಶಾಸನಸಭೆಗೆ ಬಂದಾಗಿನಿಂದ ಶ್ರೀ ನಿಜಲಿಂಗಪ್ಪ ಅವರಿಗೆ ನನ್ನ ಮೇಲೆ ವಿಶೇಷವಾದಂಥ ಪ್ರೀತಿ; ಏಕೆಂದರೆ ಅವರು ನನ್ನ ತಂದೆಯವರ ಸ್ನೇಹಿತರಾಗಿದ್ದರು. ನನ್ನ ಜೊತೆಯಲ್ಲಿ ಅವರು ಯಾವ ಸಂದರ್ಭದಲ್ಲಿ ಮಾತನಾಡಿದಾಗಲೂ ಕೂಡ ನನ್ನ ತಂದೆಯವರನ್ನು ಸ್ಮರಣೆ ಮಾಡದೆ ಬಿಡುತ್ತಿರಲಿಲ್ಲ. ಒಂದು ಸಾರಿ ಅವರು ನನ್ನನ್ನು 'ಏಕೆ ಇನ್ನೂ ಮದುವೆಯಾಗಿಲ್ಲ?' ಎಂದು ಕೇಳಿದರು. ನಾನು 'ಇನ್ನೂ ಹುಡುಕುತ್ತಾ ಇದ್ದೇನೆ' ಎಂದು ಹೇಳಿದೆ. 'ನಾನು ಹುಡುಕಲಾ?' ಎಂದು ಅವರು ಕೇಳಿದ್ದಕ್ಕೆ ಹುಡುಕಿರಿ ಎಂದು ನಾನು ಹೇಳಿದೆ. ಆಗ ಅವರು ಒಂದು ಮಾತನ್ನು ನನಗೆ ಹೇಳಿದರು. ಅವತ್ತಿನ ದಿವಸಗಳಲ್ಲಿ 'ಫಿಯಟ್' ಕಾರಿಗೆ ಬಹಳ ದೊಡ್ಡ ಕ್ಯೂ ಇರುತ್ತಿತ್ತು. ೧೯೬೦ರಿಂದ ೭೦ನೇ ಇಸವಿಯಲ್ಲಿ ಫಿಯಟ್ ಕಾರಿನ ಬಗ್ಗೆ ಸರ್ಕಾರಕ್ಕೆ ಒಂದು ವಿಶೇಷವಾದ ಸವಲತ್ತು ಇತ್ತು. ಒಂದು ಫಿಯಟ್ ಕಾರಿಗೆ ಸರ್ಕಾರ ಆರ್ಡರ್ ಕೊಟ್ಟರೆ ಬ್ಲಾಕ್‌ಮಾರ್ಕೆಟ್‌ನಲ್ಲಿ ಹತ್ತು- ಹನ್ನೆರಡು ಸಾವಿರ ಜಾಸ್ತಿ ಕೊಡುತ್ತಿದ್ದರು. ಆದ್ದರಿಂದ ಅಷ್ಟು ಉಳಿತಾಯವಾದ ಹಾಗೆ ಆಗುತ್ತಿತ್ತು. ಅದಕ್ಕೆ ಅವರು ಒಂದು ಮಾತನ್ನು ಹೇಳಿದ್ದರು 'ನೀನು ಮದುವೆಯಾದರೆ ನನ್ನ ಗಿಫ್ಟ್ ಆಗಿ ಫಿಯಟ್ ಕಾರು ಕೊಡುತ್ತೇನೆ' ಎಂದು. ನನ್ನ ಮದುವೆಯ

ಆಹ್ವಾನಪತ್ರಿಕೆ ಅವರಿಗೆ ಹೋದಾಗ ಅವರು ಒಂದು ಪತ್ರ ಬರೆದು ಆ ಪತ್ರದ ಜತೆಯಲ್ಲಿ ತಾವು ಕೊಟ್ಟಿದ್ದ ಮಾತನ್ನು ಜ್ಞಾಪಕಕ್ಕೆ ತಂದುಕೊಂಡು ಫಿಯಟ್ ಕಾರೊಂದನ್ನು ಸರ್ಕಾರದಿಂದ ರಿಲೀಸ್ ಮಾಡಿದ್ದರು. ಇದು ನನ್ನ ಮತ್ತು ಮಾನ್ಯ ಸಿದ್ಧವನಹಳ್ಳಿ ನಿಜಲಿಂಗಪ್ಪ ಅವರ ನಡುವೆ ಇದ್ದಂಥ ವೈಯಕ್ತಿಕವಾದಂಥ ವಿಶ್ವಾಸ ಮತ್ತು ವೈಯಕ್ತಿಕವಾದಂಥ ಅಭಿಮಾನ, ಪ್ರೀತಿ, ವಾತ್ಸಲ್ಯ. ಇದಕ್ಕೆ ಈ ಎರಡು-ಮೂರು ಉದಾಹರಣೆಗಳು ದ್ಯೋತಕವಾಗಿವೆ. ಶ್ರೀ ನಿಜಲಿಂಗಪ್ಪ ಅವರನ್ನು ಕಳೆದುಕೊಂಡು ಕನ್ನಡ ನಾಡನ್ನು ಬಡವಾಗಿದೆ. ಮಾನ್ಯ ನಿಜಲಿಂಗಪ್ಪನವರು ಹಾಕಿದ ಮಾರ್ಗವನ್ನು ನಾವು, ನೀವು-ಎಲ್ಲರೂ ತುಳಿದು, ಈ ಕನ್ನಡ ನಾಡನ್ನು ಅವರು ಎಷ್ಟು ಸುಂದರವಾಗಿ ಮಾಡಬೇಕೆಂದು ಇದ್ದರೋ ಅದಕ್ಕೂ ಹೆಚ್ಚು ಸುಂದರವಾಗಿ ಮಾಡುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕೆಂದು ಹೇಳಿ ಆ ಮಹಾಚೇತನಕ್ಕೆ ನನ್ನ ಅಂತಿಮ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ.

ಶ್ರೀಮಾನ್ ಧರ್ಮವೀರ್ ಅವರು ನಮ್ಮ ರಾಜ್ಯದ ರಾಜ್ಯಪಾಲರಾಗಿದ್ದರು ಮತ್ತು ಕೇಂದ್ರ ಸರ್ಕಾರದಲ್ಲಿ ಹಲವಾರು ಪ್ರತಿಷ್ಠಿತ ಹುದ್ದೆಗಳಲ್ಲಿ ಅವರು ಕಾರ್ಯನಿರ್ವಹಿಸಿದ್ದರು. ಅವರೂ ಕೂಡ ಕನ್ನಡನಾಡಿನಲ್ಲಿ ಸುಮಾರು ಐದು ವರ್ಷಗಳಕಾಲ ರಾಜ್ಯಪಾಲರಾಗಿದ್ದಗ ಬಹಳ ಉತ್ತಮವಾದ ಸೇವೆಯನ್ನು ಮಾಡುವುದರ ಮೂಲಕ ನಮ್ಮ ರಾಜ್ಯದಲ್ಲಿ ಒಂದು ಒಳ್ಳೆಯ ಪರಂಪರೆಗೆ ಕಾರಣೀಭೂತರಾಗಿದ್ದರು. ಶ್ರೀಮಾನ್ ಪಂಚಗವಿಯವರು, ನಾನು ವಿಧಾನಸಭೆಯ ಸದಸ್ಯನಾಗಿದ್ದಾಗ ಅವರು ಉಪಾಧ್ಯಕ್ಷರಾಗಿದ್ದರು. ಅವರು ಸ್ವಾತಂತ್ರ್ಯ ಹೋರಾಟಗಾರರು ಆಗಿದ್ದು ರೈತ ಜನಗಳ, ಗ್ರಾಮೀಣ ಭಾಗದ ಜನಗಳ ದುಃಖ ದುಮ್ಮಾನಗಳನ್ನು ಪ್ರತಿನಿಧಿಸುವ ಪ್ರಯತ್ನ ಮಾಡುತ್ತಿದ್ದರು. ಶ್ರೀ ಓಂಕಾರಮೂರ್ತಿ, ಶ್ರೀ ಗೂಡವಾಲ, ಶ್ರೀ ಬಸನಗೌಡ ಇವರೆಲ್ಲರೂ ಕೂಡ ನಮ್ಮ ರಾಜ್ಯದ ಸೇವೆಯನ್ನು ಮಾಡಿದರು. ಶ್ರೀಮಾನ್ ಚಿ. ಶಿವಣ್ಣ ಅವರು ನಮ್ಮಗೆಲ್ಲರಿಗೂ, ಈ ಪಕ್ಷದವರಿಗೆ ಬಹಳ ಬೇಕಾದಂಥ ಒಬ್ಬ ಸಹೋದರರಾಗಿದ್ದರು. ಸಮಾಜದಲ್ಲಿ ಬಹಳ ಕೆಳಸ್ತರದಿಂದ ಬಂದಂಥ ಶ್ರೀ ಶಿವಣ್ಣನವರು ಸ್ವಂತ ದುಡಿಮೆಯಿಂದ ಎಲ್‌ಎಲ್‌ಬಿ, ಎಲ್‌ಎಲ್‌ಎಂ, ಪದವಿಗಳನ್ನು ಗಳಿಸಿದರು ಮತ್ತು ಕಾಂಗ್ರೆಸ್ ಪಕ್ಷಧ ಅತ್ಯಂತ ಪ್ರಬಲವಾದ ನಾಯಕರಾಗಿ ಎಲ್ಲ ಸಚಿವ ಸಂಪುಟಗಳಲ್ಲೂ ಕೂಡ ಸಚಿವರಾಗಿ ಕರ್ನಾಟಕದ ಸೇವೆಯನ್ನು ಮಾಡಿದ್ದಾರೆ. ಅವರ ಕೊನೆಯ ದಿನಗಳು ಬಹಳ ಕಠಿಣಕರವಾದಂಥ ದಿನಗಳಾಗಿದ್ದವು. ಆದರೂ ಕೂಡ ಅಗಾಧವಾದಂಥ ಸ್ನೇಹಿತರ ಗುಂಪನ್ನು ಶಿವಣ್ಣನವರು ಸಂಪಾದಿಸಿದ್ದರು. ಹಾಗೆಯೇ ಶ್ರೀ ಶಂಕರಪ್ಪ ಕವಿಶೆಟ್ಟಿಯವರು, ಶ್ರೀ ಇಸಾಮಿಯಾ ಅವರು ೧೯೮೯ನೇ ಇಸವಿಯಲ್ಲಿ ನಾನು ಸ್ಪೀಕರ್ ಆಗಿದ್ದಾಗ ಅವರು ಸದನದ ಸದಸ್ಯರಾಗಿದ್ದರು. ಶ್ರೀ ಕಾಳಮರಿಗೌಡ ಅವರು ನನ್ನ ಜತೆಯಲ್ಲಿ ಸದಸ್ಯರಾಗಿದ್ದರು. ಈ ರಾಜ್ಯದ ಮೈಸೂರು ಜಿಲ್ಲೆಯಲ್ಲಿ ಅವರು ಬಹಳ ಶ್ರಮಪಟ್ಟು ತಮ್ಮ ಸೇವೆಯನ್ನು ಮಾಡಿದ್ದರು. ಹಾಗೆಯೇ ಶ್ರೀ ಅನಂತರಾಮನ್ ಅವರು ಬೆಂಗಳೂರಿನ ಮೇಯರ್ ಆಗಿದ್ದರು. ನಂತರ ಚಾಮರಾಜಪೇಟೆಯಿಂದ ಒಂದು ಬಾರಿ ಶಾಸನಸಭಾ ಸದಸ್ಯರಾಗಿದ್ದರು. ಶ್ರೀಮಾನ್ ಎಂ.ಎಸ್. ಕೃಷ್ಣನ್ ಅವರು ಸಿ.ಪಿ.ಐ. ನ ಪ್ರಧಾನ ಕಾರ್ಯದರ್ಶಿಯಾಗಿದ್ದರು. ೧೯೭೨ನೇ ಇಸವಿಯಿಂದ ಅವರು ಮೂರು-ನಾಲ್ಕು ಬಾರಿ ಈ ಸಭೆಗೆ ಸದಸ್ಯರಾಗಿ ಆಯ್ಕೆಯಾಗಿ ಶ್ರಮಿಕವರ್ಗದ ಪ್ರತಿನಿಧಿಯಾಗಿ ಅತ್ಯಂತ ಫಲಪ್ರದವಾದಂಥ ಹೋರಾಟಗಳನ್ನು ಮಾಡಿಕೊಂಡು ಬಂದರು. ೧೯೬೦ ಮತ್ತು ೭೦ರ ದಶಕದಲ್ಲಿ ಈ ನಾಡು ಕಂಡಂಥ ಅತ್ಯಂತ ಪ್ರತಿಭಾನ್ವಿತ, ಪ್ರತಿಭಾಶಾಲಿ ಕಮ್ಯುನಿಷ್ಟ್ ನಾಯಕರು ಮತ್ತು ಶ್ರಮಜೀವಿಗಳ ನಾಯಕರಾಗಿದ್ದರು. ಶ್ರೀ ಎಂ.ಎಸ್. ಕೃಷ್ಣನ್ ಅವರು ಈ ದಿವಸ ನಮ್ಮಿಂದ ದೂರವಾಗಿರತಕ್ಕದ್ದು

ನನಗೆ ವೈಯುಕ್ತಿಕವಾಗಿ ಬಹಳ ಅಘಾತವನ್ನುಂಟುಮಾಡಿದೆ. ಹಾಗೆಯೇ ಶ್ರೀ ನಾಡಕರ್ಣಿ ಅವರು ಪ್ರಜಾ ಸೋಶಲಿಸ್ಟ್ ಪಕ್ಷದ ಸದಸ್ಯರಾಗಿದ್ದರು. ಹಾಗೆಯೇ ಶ್ರೀ ಮುನಿಚಿನ್ನಪ್ಪನವರು ನಮ್ಮ ಪಕ್ಷದ ಸದಸ್ಯರಾಗಿದ್ದರು. ಶ್ರೀ ಜಯಣ್ಣ ಅವರು ಇತ್ತೀಚಿನವರೆಗೂ ಕೂಡ ಸಕ್ರಿಯವಾಗಿ ನಮ್ಮ ಪಕ್ಷದಲ್ಲಿ ಕೆಲಸ ಮಾಡಿದಂಥವರು; ಅವರು ವಿಧಾನಸಭೆಗೆ ಎರಡು ಬಾರಿ ಚುನಾಯಿತರಾಗಿದ್ದರು. ಹಾಗೆಯೇ ಶ್ರೀಮತಿ ಹೇಮಾವತಿಯವರು ಇದ್ದಕ್ಕಿದ್ದಹಾಗೆ, ಆಕಸ್ಮಿಕವಾಗಿ ಹಠಾತ್ ಅವರ ಅಂತ್ಯ ಉಂಟಾಯಿತು. ಅವರು ಈ ಸಭೆಯ ಸದಸ್ಯರಾಗಿದ್ದರು. ಶ್ರೀಯುತ ಸತ್ಯನಾರಾಯಣರವರು ಮತ್ತು ಶರಣಪ್ಪನವರು ಇವರುಗಳೆಲ್ಲರ ನಿಧನದಿಂದ ರಾಜ್ಯ ಬಡವಾಗಿರುತ್ತದೆ. ಮತ್ತೆ ಅತ್ಯಂತ ಧಾರುಣವಾದ ರೀತಿಯಲ್ಲಿ ಶ್ರೀ ಪಾಸಗೌಡ ಉರುಫ್ ಅಪ್ಪಾಗೌಡ ಪಾಟೀಲ್‌ರವರು ನಿಧನರಾದರು. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಆಗಿಂದಾಗ್ಗೆ ಅಗತಕ್ಕಂಥ ಅಪಘಾತಗಳಿಂದ ನಮಗೆ ಬೇಕಾಂದಂಥವರು ಹೇಗೆ ನಿಧನ ಹೊಂದುತ್ತಾರೆ ಎನ್ನುವುದನ್ನು ಶ್ರೀ ಅಪ್ಪಾಗೌಡ ಪಾಟೀಲ್‌ರವರ ನಿಧನದಿಂದ ನಾವು ಕಾಣಬೇಕಾಗಿದೆ. ಆದ್ದರಿಂದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಾವು, ಇಂತಹ ಆಕಸ್ಮಿಕಗಳು, ಇಂತಹ ಅಪಘಾತಗಳು ನಡೆಯದಹಾಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗಿದೆ. ಅಥಣಿ ಸಕ್ಕರೆ ಕಾರ್ಖಾನೆ ಹಾಗೆಯೇ ಹಿಪ್ಪರಗಿ ಬ್ಯಾರೇಜ್ ಅಭಿವೃದ್ಧಿಗೆ ಶ್ರೀ ಪಾಟೀಲ್‌ರವರು ದುಡಿದಿದ್ದಾರೆ. ಇವರೆಲ್ಲರಿಗೂ ಕೂಡ ಈ ಸದನದ ಶ್ರದ್ಧಾಂಜಲಿಗಳನ್ನು, ಗೌರವವನ್ನು ಸಮರ್ಪಣೆ ಮಾಡಿ, ತಾವೇನು ಈ ಸಂತಾಪ ಸೂಚನಾ ನಿರ್ಣಯವನ್ನು ಸಭೆಯ ಮುಂದೆ ಇಟ್ಟಿದ್ದೀರಿ, ಅದಕ್ಕೆ ನನ್ನ ಕಂಬನಿ ತುಂಬಿದಂಥ ಬೆಂಬಲವನ್ನು ಕೊಡುತ್ತೇನೆ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ನಿಜಲಿಂಗಪ್ಪನವರು ನಮ್ಮ ರಾಷ್ಟ್ರ ನಾಯಕರು ಮತ್ತು ಒಬ್ಬ ಆದರ್ಶ ರಾಜಕಾರಣಿ ಈ ಆದರ್ಶ ಎನ್ನುವಂಥದ್ದು ಇವತ್ತು ಏನಾಗಿದೆ ಎಂದರೆ, ಅದೊಂದು ಮ್ಯೂಸಿಯಂ ನಲ್ಲಿಡುವಂಥ ವಸ್ತುವಾಗಿದೆ; ಶಬ್ಧವಾಗಿದೆ. ಆದರ್ಶ ರಾಜಕಾರಣಿ ಎಂದರೆ ಬಹುಶ: ಜನ ಯಾರು ನಂಬುವುದಿಲ್ಲ. ಆ ಒಂದು ಪರಿಸ್ಥಿತಿ ಇವತ್ತಿನ ವ್ಯವಸ್ಥೆಯೊಳಗೆ ಬಂದಿದೆ. ಆದರೆ, ಒಬ್ಬ ಸರಳ ಸಜ್ಜನ ಮತ್ತು ಸಮಾಜದ ಬಗ್ಗೆ ಯಾವಾಗಲೂ ಕಾಳಜಿ ಉಳ್ಳಂಥ ನಾಯಕರು ಯಾರಿದ್ದರು ಅವರು ಸನ್ಮಾನ್ಯ ನಿಜಲಿಂಗಪ್ಪನವರು. ಅವರನ್ನು ಎಲ್ಲರೂ ಪ್ರೀತಿಯಿಂದ ಎಸ್.ಎನ್. ಎಂದೇ ಕರೆಯುತಿದ್ದರು. ಅವರು ಆ ಒಂದು ಪ್ರೀತಿ ವಿಶ್ವಾಸಗಳಿಸಿದಂಥ ವ್ಯಕ್ತಿ ಮತ್ತು ನೀರಾವರಿ ಕ್ಷೇತ್ರಕ್ಕೆ ಬಹಳಷ್ಟು ಕಾಳಜಿ ಇದ್ದಂಥವರು. ಅದರಲ್ಲಿಯೂ ಗ್ರಾಮೀಣಾಭಿವೃದ್ಧಿ ಬಗ್ಗೆ ಹೆಚ್ಚಿನ ಒತ್ತು ಕೊಡಬೇಕೆನ್ನುವಂಥಾದ್ದು ಅವರ ಅಭಿಮತ. ಏಕೆಂದರೆ, ಅವರು ಅಪ್ಪಟ ಗಾಂಧಿವಾದಿಗಳಾಗಿದ್ದರು. ನಮ್ಮ ರಾಷ್ಟ್ರ ಈ ಗ್ರಾಮೀಣ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಾಗ ಮಾತ್ರ ದೇಶದ ಉದ್ಧಾರವಾಗಲಿಕ್ಕೆ ಸಾಧ್ಯವೆಂಬ ಗಾಂಧಿ ವಾದ ಏನಿತ್ತು, ಅದೇ ಗಾಂಧಿವಾದವನ್ನು ನಂಬಿಕೊಂಡಂಥ ಸನ್ಮಾನ್ಯ ಎಸ್.ಎನ್‌ರವರು ತಮ್ಮ ಕೊನೆಯ ಉಸಿರು ಇರುವವರೆಗೂ ಅದಕ್ಕಾಗಿ ಸಾಕಷ್ಟು ಪರಿಶ್ರಮಪಟ್ಟರು. ಆಗ್ಗೆ ಕರ್ನಾಟಕದ ಏಕೀಕರಣದ ಬಗ್ಗೆ ಸಾಕಷ್ಟು ಅಪಸ್ವರಗಳು ಬಂದವು. ಈ ಏಕೀಕರಣದ ಸಲುವಾಗಿದ್ದಂಥವರು ಮೋರೆ ಹನುಮಂತರಾಯರು ಇನ್ನಿತರ ನಾಯಕರು ಅವರ ಜೊತೆ ಕೈಜೋಡಿಸಿದರು. ಸನ್ಮಾನ್ಯ ನಿಜಲಿಂಗಪ್ಪನವರು ಈ ಕರ್ನಾಟಕ ಏಕೀಕರಣವಾಗಬೇಕು, ಕನ್ನಡ ಮಾತನಾಡುವಂಥ ಜನ ಒಂದುಕಡೆ ಸೇರಬೇಕು, ಎಲ್ಲರೂ ಸೇರಿದಾಗ ಮಾತ್ರ ಏನಾದರೂ ಕರ್ನಾಟಕ ರಾಜ್ಯ ಒಂದು ಸರಿದಾರಿಗೆ ಹೋಗಲಿಕ್ಕೆ ಸಾಧ್ಯವೆಂಬ ಮಾತನ್ನು ಹೇಳಿದಂಥವರು ಮತ್ತು ಕಂಕಣಬದ್ಧರಾಗಿ ಏಕೀಕೃತ ಕರ್ನಾಟಕವನ್ನು ಮಾಡಿದಂಥವರು ಸನ್ಮಾನ್ಯ

ಎಸ್.ನಿಜಲಿಂಗಪ್ಪನವರು ಅವರು ಎರಡು ಸಲ ಮುಖ್ಯಮಂತ್ರಿಗಳಾಗಿದ್ದರು. ಅವರು ತಮ್ಮ ಆಡಳಿತದಲ್ಲಿ ಬಿಗಿಯನ್ನು ಇಟ್ಟುಕೊಂಡಿದ್ದರು. ಮತ್ತು ತಮಗೆ ಏನು ಕಂಡುಬರುತ್ತದೆ, ಮತ್ತು ಯಾವುದು ಸರಿ ಎನಿಸುತ್ತದೆ ಅದನ್ನು ಮಾಡುವಂಥ ನಿಷ್ಠೆ ಮತ್ತು ಜಿದ್ದಿನಿಂದ ಮಾಡುವಂಥಾದ್ದು ಮತ್ತು ಯಾವುದೇ ಒಂದು ತತ್ವಕ್ಕೆ ಕಟ್ಟುಬಿದ್ದು ಅದನ್ನು ನಂಬಿದಾಗ ಅದಕ್ಕೆ ವ್ಯತಿರಿಕ್ತವಾಗಿ ಯಾವುದೇ ಸಂದರ್ಭದಲ್ಲಿ ನಡೆದುಕೊಳ್ಳಲಾರದಂಥ ವ್ಯಕ್ತಿತ್ವವನ್ನು ನಿಜಲಿಂಗಪ್ಪನವರು ಪಡೆದುಕೊಂಡಿದ್ದರು. ಬಹುಶ: ಅದು ಬಹಳಷ್ಟು ರಾಜಕಾರಣಿಗಳಿಗೆ ಕಡಿಮೆ. ಇವತ್ತು ಯಾವುದೋ ಒಂದು ಹಂತದಲ್ಲಿ ರಾಜಕಾರಣಿಗಳು ಕಾಂಪ್ರಮೈಸ್ ಆಗಿಬಿಡುತ್ತಾರೆ. ಆದರೆ, ಮಾನ್ಯ ನಿಜಲಿಂಗಪ್ಪನವರು ಯಾವುದೇ ಕಾಂಪ್ರಮೈಸ್‌ಗೆ ಈಲ್ಡ್ ಆಗಲಿಲ್ಲ. ೧೯೬೮-೬೯ರ ಸಂದರ್ಭದಲ್ಲಿ ಅವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಆಗಿನ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರಿಗೂ ಮತ್ತು ಇವರಿಗೂ ಭಿನ್ನಮತ ಬಂತು. ಆದರೂ, ಅವರು ತಮಗೆ ಏನು ಅನ್ನಿಸಿತೋ ಅದನ್ನು ಹೇಳಿದರು. ಸಂಸ್ಥಾ ಕಾಂಗ್ರೆಸ್ ಆಯಿತು, ಸಿಂಡಿಕೇಟ್ ಇಂಡಿಕೇಟ್ ಆಯಿತು. ತಮ್ಮ ಮನಸ್ಸಿನ ಪ್ರಕಾರ ಅವರು ನಡೆದುಕೊಂಡು ಹೋದರು. ಅವರಿಗೆ ಭಿನ್ನಮತ ಇದ್ದರೂ ಕೂಡ, ಶ್ರೀಮತಿ ಇಂದಿರಾಗಾಂಧಿಯವರ ಜೊತೆ ವೈಯಕ್ತಿಕವಾದ ಸೌಹಾರ್ದ ಸಂಬಂಧ ಇತ್ತು, ಅದನ್ನು ಎಂದೂ ಕಳೆದುಕೊಂಡಿರಲಿಲ್ಲ. ಆದರೆ, ತಮಗೆ ಏನು ಅನ್ನಿಸುತ್ತದೆ ಅದನ್ನು ನೇರವಾಗಿ ಹೇಳುವಂಥ ಕೆಲಸವನ್ನು ಮಾಡಿದರು. ಮುಂದೆ ತಾವು ನಂಬಿದ ತತ್ವಗಳಿಗೆ ಬದ್ಧರಾಗಿ ಅವರ ಕೊನೆಯ ಉಸಿರು ಇರುವವರೆಗೂ ಅವರು ಹಾಗೆಯೇ ನಡೆದುಕೊಂಡು ಬಂದರು. ಇವತ್ತು ರಾಜಕಾರಣಿಗಳಲ್ಲಿ ನಾವು ಎರಡು ವರ್ಗವನ್ನು ಮಾಡಬಹುದು. ಒಂದು ವರ್ಗದ ರಾಜಕಾರಣಿಗಳು ಹೇಗಿರುತ್ತಾರೆಂದರೆ, ಅವರು ಜೀವಂತ ಇದ್ದಾಗಲೇ ಸತ್ತವರಹಾಗೆ ಇರುತ್ತಾರೆ. ಇನ್ನೊಂದು ವರ್ಗದ ರಾಜಕಾರಣಿಗಳು ಅವರು ಸತ್ತನಂತರವೂ ಜೀವಂತ ಇರುತ್ತಾರೆ. ಈ ಎರಡು ವರ್ಗಗಳನ್ನು ಬಿಟ್ಟು ಸನ್ಮಾನ್ಯ ನಿಜಲಿಂಗಪ್ಪನವರು ಮೂರನೇ ವರ್ಗಕ್ಕೆ ಸೇರುತ್ತಾರೆ. ಏಕೆಂದರೆ, ಅವರು ಇದ್ದಾಗಲೂ ಜೀವಂತ ಇದ್ದರು, ಸತ್ತನಂತರವೂ ಜೀವಂತ ಇದ್ದಾರೆ. ಈ ಮೂರು ಅವರಿಗೆ ಸೇರುತ್ತವೆ. ಅವರು ಈ ರೀತಿಯಾದ ಅಪರೂಪದ ರಾಜಕಾರಣಿ. ಏಕೆಂದರೆ, ಕೊನೆಯ ದಿವಸಗಳಲ್ಲಿ ನಾವು ಅವರನ್ನು ನೋಡಿದ್ದೇವೆ. ನಾನು ಹಲವಾರು ಸಾರಿ ಅವರಿಗೆ ಪ್ರತ್ಯಕ್ಷವಾಗಿ ಭೇಟಿಯಾಗಿದ್ದೆ. ಯುವ ರಾಜಕಾರಣಿಗಳನ್ನು ಕಂಡರೆ ಆದರ್ಶದ ಮಾತುಗಳನ್ನು ಹೇಳುತ್ತಿದ್ದರು.

ನೀವು ರಾಜಕಾರಣಕ್ಕೆ ಹೊಸದಾಗಿ ಬಂದಿದ್ದೀರಿ, ಯುವಕರು ಇದ್ದೀರಿ, ಜನ ನಿಮ್ಮನ್ನು ನಂಬಿ ಆರಿಸಿ ಕಳುಹಿಸಿದ್ದಾರೆ. ನಿಮ್ಮ ಕ್ಷೇತ್ರಕ್ಕೆ ಮೋಸ ಮಾಡಬೇಡಿ. ಜನತೆ ನಿಮ್ಮನ್ನು ನಂಬಿದ್ದಾರೆ, ಅದು ಒಂದು ಕ್ಷೇತ್ರದ ಅಭಿವೃದ್ಧಿ ಇರಬಹುದು ಅಥವಾ ಯಾವುದೇ ಅಭಿವೃದ್ಧಿ ಕಾರ್ಯಗಳಿರಬಹುದು ಅದರಲ್ಲಿ ಒಂದು ಆದರ್ಶ ಇರಬೇಕು. ಆ ಲಕ್ಷ್ಮಣಗೆರೆಯನ್ನು ದಾಟಬೇಡಿ ಎನ್ನುವಂಥ ಮಾತನ್ನು ಅವರು ಹೇಳುತ್ತಿದ್ದರು. ಬಹುಶ: ಇಂತಹ ಅಪರೂಪದ ವ್ಯಕ್ತಿ ಸಿಗುವುದಕ್ಕೆ ಸಾಧ್ಯವಿಲ್ಲ. ಅವರೇನು ಮೌಲ್ಯಗಳನ್ನು ನಂಬಿದ್ದರು, ತತ್ವಗಳನ್ನು ನಂಬಿದ್ದರು, ಆ ಮಾರ್ಗದರ್ಶನದಲ್ಲಿ, ಆ ತತ್ವಗಳಲ್ಲಿ ನಾವೂ ಮುಂದುವರಿದು ಹೋದರೆ, ಬಹುಶ: ಅವರ ಆತ್ಮಕ್ಕೆ ನಿಜವಾದ ಶಾಂತಿಯನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ನಂತರ ಅವರಿಗೆ ಇನ್ನೊಂದು ಕನಸು ಇತ್ತು; ಭದ್ರಾ ಮೇಲ್ದಂಡೆ ಯೋಜನೆ ಯಿಂದ ಚಿತ್ರದುರ್ಗ ಜಿಲ್ಲೆ ಮತ್ತು ಇನ್ನಿತರ ಸುತ್ತಮುತ್ತಲ ಭಾಗಕ್ಕೆ ನೀರಾವರಿಯನ್ನು ಕೊಡುವಂತಾದ್ದು. ಈ ಭದ್ರ ಮೇಲ್ದಂಡೆ ಯೋಜನೆ ಅವರ ಕನಸಿನ ಕೂಸು. ಆದರ ಸಲುವಾಗಿ ಅವರ ಕೊನೆಯ ಉಸಿರು ಇರುವವರೆಗೂ ಸಾಕಷ್ಟು ಪ್ರಯತ್ನ ಮಾಡಿದರು. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಒಂದು ಕಡೆ

ಹೇಳಿಕೆ ಕೊಟ್ಟಿದ್ದನ್ನು ನೋಡಿದ್ದೇನೆ. ಮಾನ್ಯ ಹೆಚ್.ಕೆ. ಪಾಟೀಲರು ಚಿತ್ರದುರ್ಗಕ್ಕೆ ಹೋದಾಗ ಈ ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ, ಅದನ್ನು ಅನುಷ್ಠಾನ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಅದರಲ್ಲಿ ಸ್ವಲ್ಪ ಗೊಂದಲ ಇದೆ. ಆ ಗೊಂದಲವನ್ನು ನಿವಾರಿಸಿ, ಯಾವರೀತಿ ಆ ಯೋಜನೆಯನ್ನು ಅನುಷ್ಠಾನ ಮಾಡಬಹುದು ಎಂಬುದರ ಬಗ್ಗೆ ಇವತ್ತು ಸರ್ಕಾರದವರು ಚಿಂತನೆ ಮಾಡಬೇಕು. ಅಂದಾಗ, ನಾವು ಅವರ ಆತ್ಮಕ್ಕೆ ಶಾಂತಿಯನ್ನು ಕೋರಲಿಕ್ಕೆ ಸಾಧ್ಯವಿದೆ. ಈ ದಿಸೆಯಲ್ಲಿ ಇವತ್ತು ಈ ರೀತಿಯಾದ ಆದರ್ಶ ರಾಜಕಾರಣೆಯನ್ನು ನಾವು ಆಧಾರವಾಗಿಟ್ಟುಕೊಂಡು ಆ ಆದರ್ಶದ ರೀತಿಯಲ್ಲಿ ರಾಜಕಾರಣಿಗಳು ಬದುಕು ಮಾಡಬೇಕೆಂಬುದನ್ನು ಹೇಳಿ ಈ ಸಂದರ್ಭದಲ್ಲಿ ಮಾನ್ಯ ನಿಜಲಿಂಗಪ್ಪನವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಅವರ ನಿಧನದಿಂದ ಕರ್ನಾಟಕ ಮತ್ತು ಇಡೀ ರಾಷ್ಟ್ರಕ್ಕೆ ತುಂಬಲಾರದಂಥ ಹಾನಿಯಾಗಿದೆ. ಏಕೆಂದರೆ, ನಾನು ಅವರನ್ನು ನೋಡುತ್ತಾ ಇದ್ದೆ. ಅವರ ಕೊನೆಯ ಉಸಿರು ಇರುವವರೆಗೂ ನಿತ್ಯ ಪತ್ರಿಕೆಗಳನ್ನು ಓದುತ್ತಿದ್ದರು. ದೇಶದಲ್ಲಿ ಏನು ನಡೆಯುತ್ತಾ ಇದೆ, ರಾಜ್ಯದಲ್ಲಿ ಏನು ನಡೆಯುತ್ತಾ ಇದೆ. ರಾಜಕಾರಣಿಗಳು ಏನು ಮಾಡುತ್ತಾ ಇದ್ದಾರೆ, ಯಾವರೀತಿ ಆಡಳಿತ ನಡೆಯುತ್ತಾ ಇದೆ ಎಂಬುದನ್ನು ನೋಡುತಿದ್ದರು. ಮತ್ತು ಪತ್ರಿಕೆಗಳಲ್ಲಿ ಅವರ ಕಾಮೆಂಟ್ಸ್‌ಗಳನ್ನೂ ನೋಡುತ್ತಿದ್ದೆ. ಸಾಕಷ್ಟು ಸಂದರ್ಭಗಳಲ್ಲಿ ಅವರು ಮನೆಯಿಂದ ಸ್ಟೇಟ್‌ಮೆಂಟ್‌ಗಳನ್ನು ಮಾಡುತ್ತಾ ಇದ್ದರು. ರಾಜ್ಯಸರ್ಕಾರ ಈ ನಿರ್ಣಯ ಕೈಗೊಂಡಿರುವುದು ಸರಿಯಲ್ಲ, ರಾಷ್ಟ್ರದಲ್ಲಿ ಇದು ನಡೆಯುತ್ತಾ ಇದೆ, ಇದು ಸರಿಯಲ್ಲ. ಇದು ಹೀಗಾಗಬೇಕು ಎನ್ನುವಂಥ ಚಿಂತನೆ. ಏಕೆಂದರೆ, ನಾವು ಕೆಲವು ವ್ಯಕ್ತಿಗಳನ್ನು ನೋಡುತ್ತೇವೆ. ಅವರು ಯಾವುದೇ ಒಂದು ವೃತ್ತಿಯಿಂದ ನಿವೃತ್ತರಾದ ನಂತರ, ಬಹುಶಃ ಅದರ ಬಗ್ಗೆ ಕಾಳಜಿ ಮಾಡುವುದಿಲ್ಲ. ತಮ್ಮದು ಮತ್ತು ತಮ್ಮ ಸ್ವಾರ್ಥ, ತಮ್ಮ ಮನೆ, ತಮ್ಮ ಕುಟುಂಬ. ಬಹುಶಃ ಯಾವುದೇ ರಾಜಕಾರಣಿ ಬೆಂಗಳೂರಿಗೆ ಬಂದಮೇಲೆ, ಬೆಂಗಳೂರಿನಲ್ಲಿಯೇ ಮನೆ ಮಾಡಿಕೊಂಡು ಇಲ್ಲಿಯೇ ವಾಸವಾಗಿರುವುದನ್ನು ನಾವು ನೋಡುತ್ತೇವೆ. ಆದರೆ, ನಿಜಲಿಂಗಪ್ಪನವರು ಎರಡು ಸಲ ಮುಖ್ಯಮಂತ್ರಿಯಾದಂಥವರು. ಒಂದು ಸಲ ಲೋಕಸಭಾ ಸದಸ್ಯರಿದ್ದಂಥವರು. ಅವರು ಖಾಯಂ ಆಗಿ ಚಿತ್ರದುರ್ಗದಲ್ಲೇ ನೆಲೆಸಿದರು. ಇಂತಹ ಅಪರೂಪದ ರಾಜಕಾರಣಿ ಸಿಗಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಾವು ಅವರ ಆದರ್ಶಗಳನ್ನು ಪಾಲನೆ ಮಾಡಿದರೆ ಮಾತ್ರ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದಹಾಗೆ ಆಗುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ ಮತ್ತು (XXX) ಅವರು, ಧರ್ಮವೀರ್ ಅವರು ನಮ್ಮ ರಾಜ್ಯದ ರಾಜ್ಯಪಾಲರಾಗಿದ್ದರು.

ಶ್ರೀ ಡಿ.ಬಿ ಚಂದ್ರೇಗೌಡ ಮಾನ್ಯ (XXX) ಅವರು ಇಲ್ಲೇ ಇದ್ದಾರೆ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಧರ್ಮವೀರ್ ಅವರು ದಯವಿಟ್ಟು ಕ್ಷಮಿಸಬೇಕು. ಅವರ ಆಯಸ್ಸು ಜಾಸ್ತಿ ಆಗುತ್ತದೆ. ಮಾನ್ಯ ಧರ್ಮವೀರ್ ೧೯೬೮-೭೦ರಲ್ಲಿ ನಮ್ಮ ರಾಜ್ಯದ ರಾಜ್ಯಪಾಲರಾಗಿದ್ದರು. ೧೯೭೧ನೇ ಇಸವಿಯಲ್ಲಿ ರಾಷ್ಟ್ರಪತಿಗಳ ಆಡಳಿತ ಜಾರಿಯಲ್ಲಿತ್ತು. ರಾಷ್ಟ್ರಪತಿಗಳ ಆಡಳಿತ ಇದ್ದಂತಹ ಸಂದರ್ಭದಲ್ಲಿ ಒಬ್ಬ ರಾಜ್ಯಪಾಲರು ಒಳ್ಳೆಯ ಆಡಳಿತಗಾರರಾಗಿ ಕೆಲಸ ಮಾಡುವಂಥಾದ್ದನ್ನು ನಾವು ನೋಡಿದ್ದೇವೆ. ಅವರು ನಮ್ಮ ರಾಜ್ಯಕ್ಕೆ ಸಾಕಷ್ಟು ಕೊಡುಗೆಯನ್ನು ಕೊಟ್ಟಿದ್ದಾರೆ. ಅವರ ಸೇವೆಯನ್ನು ಸಹ ನಾವು ಈ ಸಂದರ್ಭದಲ್ಲಿ ಸ್ಮರಣೆಯನ್ನು ಮಾಡಬೇಕಾಗುತ್ತದೆ. ಮತ್ತು ಮಾನ್ಯ ಪಾಸಗೌಡ ಪಾಟೀಲ್ ಅವರು ೧೯೫೭ರ ಚುನಾವಣೆಯಲ್ಲಿ ಕಾಗವಾಡ ಮತಕ್ಷೇತ್ರದಿಂದ ಗೆದ್ದು ಬಂದಿದ್ದರು.

XXX **ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ**

ಅವರು ಇನ್ನೂ ಹೆಚ್ಚಿನ ಸೇವೆಯನ್ನು ತಮ್ಮ ಕ್ಷೇತ್ರಕ್ಕೆ ಮಾಡುವಂತಹ ಸಂದರ್ಭ ಇತ್ತು. ಅವರು ವಿಧಾನ ಸಭೆಯಲ್ಲಿ ಬಹಳ ಕ್ರಿಯಾಶೀಲರಾಗಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ಅವರು ಅಪಘಾತದಲ್ಲಿ ದುರ್ಮರಣವನ್ನು ಅಪ್ಪಿದರು. ಈ ರೀತಿ ಅಪಘಾತದಲ್ಲಿ ತೀರಿಕೊಂಡವರು ನಮ್ಮ ಕಡೆ ಇದ್ದಂತಹ ಶ್ರೀಕಾಂತ ಅಂಬಡಗಟ್ಟಿಯವರು ಇರಬಹುದು, ಡಾ|| ಹುಂಬರವಾಡಿಯವರು ಇರಬಹುದು, ಈ ರೀತಿ ಸಾಕಷ್ಟು ಜನ ರಾಜಕಾರಣಿಗಳು ಇರಬಹುದು, ಮತ್ತು ಇತರೇ ಪ್ರಮುಖ ವ್ಯಕ್ತಿಗಳು ಇರಬಹುದು, ಅವರು ಅಪಘಾತಗಳಲ್ಲಿ ತೀರಿಕೊಂಡಿರುವುದನ್ನು ನಾವು ನೋಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ, ಈ ಅಪಘಾತಗಳು ಆಗುವಂಥಾದ್ದು. ಅದೂ ಪಿ.ಬಿ. ರಸ್ತೆಗಳಲ್ಲಿ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ. ಈ ಬಗ್ಗೆ ಸಾಕಷ್ಟು ಕ್ರಮ ತೆಗೆದುಕೊಳ್ಳುವುದರ ಬಗ್ಗೆಯೂ ಸಹ ನಾವು ಚಿಂತನೆಯನ್ನು ಮಾಡಬೇಕಾಗುತ್ತದೆ. ಇವತ್ತು ಶಾಸಕರು ಅಪಘಾತಗಳಲ್ಲಿ ಮೃತಪಡುತ್ತಿದ್ದಾರೆ ಅಂತ ಅಲ್ಲ, ಸಾಕಷ್ಟು ಸಾಮಾನ್ಯ ಜನರು ಸಹ ಅಪಘಾತಗಳಲ್ಲಿ ಮೃತಪಡುತಿದ್ದಾರೆ. ನಾವು ಒಂದು ಸಲ ಬೆಂಗಳೂರಿನಿಂದ ಹುಬ್ಬಳ್ಳಿಗೆ ಹೋಗಿ ಬಂದರೆ ಎರಡು ದಿವಸಗಳಲ್ಲಿ ೯-೧೦ ಅಪಘಾತಗಳನ್ನು ನೋಡುತ್ತೇವೆ. ಈ ರೀತಿಯಾದಂತಹ ವಾತಾವರಣ ಇರುವಂತಾದ್ದು, ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವಂತಥದ್ದು ಆಗಬೇಕು. ಇನ್ನು ಶ್ರೀಯುತ ಪಂಚಗವಿಯವರು, ಶ್ರೀ ಚಂದ್ರಶೇಖರ್‌ರವರು, ಶ್ರೀ ಓಂಕಾರಮೂರ್ತಿಯವರು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿದಂತಹವರು. ಹಾಗೂ ಶ್ರೀ ಬಸನಗೌಡರು, ಶ್ರೀ ಶಿವಣ್ಣನವರು, ಶ್ರೀ ಕವಿಶೆಟ್ಟಿಯವರು, ಶ್ರೀ ಇಳಕಲ್‌ರವರು, ಶ್ರೀ ಇಸಾಮಿಯರವರು, ಶ್ರೀ ಕಾಳಮರಿಗೌಡರು, ಶ್ರೀ ಅನಂತರಾಮನ್, ಶ್ರೀ ಎಂ.ಎಸ್. ಕೃಷ್ಣನ್ ಮತ್ತು ಶ್ರೀ ಆರ್.ಎಸ್. ಗೂಡವಾಲ, ಅವರು ಸುಪ್ರಸಿದ್ಧ ವಕೀಲರಾಗಿದ್ದರು; ಒಂದು ಸಲ ಅವರು ಬಾಂಬೆ ವಿಧಾನ ಸಭೆಯ ಸದಸ್ಯರು ಸಹ ಆಗಿದ್ದರು. ಮತ್ತು ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರಾಗಿದ್ದರು. ಅವರು ಹುಬ್ಬಳ್ಳಿ ಮಹಾನಗರದಲ್ಲಿ ಸಿವಿಲ್-ಸೈಡ್ ವಕೀಲರಾಗಿ ಪ್ರಾಕ್ಟೀಸ್ ಮಾಡುತ್ತಿದ್ದರು. ಅವರು ಶತಾಯುಷಿಯಾಗಿ ಬದುಕಿದರು. ನಾನು ೧೯೮೦ನೇ ಇಸವಿಯಲ್ಲಿ ಹುಬ್ಬಳ್ಳಿಯಲ್ಲಿ ವಕೀಲನಾಗಿ ಪ್ರಾಕ್ಟೀಸ್ ಮಾಡುವಂತಹ ಸಂದರ್ಭದಲ್ಲಿ ಅವರಿಗೆ ೯೦ ವರ್ಷ ವಯಸ್ಸಾಗಿತ್ತು, ಆಗ ಅವರು ಕೋರ್ಟಿಗೆ ಬಂದು ಪ್ರಾಕ್ಟೀಸ್ ಮಾಡುವಂಥಾದ್ದನ್ನು ನಾನು ನೋಡಿದ್ದೇನೆ. ಅಂತಹ ಒಬ್ಬ ಉತ್ಸಾಹಶೀಲ ಕ್ರಿಯಾಶೀಲ ವ್ಯಕ್ತಿಯಾಗಿದ್ದರು. ಅವರ ನಿಧನದಿಂದ ಮತ್ತು ಇನ್ನಿತರ ಸದಸ್ಯರು ಸಾಮಾಜಿಕ ಚಟುವಟಿಕೆಗಳಲ್ಲಿ, ರಾಜಕೀಯ ರಂಗದಲ್ಲಿ ಇದ್ದಂತಹವರು ಸಾಕಷ್ಟು ಸೇವೆಯನ್ನು ಮಾಡಿದ್ದಾರೆ; ಇವರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿದೆ. ಇವತ್ತು ಮಾನ್ಯ ಅಧ್ಯಕ್ಷರು ಏನು ಸಂತಾಪ ಸೂಚನೆಯ ನಿರ್ಣಯವನ್ನು ಮಂಡಿಸಿದ್ದಾರೆ ಅದಕ್ಕೆ ನಾನು ನನ್ನ ಸಹಮತವನ್ನು ವ್ಯಕ್ತಪಡಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರ ಕುಟುಂಬ ವರ್ಗಕ್ಕೆ ಅವರು ಅಗಲುವಿಕೆಯನ್ನು ತುಂಬಿಕೊಳ್ಳುವುದಕ್ಕೆ ನಾವೆಲ್ಲರೂ ಪ್ರಾರ್ಥನೆಯನ್ನು ಮಾಡೋಣ ಎನ್ನುವಂತಹ ಮಾತನ್ನು ಹೇಳಿ, ತಾವು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ : (ಕನಕಪುರ) ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನಕ್ಕೂ ಈ ಅಧಿವೇಶನಕ್ಕೂ ಮಧ್ಯದಲ್ಲಿ ರಾಷ್ಟ್ರದ ಅತ್ಯಂತ ಪ್ರಾಮಾಣಿಕ ವ್ಯಕ್ತಿಗಳನ್ನು ಕಳೆದುಕೊಂಡಿರತಕಂಥ ದುಗುಡದಲ್ಲಿ ನಾವೆಲ್ಲರೂ ಈ ದಿವಸ ಇಲ್ಲಿ ಸೇರಿದ್ದೇವೆ. ೧೭ ಜನ ಮನ್ಯ ಸದಸ್ಯರು ಸತ್ತಂಥ ಈ ಶಾಸನ ಸಭೆಯಲ್ಲಿ ಕೆಲಸ ಮಾಡಿದಂತಹ ನಾಯಕರುಗಳನ್ನು ಸ್ಮರಿಸಿಕೊಳ್ಳುವುದರ ಜೊತೆಗೆ ಇಡೀ ಕರ್ನಾಟಕ ರಾಜ್ಯ ಇವತ್ತು ಒಂದು ರೀತಿಯ ದುಗುಡ ಮತ್ತು ಸಂಕಷ್ಟದಲ್ಲಿದೆ. ಈ ಆರು ತಿಂಗಳಲ್ಲಿ ಕರ್ನಾಟಕ

ರಾಜ್ಯದಲ್ಲಿ ನಡೆದಂತಹ ಘಟನಾವಳಿಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದಹಾಗೆ, ಮಾನ್ಯ ನಿಜಲಿಂಗಪ್ಪನವರು ಅಪ್ಪಟ ರಾಷ್ಟ್ರಪ್ರೇಮಿಗಳಾಗಿ ಈ ರಾಷ್ಟ್ರದ, ಈ ರಾಜ್ಯದ ಜನರ ಮನದಲ್ಲಿ ಆಳವಾಗಿ ಬೇರೂರಿದ್ದಂತಹ ಆದರ್ಶಗಳ ಬಗ್ಗೆ, ತತ್ವಗಳ ಬಗ್ಗೆ, ಮಾತನಾಡತಕ್ಕಂಥ ನೈತಿಕ ನಿಷ್ಠೆಯನ್ನು ಇಟ್ಟುಕೊಂಡಿದ್ದಂತಹ ಮಹಾ ಮುಖಂಡರು. ನಾನು ಬಹಳ ದುಗುಡದಿಂದ ಇಲ್ಲಿ ಸೇರಿದ್ದೇವೆಂದು ಹೇಳಿದಾಗ ಇಡೀ ನಮ್ಮ ರಾಜ್ಯದ ಜನ ಇವತ್ತು ವಿಧಾನಸೌಧದ ಹತ್ತಿರ ನೋಡುತ್ತಿದ್ದಾರೆ. ಡಾ|| ರಾಜ್‌ಕುಮಾರ್ ಅವರು ಈ ಒಂದು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನಾವೆಲ್ಲರೂ ಬಯಸಿದರೂ ಸಹ ಸುಮಾರು ೮೨ ದಿನಗಳ ಕಾಲ ಕಠೋರವಾದ ಶಿಕ್ಷೆಯನ್ನು ಅನುಭವಿಸುತ್ತಿರುವಂತಹ ದುಗುಡ ಇವತ್ತು ಸಂಪೂರ್ಣ ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲ, ಇಡೀ ದೇಶದ ಜನತೆಯ ಮನಸ್ಸಿನಲ್ಲಿ ಬಹಳ ದುಗುಡ ಇದೆ. ಇಂತಹ ಒಂದು ಸನ್ನಿವೇಶದಲ್ಲಿ ಮಾನ್ಯ ನಿಜಲಿಂಗಪ್ಪನವರನ್ನು ಕಳೆದುಕೊಂಡಿರತಕ್ಕಂಥ ನಮ್ಮ ನಾಡು ನಿಜವಾಗಿಯೂ ಸಹ ಬಡವಾಗಿದೆ. ರಾಷ್ಟ್ರದ ಗಾಂಧೀ ಯುಗದ ಕೊನೆಯ ಉಸಿರಿನ ನಾಯಕ, ರಾಷ್ಟ್ರಪ್ರೇಮಿ, ಕರ್ನಾಟಕ ಏಕೀಕರಣದ ಹರಿಕಾರ. ಹಿರಿಯ ಮುತ್ಸದ್ದಿ ನಾಯಕ ಶ್ರೀ ನಿಜಲಿಂಗಪ್ಪನವರ ಬಗ್ಗೆ ತಾವು ಮುಂಡಿಸಿರುವ ಸಂತಾಪಸೂಚಕ ನಿರ್ಣಯವನ್ನು ಬೆಂಬಲಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಅವರಿಗೆ ಹಳ್ಳಿಗಳ ಬಗ್ಗೆ ಇದ್ದಂತಹ ಅಪಾರವಾದ ಕಾಳಜಿಯಿಂದ ೧೯೭೧-೭೨ರಲ್ಲಿ ನಮ್ಮ ವಿದ್ಯಾರ್ಥಿ ದಿಸೆಯಲ್ಲಿ ಮಾನ್ಯ ನಿಜಲಿಂಗಪ್ಪನವರು ಸಂಸ್ಥಾ ಕಾಂಗ್ರೆಸ್ಸಿನ ಮುಖಂಡರಾಗಿದ್ದರು. ನಾವೆಲ್ಲರೂ ಮಹಾ ಮೈತ್ರಿಕೂಟವನ್ನು ರಚನೆ ಮಾಡಿ ಶ್ರೀ ಗೋಪಾಲಕೃಷ್ಣ ಅಡಿಗರನ್ನು ಬೆಂಗಳೂರು ಲೋಕಸಭಾ ಕ್ಷೇತ್ರಕ್ಕೆ ಶ್ರೀ ಕೆಂಗಲ್ ಹನುಮಂತಯ್ಯನವರು ವಿರುದ್ಧವಾಗಿ ನಾವು ನಿಲ್ಲಿಸಿದ್ದೆವು. ಶ್ರೀ ಗೋಪಾಲಕೃಷ್ಣ ಅಡಿಗರು, ನಾವು ನಿರೀಕ್ಷೆ ಮಾಡಿದ್ದಕ್ಕಿಂತ ಕಡಿಮೆ ಮತಗಳನ್ನು ಗಳಿಸಿದರು. ಯಾರು ನಿಜಲಿಂಗಪ್ಪನವರಿಂದ ರಾಜಕೀಯ ಅಧಿಕಾರವನ್ನು ಸ್ಥಾನಮಾನವನ್ನು ಗಳಿಸಿದರು, ಆ ಜನರೆಲ್ಲರೂ ಸಹ ಮಾನ್ಯ ನಿಜಲಿಂಗಪ್ಪನವರನ್ನು ಹೀನಾಯಮಾನವಾಗಿ ಆ ಚುನಾವಣೆಯಲ್ಲಿ ಟೀಕೆ ಮಾಡಿದರು. ಆದರೂ ಸಹ ಯಜಮಾನರು ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಅವರ ರಾಜಕೀಯ ಜೀವನ ಅತ್ಯಂತ ಆದರ್ಶ, ನುಡಿದಂತೆ ನಡೆದಂತಹ ನಾಯಕರು ಅವರು. ೧೯೪೭ರ ಸ್ವಾತಂತ್ರ್ಯದ ನಂತರ, ಮಹಾತ್ಮಾ ಗಾಂಧೀಜಿಯವರ ನಂತರ, ಜಯಪ್ರಕಾಶ್ ನಾರಾಯಣ್, ಮೊರಾರ್ಜಿ ಬಾಯ್‌ರವರು, ಅಶೋಕ ಮೆಹ್ತಾರವರು, ಆಚಾರ್ಯ ಕೃಪಲಾನಿಯವರು, ಇವರ ಜೊತೆಯಲ್ಲಿ ಒಡಗೂಡಿ ೧೯೭೭ರಲ್ಲಿ ಕಾಂಗ್ರೆಸ್ಸೇತರ ಪ್ರಥಮ ಸರ್ಕಾರ ದೇಶದಲ್ಲಿ ಬರಬೇಕಾದರೆ ನಿಜಲಿಂಗಪ್ಪನವರು ಕಾರಣಕರ್ತರೆಂದು ನಾವು ಹೇಳಬೇಕಾಗುತ್ತದೆ. ೧೯೬೯ರಲ್ಲಿ ಕಾಂಗ್ರೆಸ್ ಇಬ್ಭಾಗವಾದಂತಹ ಸಂದರ್ಭದಲ್ಲಿ ಅವರು ತೆಗೆದುಕೊಂಡಂತಹ ಒಂದು ನೈತಿಕ ನಿರ್ಧಾರ, ಆ ನಿರ್ಧಾರದಿಂದ ಇವತ್ತು ಬಹಳಷ್ಟು ಜನ ಅಧಿಕಾರವನ್ನು ಅನುಭವಿಸುವಂಥಾದ್ದಕ್ಕೆ ಅನುಕೂಲವಾಯಿತು. ಅದಾದ ನಂತರ ತಮಗೆ ಗೊತ್ತಿದೆ. ೧೯೭೭ರ ನಂತರ ಎರಡು ವರ್ಷಗಳಲ್ಲಿ ಯಾವ ಮಹಾತ್ಮಾ ಗಾಂಧೀಜಿ ಪ್ರತಿಮೆಯ ಮುಂದೆ ನಾವು ಪ್ರಮಾಣ ಮಾಡಿ, ನಾವು ದೇಶವನ್ನು ಆಳುತ್ತೇವೆಂದು ಹೇಳಿದರೂ ದೇಶವನ್ನು ಆಳುವುದಕ್ಕೆ ಆಗಲಿಲ್ಲ. ಆ ಸಂದರ್ಭದಲ್ಲಿ ಅವರಿಗೆ ಬಹಳ ನೋವಾಗಿ, ೧೯೭೮-೭೯ರಲ್ಲಿ ಸಕ್ರೀಯ ರಾಜಕಾರಣದಿಂದ ಯಜಮಾನರು ಹಿಂದಕ್ಕೆ ಸರಿದರು. ನಮ್ಮ ಊರಿಗೆ ಅವರ ಮಗಳನ್ನು ಕೊಟ್ಟಿದ್ದಾರೆ, ಅದು ತಮಗೂ ಗೊತ್ತಿದೆ. ಮಾನ್ಯ ಅಧ್ಯಕ್ಷರೇ, ಅವರ ಅಳಿಯಂದಿರು ಮಾನ್ಯ ಎಂ.ವಿ. ರಾಜಶೇಖರನ್ ಅವರು. ಅವರು ಎಲ್ಲೇ ಹೋದರೂ ಸಹ ನಿಮ್ಮ ಊರು ಹೇಗಿದೆ? ನಿಮ್ಮ ಊರಿನಲ್ಲಿ ರಸ್ತೆ ಆಗಿದೆಯೇ, ಕುಡಿಯುವ ನೀರು ಇದೆಯೇ? ಗುಡಿಸಲುಗಳು ಹಾಗೆಯೇ ಇವೆಯೇ? ಎನ್ನುವ ಮಾತಗಳನ್ನು ಬಹುಶ: ನನ್ನ ಒಬ್ಬನಿಗೇ ಅಲ್ಲ, ರಾಜಕೀಯದಲ್ಲಿ

ಅವರಿಗೆ ಪರಿಚಯ ಇರತಕ್ಕಂಥ ಪ್ರತಿಯೊಬ್ಬರಿಗೂ ಕೇಳುತ್ತಿದ್ದರು. ಅವರಿಗೆ ಹಳ್ಳಿಗಳ ಬಗ್ಗೆ ಇದ್ದಂತಹ ಕಾಳಜಿಯನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಅವರು ನಿಜವಾದ ಬಸವ ತತ್ವಗಳ ಪ್ರವರ್ತಕರಾಗಿದ್ದರು. ಅವರ ಕೊನೆಯ ೫ ವರ್ಷಗಳ ಕಾಲದಲ್ಲಿ ನಡೆದದ್ದನ್ನು ನಾನು ನೆನೆಸಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ನಾನು ಮಾನ್ಯ ಜಾಫರ್ ಷರೀಪ್ ಅವರನ್ನು ಸಹ ನೆನಸಿಕೊಳ್ಳುತ್ತೇನೆ. ಚಿತ್ರದುರ್ಗದಲ್ಲಿ ಕೆಲವು ಯುವಕರು, ಕೆಲವು ಹಿರಿಯರು, ಅವರು ಅವರ ಶ್ರೀಮತಿಯವರನ್ನು ಕಳೆದುಕೊಂಡ ಮೇಲೆ, ಹೋದವರ ಕಡೆ, ಹೇಳುತ್ತಿದ್ದರು, ನನಗೆ ಮುಪ್ಪಿನ ಕಾಯಿಲೆ ಬಂದಿದೆಯಪ್ಪ, ಆದರೆ ಬದುಕಬೇಕೆನ್ನುವ ಛಲ ಇದೆ. ನನಗೆ ಪುನರ್‌ಜನ್ಮದಲ್ಲಿ ನಂಬಿಕೆ ಇಲ್ಲ. ಚೆನ್ನಾಗಿ ಬದುಕಬೇಕೆನ್ನುವ ಮಾತನ್ನು ಹೇಳುತ್ತಿದ್ದರು. ಆ ಕೆಲವರ ಹೆಸರುಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ನಿಜವಾಗಿಯೂ ಸಹ ಅವರ ಜೊತೆಯಲ್ಲಿದ್ದು, ಕೆಲವರು ಯುವಕರು, ಕೆಲವರು ಹಿರಿಯರು, ಅವರಿಗೆ ಸಹಕಾರವನ್ನು ಕೊಟ್ಟಿದ್ದಾರೆ. ಅವರನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸುವುದಕ್ಕೆ ಬಯಸುತ್ತೇನೆ. ಅವರ ಅಳಿಯಂದಿರಾದ ಶ್ರೀಮಾನ್ ಮುದ್ದಪ್ಪನವರು ಈ ರಾಜ್ಯದ ಮುಖ್ಯ ಕಾರ್ಯದರ್ಶಿಗಳಾಗಿದ್ದರು. ಶ್ರೀಮಾನ್ ಎಂ.ವಿ. ರಾಜಶೇಖರನ್ ಅವರು ಅತ್ಯಂತ ಪ್ರಾಮಾಣಿಕರಾಗಿರತಕ್ಕಂಥ ನಾಯಕರು. ಅವರಿಗೆ ಏನಾದರೂ ಸಹಾಯ ಮಾಡಿ ಎಂದು ಯಾವ ಮುಖ್ಯಮಂತ್ರಿಗಳಿಗೂ ಅವರು ಒಂದು ಶಿಫಾರಸ್ಸು ಪತ್ರವನ್ನು ಕೊಡಲಿಲ್ಲ. ಅಂತಹ ಒಂದು ನೈತಿಕ ಸ್ಥೈರ್ಯ ಇಟ್ಟುಕೊಂಡಿದ್ದವರು. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಆರೋಗ್ಯ ಮಂತ್ರಿಗಳು ಮತ್ತು ಆರೋಗ್ಯ ಇಲಾಖೆಯವರು ಮತ್ತು ಬೌರಿಂಗ್ ಆಸ್ಪತ್ರೆ ಸಿಬ್ಬಂದಿ ವರ್ಗದವರು ಆ ಯಜಮಾನರ ಕೊನೆಯ

೩.೦೦ ಪಿ.ಎಂ

ದಿವಸಗಳಲ್ಲಿ ಅವರನ್ನು ಬಹಳ ಚೆನ್ನಾಗಿ ನೋಡಿಕೊಂಡರು. ಆ ಯಜಮಾನರ ಕೊನೆಯ ದಿನಗಳಲ್ಲಿ ಅವರಿಗೆ ತುಂಬಾ ಚೆನ್ನಾಗಿ ವೈದ್ಯಕೀಯ ಸೌಲಭ್ಯಗಳನ್ನು ಕೊಟ್ಟು ಉಪಚರಿಸಿರುವುದನ್ನು ತಾವುಗಳು ಸಂತಾಪ ಸೂಚಕ ನಿರ್ಣಯದ ಮೇಲೆ ಮಾತನಾಡುವ ಸಂದರ್ಭದಲ್ಲಿ ಪ್ರಸ್ತಾಪಿಸಿರುವುದು ಮೆಚ್ಚತಕ್ಕಂಥ ವಿಚಾರವಾಗಿದೆ. ಇನ್ನೊಂದು ಪ್ರಮುಖವಾದ ವಿಚಾರ ಅಂದರೆ, ಅವರ ಕೊನೆಯ ಘಳಿಗೆಯಲ್ಲಿ ಸರಕಾರದ ಮರ್ಯಾದೆಯನ್ನು ಕೊಡುವುದರ ಜೊತೆಗೆ, ಅವರ ಅಂತಿಮ ಸಂಸ್ಕಾರಕ್ಕೆ ಸರ್ಕಾರದ ಸಕಲ ಗೌರವಗಳನ್ನು ಕೊಡುವುದರ ಜೊತೆಗೆ, ಕೊನೆಯ ಎರಡು ತಿಂಗಳುಗಳ ಅವಧಿಯಲ್ಲಿ ಅವರನ್ನು ನೋಡಿಕೊಂಡಿರುವ ರೀತಿ ಎಲ್ಲರೂ ಮೆಚ್ಚತಕ್ಕಂಥಾದ್ದು. ಅದಕ್ಕಾಗಿ ನಾನು ಸರ್ಕಾರದವರಿಗೆ ನನ್ನ ಮೆಚ್ಚುಗೆಯ ಮಾತುಗಳ ಮೂಲಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅದೇ ರೀತಿಯಲ್ಲಿ ಚಿತ್ರದುರ್ಗದ ಜಗದ್ಗುರುಗಳಾರಾದ ಶ್ರೀ ಮುರುಘರಾಜೇಂದ್ರ ಸ್ವಾಮಿಯವರು ತಮ್ಮ ಪಾಲಿನ ಕರ್ತವ್ಯವನ್ನು ಅತ್ಯಂತ ಗೌರವಯುತವಾಗಿ ಮಾಡಿದ್ದಾರೆ. ಮಾನ್ಯ ನಿಜಲಿಂಗಪ್ಪನವರ ಪಾರ್ಥೀವ ಶರೀರವನ್ನು ಸೂಕ್ತ ಸ್ಥಳದಲ್ಲಿರಿಸಿ, ಸಾರ್ವಜನಿಕರು ಇಂಥ ಒಂದು ಮಹಾನ್ ಚೈತನ್ಯ ಇಲ್ಲಿ ಇದೆ, ಆ ಮೂಲಕ ಅನೇಕ ಮಹತ್ವಪೂರಿತ ಹಾಗೂ ಚೈತನ್ಯದಾಯಕ ವಿಚಾರಗಳನ್ನು ತಿಳಿಯಲು ಇದೆ, ಕಲಿಯಲು ಇದೆ ಎಂಬ ಕಾರಣಕ್ಕಾಗಿ ಅಂತ್ಯ ಸಂಸ್ಕಾರಕ್ಕಾಗಿ ಒಂದು ವನಪ್ರದೇಶವನ್ನು ಕೊಟ್ಟಿದ್ದಾರೆ. ಸ್ವಾಮೀಜಿಯವರು ಈ ಕುರಿತು ಅನುಗ್ರಹಿಸಿ ನಿರ್ವಹಿಸಿದ ಪಾತ್ರಕ್ಕಾಗಿ ನಾವೆಲ್ಲರೂ ಪರಮಪೂಜ್ಯರನ್ನು ಅಭಿನಂದಿಸಬೇಕಾಗಿದೆ.

ಮಾನ್ಯ ನಿಜಲಿಂಗಪ್ಪನವರ ಆತ್ಮಕ್ಕೆ ನಿಜವಾಗಿಯೂ ಶಾಂತಿಯು ಲಭಿಸಬೇಕಾದರೆ ನಾವುಗಳು ಮಾಡಬೇಕಾದ ಕೆಲಸಗಳೇನು? ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಆ ಕಾರಣಕ್ಕಾಗಿ ಯಾವುದೇ ಸಂದರ್ಭದಲ್ಲಿಯೂ ನಾವುಗಳು ಯಾರೂ ಕೂಡ ಕರ್ನಾಟಕ ರಾಜ್ಯದ ವಿಭಜನೆಯ ಬಗ್ಗೆ ಮಾತನಾಡಲೇಬಾರದು. ಕರ್ನಾಟಕ ಅನೇಕ ಭಾಗಗಳು ಇನ್ನೂ ಬೆಳೆಯಬೇಕಾದುದು, ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಹೊಂದಬೇಕಾದುದು ಇದೆ. ಅದನ್ನು ಯಾರು ಅಲ್ಲಗಳೆಯುವಂತಿಲ್ಲ. ಹೈಕೋರ್ಟ್ ಪೀಠ, ರಸ್ತೆಗಳು, ಕುಡಿಯುವ ನೀರಿನ ವ್ಯವಸ್ಥೆ, ಕೈಗಾರಿಕೆಗಳ ಸ್ಥಾಪನೆ, ಮುಂತಾಗಿ ಪ್ರತಿಯೊಂದು ವಿಚಾರದಲ್ಲಿಯೂ ಅಭಿವೃದ್ಧಿ ಕೆಲಸಕಾರ್ಯಗಳು ಆಗಬೇಕಾದುದು ಇದೆ. ಇದು ನಮ್ಮೆಲ್ಲರ ಕಣ್ಣಿಗೆ ಕಾಣುವಂಥ ವಿಚಾರವಾಗಿದ್ದು ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಕನ್ನಡ ನಾಡನ್ನು ಒಂದಾಗಿಸಿ ಈ ರಾಷ್ಟ್ರದಲ್ಲಿ ಭಾಷಾವಾರು ಪ್ರಾಂತ್ಯ ರಚನೆಗೆ ಕಾರಣರಾದವರು ನಿಜಲಿಂಗಪ್ಪನವರಂಥ ಮಹಾನ್ ಮುತ್ಸದ್ದಿಗಳು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಈ ಕುರಿತು ಅವರು ಮಾಡಿದಂಥ ಹೋರಾಟವನ್ನು ನಾವುಗಳು ನೆನಸಿಕೊಳ್ಳಬೇಕಾಗುತ್ತದೆ. ಅವರು ಹುಟ್ಟಿದ್ದು ಬಳ್ಳಾರಿಯಲ್ಲಿ, ಬೆಳೆದಿದ್ದು ಚಿತ್ರದುರ್ಗದಲ್ಲಿ; ಅವರ ಕರ್ಮಭೂಮಿಯು ಕರ್ನಾಟಕ. ಆದರೆ ಭರತಖಂಡದ ಉದ್ದಗಲಕ್ಕೂ ಕರ್ನಾಟಕ ಅಂದರೆ ಅದು ನಿಜಲಿಂಗಪ್ಪನವರು ಎಂಬ ಸ್ಥಿತಿಗೆ ತಂದಂಥ ಮಹಾನ್ ಕರ್ನಾಟಕದ ಕುವರರನ್ನು ನಾವಿಂದು ಕಳೆದುಕೊಂಡಿದ್ದೇವೆ. ಅವರು ಮೃದು ಸ್ವಭಾವದ ಜೊತೆಗೆ, ಅವರ ವೈಚಾರಿಕತೆಯಲ್ಲಿರತಕ್ಕಂಥ ಕಾಠಿಣ್ಯತೆಯನ್ನು ಕೂಡ ನಾವು ಗಮನಿಸಬೇಕು. ೧೯೬೯ನೇ ಇಸವಿಯಲ್ಲಿ ಅವರು ಸ್ವಲ್ಪಮಟ್ಟಿಗೆ ಈ ಕಡೆಗೆ ಏನಾದರೂ ಜಾರಿದ್ದರೆ, ಬಹುಶ: ಕಾಂಗ್ರೆಸ್ಸೇತರ ಸರಕಾರ..... ಏಕೆಂದರೆ ಡಾ॥ ಲೋಹಿಯಾರವರು ತೀರಿಕೊಂಡಿದ್ದರು, ಮಾನ್ಯ ಜಯಪ್ರಕಾಶ್ ನಾರಾಯಣ್‌ರವರು ಆಗ ಮುಂದೆ ಇರಲಿಲ್ಲ. ಒಂದು ರಾಜಕೀಯ ಪಕ್ಷವನ್ನು ಜಯಪ್ರಕಾಶ್ ನಾರಾಯಣ್‌ರವರು ತ್ಯಜಿಸಿದ್ದರು. ಆದ್ದರಿಂದ ಈ ರಾಷ್ಟ್ರದಲ್ಲಿ ಕಾಂಗ್ರೆಸ್ಸೇತರ ಸರಕಾರ ಬಂದಿರಬೇಕಾದರೆ ಅಧಿಕಾರದಲ್ಲಿ ಇದ್ದು ಅನುಭವಿಸಿದವರು ನಾವೆಲ್ಲರೂ ನಿಜಲಿಂಗಪ್ಪನವರ ಆದರ್ಶಗಳನ್ನು ಪರಿಪಾಲಿಸಲು ಪ್ರಯತ್ನ ಮಾಡಬೇಕು. ತಾನಾಗಿಯೇ ಬಂದಂತಹ ರಾಷ್ಟ್ರಪತಿ ಪದವಿಯನ್ನು ಅವರು ಎರಡು ಬಾರಿ ಬೇಡ ಎಂದು ಹೇಳಿದ್ದರು. ನನಗೆ ಗೊತ್ತಿರುವ ಹಾಗೆ ೧೯೭೭ರಲ್ಲಿ ಮಾನ್ಯ ಮೊರಾರ್ಜಿ ದೇಸಾಯಿಯವರು, ಇವರು ಆ ಪದವಿಯನ್ನು ಒಪ್ಪದೇ ಇದ್ದಂಥ ಸಂದರ್ಭದಲ್ಲಿ ಮಾನ್ಯ ಸಂಜೀವರೆಡ್ಡಿಯವರ ಜೊತೆಗೆ ತಮಿಳುನಾಡಿನ ಶ್ರೀಮತಿ ರುಕ್ಮಿಣಿ ಅರುಂಡಾಳ್ ಎನ್ನುವ ಒಬ್ಬ ಹೆಣ್ಣು ಮಗಳ ಹೆಸರನ್ನು ಶಿಫಾರಸ್ಸು ಮಾಡಿದ್ದರು. ನಿಜಲಿಂಗಪ್ಪನವರನ್ನು ಸದರಿ ಹುದ್ದೆಗೆ ತರಲೇಬೇಕೆಂದು ಮೊರಾರ್ಜಿದೇಸಾಯಿಯವರು ಬಹಳ ಸಲ ಕೇಳಿಕೊಂಡಿದ್ದರು. ಅಂತೆಯೇ ೧೯೬೭ರಲ್ಲಿಯೇ ಅವರೇ ರಾಷ್ಟ್ರದ ಅಧ್ಯಕ್ಷರಾಗಬೇಕೆಂದು ಒತ್ತಾಯ ಇದ್ದರೂ ಕೂಡ ಅವರು ಆ ಪದವಿಯನ್ನು ಬಯಸಲೇ ಇಲ್ಲ. ಅಂಥ ಒಬ್ಬ ಮಹಾನ್ ಪುರುಷ, ಸ್ವಾತಂತ್ರ್ಯ ಹೋರಾಟಗಾರ, ಸ್ವಾತಂತ್ರ್ಯ ಸೇನಾನಿ, ಏಕೀಕರಣದ ರೂವಾರಿ, ಹೀಗೆ ಒಬ್ಬ ಮಹಾನ್ ವ್ಯಕ್ತಿಯಾಗಿದ್ದರೂ ಚುನಾವಣಾ ರಾಜಕೀಯದಲ್ಲಿ ಅವರು ರಾಜ್ಯದ ಹೊಸದುರ್ಗ ಕ್ಷೇತ್ರದಲ್ಲಿ ಸೋಲಬೇಕಾಗಿ ಬಂದುದು ಪರಿಸ್ಥಿತಿಯ ಒಂದು ಪಿತೂರಿ ಎಂದು ಹೇಳಬಹುದು. ಆದರೆ ರಾಜಕಾರಣದಲ್ಲಿ ಯಾವೊತ್ತೂ ಕೂಡ ನೇರ ನುಡಿಗಳಿಗೆ, ಪ್ರಾಮಾಣಿಕತೆಗೆ, ಇವೊತ್ತಿನ ಜಾತಿಯ ಪದ್ಧತಿ ಮತ್ತಿತರ ವ್ಯವಸ್ಥೆಗಳು ಅವಕಾಶ ಮಾಡಿಕೊಡುವುದಿಲ್ಲ. ನಿಜಲಿಂಗಪ್ಪರಂಥವರು ಚುನಾವಣೆಯಲ್ಲಿ ಸೋಲತಕ್ಕಂಥ ಪರಿಸ್ಥಿತಿಯ ಬಂದಿದ್ದು ಇದಕ್ಕೆ ಸಾಕ್ಷಿಯಾಗಿದೆ.

ನಮ್ಮ ರಾಜ್ಯದ ಮುಖ್ಯಮಂತ್ರಿಯವರಾಗಿದ್ದಂಥ ಮಾನ್ಯ ಜೆ.ಹೆಚ್. ಪಟೇಲ್‌ರವರು ಅವರ ಸಂಬಂಧಿಕರು. ಅವರ ಮಗಳನ್ನು ಮಾನ್ಯ ಪಟೇಲ್‌ರವರ ಮನೆಗೆ ಕೊಟ್ಟಿದ್ದರು. ನಿಜಲಿಂಗಪ್ಪನವರು ಪಟೇಲ್‌ರವರನ್ನು ಜಯಣ್ಣ...... ಜಯಣ್ಣ ..... ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ಮಾನ್ಯ ನಿಜಲಿಂಗಪ್ಪನವರಿಗೆ ಪಟೇಲ್‌ರವರು ಮುಖ್ಯಮಂತ್ರಿಯಾಗಿದ್ದಾಗ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ಕೊಡುವ ಸುಸಂದರ್ಭದಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸತ್ಕಾರಕೂಟವನ್ನು ಇಟ್ಟುಕೊಂಡಿದ್ದರು. ಆಗ ಪಟೇಲ್‌ರವರು ಮಾತನಾಡುತ್ತಾ "ತಮ್ಮ ಮುಪ್ಪಿನ ಕಾಲದಲ್ಲಿ ಯಾವುದೇ ಕಾಯಿಲೆಗಳು ಬಾಧಿಸುವ ಮುನ್ನ ಈ ದೇಹವನ್ನು ಬಿಡಬೇಕು" ಎಂಬ ಮಾತನ್ನು ಹೇಳಿದರು. ಅಂಥ ಒಂದು ಸಲುಗೆಯನ್ನು ನಿಜಲಿಂಗಪ್ಪನವರು ಜಯಣ್ಣನವರಿಗೆ ಕೊಟ್ಟಿದ್ದರು. ಅದೇ ರೀತಿಯ ಸಲುಗೆಯಿಂದ ಅವರು ಪಟೇಲ್‌ರವರಿಗೆ ಹೇಳುತ್ತಿದ್ದರು. ಜಯಣ್ಣ ನೀನು ಬಹಳ ಬುದ್ಧಿವಂತನಪ್ಪಾ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದೀಯಾ.. ಆದರೆ ನಿನ್ನ ದೇಹವನ್ನು ಸ್ವಲ್ಪ ಚೆನ್ನಾಗಿ ಇಟ್ಟುಕೊಳ್ಳಬೇಕು - ಎಂದು ಹೇಳತಕ್ಕಂಥ ಧೈರ್ಯ ನಿಜಲಿಂಗಪ್ಪನವರಲ್ಲಿ ಇತ್ತು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳವರಲ್ಲಿ ಒಂದೆರಡು ಕೋರಿಕೆಗಳನ್ನು ಸಲ್ಲಿಸುವುದರಲ್ಲಿ ಅದು ಅಪ್ರಸ್ತುತವಾಗಲಾರದು ಎಂದು ಭಾವಿಸಿ ಪ್ರಸ್ತಾಪಿಸುತ್ತೇನೆ. ಚಿತ್ರದುರ್ಗಕ್ಕೆ ಕುಡಿಯುವ ನೀರನ್ನು ಸುವ್ಯವಸ್ಥಿತವಾಗಿ ಒದಗಿಸಲು ಯಾವ ಸರಕಾರಗಳಿಂದಲೂ ಆಗಲಿಲ್ಲ. ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದ ಹಾಗೆ, ನಿಜಲಿಂಗಪ್ಪನವರ ಕೊನೆಯ ಉಸಿರು ಇರುವವರೆಗಿನ ಆಕಾಂಕ್ಷೆಯು ಭದ್ರಾ ಮೇಲ್ದಂಡೆ ಯೋಜನೆಯನ್ನು ಏನಾದರೂ ಮಾಡಿ ಕಾರ್ಯಗತಗೊಳಿಸುವ ಕುರಿತಾಗಿತ್ತು. ಆದ್ದರಿಂದ ಭದ್ರಾ ಮೇಲ್ದಂಡೆ ಯೋಜನೆಗೆ ನಿಜಲಿಂಗಪ್ಪನವರ ಹೆಸರನ್ನು ಇಟ್ಟು ಕೂಡಲೇ ಅದನ್ನು ಕಾರ್ಯಗತಗೊಳಿಸಬೇಕು. ಪ್ರಪಂಚದ ಯಾವುದೇ ಬ್ಯಾಂಕ್‌ನಿಂದ ಹಣಕಾಸಿನ ನೆರವನ್ನು ಪಡೆದುಕೊಂಡರೂ ಪರವಾಗಿಲ್ಲ, ಆ ಯೋಜನೆಯನ್ನು ಕಾರ್ಯಗತ ಮಾಡಲೇಬೇಕು. ಅದರ ಮೂಲಕ ಚಿತ್ರದುರ್ಗ, ದಾವಣಗೆರೆ ಹಾಗೂ ಹಾವೇರಿ ಮುಂತಾಗಿ ಮೂರು ನಾಲ್ಕು ಜಿಲ್ಲೆಗಳಿಗೆ ಅದರಿಂದ ಉಪಯೋಗವಾಗುತ್ತದೆ. ಆದ್ದರಿಂದ ಆ ಕುರಿತು ವಿಶೇಷ ಪ್ರಯತ್ನಗಳನ್ನು ಅವರು ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಯವರು ರಾಜ್ಯದಲ್ಲಿ ಲೋಕಾಯುಕ್ತಕ್ಕೆ ಹೆಚ್ಚಿನ ಒಂದು ಶಕ್ತಿಯನ್ನು ತಂದುಕೊಡುತ್ತೇನೆ ಎಂಬ ಮಾತನ್ನು ಹೇಳಿದ್ದಾರೆ. ಮಾನ್ಯ ನಿಜಲಿಂಗಪ್ಪನವರು ನಿಜವಾಗಿಯೂ ಒಬ್ಬ ಅಪ್ಪಟ ಪ್ರಾಮಾಣಿಕ ವ್ಯಕ್ತಿಗಳಾಗಿದ್ದರು, ಆದರೆ ಇವೊತ್ತಿನ ಪರಿಸ್ಥಿತಿಯಲ್ಲಿ ಆ ಒಂದು ಹೆಜ್ಜೆಯಲ್ಲಿ ಹೋಗಲು ಕಷ್ಟ ಎಂಬ ಅರಿವು ಕೂಡ ನಮ್ಮಲ್ಲಿದೆ; ನಿಜಲಿಂಗಪ್ಪನವರ ಆತ್ಮಕ್ಕೆ ಮತ್ತಷ್ಟು ಶಾಂತಿ ಲಭಿಸಬೇಕಾದರೆ ತಾವುಗಳು ಹೇಳಿರುವ ಹಾಗೆ ಲೋಕಾಯುಕ್ತಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡಬೇಕು. ಅದೇ ರೀತಿಯಲ್ಲಿ ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ನಿಜಲಿಂಗಪ್ಪನವರ ಹೆಸರಿನಲ್ಲಿ ಒಂದು ಅಖಿಲ ಭಾರತ ಫೌಂಡೇಶನ್‌ನ್ನು ಕರ್ನಾಟಕ ರಾಜ್ಯದಲ್ಲಿ ಸ್ಥಾಪನೆ ಮಾಡಬೇಕು. ಈ ಬಗ್ಗೆ ತಾವುಗಳು ತಮ್ಮ ಪಕ್ಷದಿಂದ ಮಾನ್ಯ ಪ್ರಧಾನಿಯವರಿಗೆ ಪತ್ರವನ್ನು ಬರೆದು ಕೋರಿಕೊಳ್ಳಬೇಕು. ಈ ಹಿಂದೆ ಕೇಂದ್ರ ಸರಕಾರದವರು ರಾಜೀವ್‌ಗಾಂಧಿ ಫೌಂಡೇಶನ್ ಎಂದು ಮಾಡಿದ್ದರು. ರಾಜೀವ್‌ಗಾಂಧಿ ಡ್ರಿಂಕಿಂಗ್ ವಾಟರ್ ಮಿಶನ್ ಎಂದು ಹೇಳಿ ಅನೇಕ ಟೆಕ್ನಾಲಜಿ ಮಿಶನ್‌ಗಳನೆಲ್ಲಾ ಮಾಡಿ ಅದಕ್ಕಾಗಿ ೧೦೦ಕೋಟಿ ರೂಪಾಯಿಗಳನ್ನು ಆಗಿನ ಪ್ರಧಾನಿಯವರಾಗಿದ್ದ ಶ್ರೀಮಾನ್ ನರಸಿಂಹರಾವ್‌ರವರು ಕೊಟ್ಟಿದ್ದರು. ಆದ್ದರಿಂದ ಮಾನ್ಯ ನಿಜಲಿಂಗಪ್ಪನವರಿಗಿದ್ದಂಥ ರೂರಲ್ ಡೆವಲಪ್‌ಮೆಂಟ್ ಕಮಿಟ್‌ಮೆಂಟ್ ಏನಿತ್ತು

ಅದನ್ನು ತೀರಿಸಬೇಕಾದರೆ ತಾವುಗಳು ಈ ಒಂದು ಫೌಂಡೇಶನ್‌ನ್ನು ಸ್ಥಾಪನೆ ಮಾಡಬೇಕು. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರೇ ಅಧ್ಯಕ್ಷರಾಗಿರಲಿ. ಅದಕ್ಕೆ ೧೦೦ಕೋಟಿ ರೂಪಾಯಿಗಳನ್ನು ಕೊಡುವಂತಾಗಲಿ. ನಾವು ಯಾವ್ಯಾವುದಕ್ಕೋ ಯಾವ್ಯಾವ ಹೆಸರುಗಳನ್ನೋ ಇಡುತ್ತೇವೆ. ಅಂಥಾದ್ದರಲ್ಲಿ ನಮ್ಮ ಕರ್ನಾಟಕ ಸುಪುತ್ರ ಸ್ವಾತಂತ್ರ್ಯ ಸೇನಾನಿಯ ಹೆಸರಿನಲ್ಲಿ ಒಂದುಫೌಂಡೇಶನ್‌ನ್ನು ಮಾಡಬೇಕು; ಆ ಮೂಲಕ ಅವರಿಗೆ ಗೌರವವನ್ನು ಕೊಡಬೇಕೆಂಬ ಮಾತನ್ನು ನಾನು ಹೇಳಬಯಸುತ್ತೇನೆ. ಹಾಗೆಯೇ ಅವರ ಕುಟುಂಬ ವರ್ಗದವರು ಯಾರು ಸರಕಾರಕ್ಕೆ ಅರ್ಜಿಯನ್ನು ಕೊಡುವಂತಹವರಲ್ಲ. ಅವರ ಕುಟುಂಬದವರು, ಮಕ್ಕಳು ಯಾವ ಸ್ಥಿತಿಯಲ್ಲಿದ್ದಾರೆ ಎಂಬ ವಿಚಾರ ನಮಗೆ ಗೊತ್ತಿದೆ. ಅವರುಗಳಿಗೆ ಧೈರ್ಯವನ್ನು ನಾವುಗಳು ತುಂಬೋಣ. ಯಜಮಾನರನ್ನು ಕಳೆದುಕೊಂಡಿರುವುದು ಅವರ ಕುಟುಂಬ ವರ್ಗದವರು ಮಾತ್ರವಲ್ಲ, ಬಳ್ಳಾರಿ, ಚಿತ್ರದುರ್ಗದವರು ಮಾತ್ರವಲ್ಲ, ಕರ್ನಾಟಕದ ಜನತೆ ಮಾತ್ರವಲ್ಲ, ಇಡೀ ಹಿಂದೂಸ್ಥಾನದ ಜನತೆಯು ಅವರನ್ನು ಕಳೆದುಕೊಂಡು ದುಃಖತಪ್ತರಾಗಿದ್ದಾರೆ ಎಂಬ ಸ್ಥಿತಿಯಲ್ಲಿ ಸಾವಿದ್ದೇವೆ ಎಂಬ ಮಾತನ್ನು ಹೇಳಬಯಸುತ್ತೇನೆ.

ಮಾನ್ಯ ಧರ್ಮವೀರರವರು ಕೆಲವೇ ತಿಂಗಳುಗಳ ಆಡಳಿತವನ್ನು ರಾಜ್ಯಪಾಲರಾಗಿ ಈ ರಾಜ್ಯಕ್ಕೆ ಸಲ್ಲಿಸಿದವರು. ಅವರು ರಾಜ್ಯದ ಜನರ ಮನೆ ಮಾತಾಗಿದ್ದರು. ಅವರು ಈ ರಾಜ್ಯದ ಆದರ್ಶ ರಾಜ್ಯಪಾಲರಾಗಿದ್ದರು. ಆಡಳಿತದಲ್ಲಿ ಧಕ್ಷತೆ ಮತ್ತು ಕಠಿಣತೆಗೆ ಅವರು ಹೆಸರಾಗಿದ್ದರು. ಅವರು ಪೋಲೀಸ್ ರಿಫಾರ್ಮೇಶನ್ ಬಗ್ಗೆ ಒಂದು ರಿಪೋರ್ಟ್‌ನ್ನು ಕೊಟ್ಟಿರುವುದನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೂಡ ಬಲ್ಲವರಾಗಿದ್ದಾರೆ. ಅದರಲ್ಲಿ ಪೋಲೀಸ್ ವ್ಯವಸ್ಥೆ ಯಾವರೀತಿಯಾಗಬೇಕು, ಆ ಕುರಿತು ಸುಧಾರಣೆಗಳು ಯಾವರೀತಿಯಲ್ಲಾಗಬೇಕೆಂಬ ಬಗ್ಗೆ ಅದರಲ್ಲಿ ಅವರು ಹೇಳಿದ್ದಾರೆ. ನಮ್ಮ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಈ ವ್ಯವಸ್ಥೆ ಹೇಗಿರಬೇಕೆಂಬ ಬಗ್ಗೆ ಅವರು ೨೦ ವರ್ಷಗಳ ಹಿಂದೆ ಆಲೋಚಿಸಿ ವರದಿ ಕೊಟ್ಟಿದ್ದರು.

ಈ ಪರಿಸ್ಥಿತಿಯಲ್ಲಿ ಪೋಲೀಸರಿಗೆ ಹೆಚ್ಚಿನ ಸ್ವಾತಂತ್ರ್ಯ ಮತ್ತು ಶಕ್ತಿಯನ್ನು ಕೊಡದೆ ಹೋದರೆ ಯಾವರೀತಿಯಾಗುತ್ತದೆ ಎಂಬುದನ್ನು ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಅದನ್ನು ಜಾರಿಗೆ ತರುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡೋಣ. ಮಾನ್ಯ ಧರ್ಮವೀರರವರು ಈ ರಾಜ್ಯದ ಒಬ್ಬ ಒಳ್ಳೆಯ ಸ್ನೇಹಿತರಾಗಿದ್ದರು. ಇವತ್ತು ತುಂಬಾ ಜನ ಸ್ನೇಹಿತರು, ಹಿತೈಷಿಗಳು ಅವರನ್ನು ಕಳೆದುಕೊಂಡಿದ್ದಾರೆ. ಅವರು ಕರ್ನಾಟಕ ರಾಜ್ಯದ ಹಿತಾಕಾಂಕ್ಷಿಗಳಾಗಿದ್ದರು ತನ್ನನ್ನು ಭೇಟಿ ಮಾಡಿದ ಎಲ್ಲರಲ್ಲಿಯೂ ಕೂಡ ಕರ್ನಾಟಕ ಸ್ಥಿತಿಗತಿಗಳ ಬಗ್ಗೆ ವಿಚಾರಿಸಿಕೊಳ್ಳುತ್ತಿದ್ದರು. ಅಂಥ ಒಬ್ಬ ಕರ್ನಾಟಕ ಸ್ನೇಹಿತರನ್ನು ನಾವೆಲ್ಲರೂ ಕಳೆದುಕೊಂಡಿದ್ದೇವೆ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ. ಈ ಒಂದು ಪರಿಸ್ಥಿತಿ ಹೇಗಿದೆ ಅಂದರೆ ಸದಸ್ಯರಾಗಿದ್ದ ಮಾನ್ಯ ಪಾಸಗೌಡ ಪಾಟೀಲರು ಸ್ವರ್ಗಸ್ಥರಾಗಿ ಅವರ ಸಂತಾಪ ಸೂಚನೆ ಮಾಡುವುದಕ್ಕೆ ಮಂಚೆಯೇ ಅವರ ಜಾಗವನ್ನು ತುಂಬಿ ಮಾನ್ಯ ರಾಜು ಕಾಗೆಯವರು ಸಭೆಗೆ ಬಂದಿದ್ದಾರೆ. ಅವರಿಗೆ ನಾವೆಲ್ಲರೂ ಸ್ವಾಗತವನ್ನು ಮಾಡಿದ್ದೇವೆ. ಮಾನ್ಯ ಪಾಸಗೌಡ ಪಾಟೀಲರದ್ದು ಆಕಸ್ಮಿಕ ದುರ್ಮರಣ. ನಾವು ಚುನಾವಣೆ ಸಂದರ್ಭದಲ್ಲಿ ಅಲ್ಲಗೆ ಹೋದಾಗ ನೋಡಿದ್ದೇವೆ; ಅವರ ಶ್ರೀಮತಿಯವರು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರು. ಅವರನ್ನು ತಾವುಗಳು ಯಾವುದಾದರೂ ಮುಂಡಳಿಗೆ ಅಧ್ಯಕ್ಷರನ್ನಾಗಿಯೋ, ವಿಧಾನ ಪರಿಷತ್ತಿಗೆ ಸದಸ್ಯರನ್ನಾಗಿಯೋ ಮಾಡಬೇಕೆಂದು ನನಗನ್ನಿಸುತ್ತದೆ. ತಮ್ಮ ಪಕ್ಷದಲ್ಲಿ ೧೪೦ ಮಂದಿ ಶಾಸಕರುಗಳಿದ್ದಾರೆ, ತಮ್ಮದು

ಬಲಿಷ್ಠವಾದ ಪಕ್ಷವಾಗಿದ್ದು ಸಾಕಷ್ಟು ಸ್ಥಾನಮಾನವನ್ನು ನೀವು ಕೊಡಲು ಅವಕಾಶವಿದೆ. ಹಾಗೆ ಮಾಡಿದ್ದಲ್ಲಿ ಅವರಿಗೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತಿತ್ತು ಎಂಬ ಮಾತನ್ನು ಹೇಳುತ್ತೇನೆ. ಅವರು ಈ ಸದನದಲ್ಲಿ ಸದಸ್ಯರಾಗಿ ಕುಳಿತುಕೊಂಡು ಇಲ್ಲಿಯ ಆಗುಹೋಗುಗಳನ್ನು ಒಂದು ವರ್ಷದಲ್ಲಿ ತಿಳಿದುಕೊಳ್ಳಲು ಆಗಲಿಲ್ಲ. ಅವರದ್ದು ಅಕಾಲಿಕ ಮೃತ್ಯು. ಮಾನ್ಯ ಮುಖ್ಯಮಂತ್ರಿಯವರನ್ನು ಬಿಟ್ಟು ಬಹಳಷ್ಟು ಜನ ಗೌರವಾನ್ವಿತ ಮಂತ್ರಿಗಳು, ಕಾಂಗ್ರೆಸ್ ಪಕ್ಷದ ನಾಯಕರುಗಳು, ವಿರೋಧ ಪಕ್ಷಗಳವರು ಕಾಗವಾಡ ಕ್ಷೇತ್ರಕ್ಕೆ ಹೋಗಿದ್ದೇವೆ. ಅಲ್ಲಿಯ ರಸ್ತೆಗಳನ್ನು ನೋಡಿದಾಗ ನಮ್ಮ ಬೆನ್ನು ಮೂಳೆಗಳೆಲ್ಲವೂ ಮುರಿದು ಹೋಗಿದೆ. ಬಹುಶಃ ಕರ್ನಾಟಕ ರಾಜ್ಯದಲ್ಲಿ ಕಾಗವಾಡದ ರಸ್ತೆಗಳಷ್ಟು ದುರವಸ್ಥೆಯು ಬೇರೆ ಎಲ್ಲಿಯೂ ಇರಲಾರದು ಎಂದು ನಾನು ಅಂದುಕೊಂಡಿದ್ದೇನೆ. ಅದನ್ನು ಸರಿಪಡಿಸುವ ಪ್ರಯತ್ನ ಮಾಡಿದರೆ ಅವರ ಆತ್ಮಕ್ಕೆ ಶಾಂತಿ ಕೋರಿದ ಹಾಗೆ ಆಗುತ್ತದೆ ಎಂದು ಹೇಳಬಯಸುತ್ತೇನೆ. ಇವೊತ್ತು ೧೭ ಜನರು ಈ ಸದನದಲ್ಲಿ ಸದಸ್ಯರಾಗಿ ಕೆಲಸ ಮಾಡಿದವರು ಸ್ವರ್ಗಸ್ಥರಾಗಿದ್ದಾರೆ. ವಿಶೇಷವಾಗಿ ಮಾನ್ಯ ಬಿ.ಎಸ್. ಚಂದ್ರಶೇಖರ್‌ರವರು ತಿಪಟೂರಿನಿಂದ ನಮ್ಮ ಪಕ್ಷದ ವತಿಯಿಂದ ಚುನಾವಣೆಯಲ್ಲಿ ಗೆದ್ದು ೧೯೮೩ರಲ್ಲಿ ಸದಸ್ಯರಾಗಿ ಬಂದರು. ಇವರು ಕಾಂಗ್ರೆಸ್ಸೇತರ ಪ್ರಥಮ ಸರಕಾರದ ರಚನೆಗೆ ಕಾರಣಕರ್ತರಾಗಿದ್ದರು; ತುಂಬಾ ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಅಷ್ಟೇ ಪ್ರಾಮಾಣಿಕ ವ್ಯಕ್ತಿಗಳಲ್ಲಿ ಮಾನ್ಯ ಓಂಕಾರಮೂರ್ತಿಯವರು ಕೂಡ ಒಬ್ಬರು. ಇವರು ಸಾರಿಗೆ ಸಂಸ್ಥೆಯ ಡೈರೆಕ್ಟರ್ ಆಗಿದ್ದರು. ಕಡೂರು, ಬೀರೂರು, ತರೀಕೆರೆ ಈ ಮೂರು ತಾಲ್ಲೂಕುಗಳಲ್ಲಿ ಕೂಡ ಪ್ರತಿಯೊಂದು ಹಳ್ಳಿಗಳಿಗೂ ಕೂಡ ಬಸ್ ವ್ಯವಸ್ಥೆಯನ್ನು ಮಾಡಿದ್ದರು. ಕೆ.ಎಸ್.ಆರ್.ಟಿ.ಸಿ.ಯ ಅಭಿವೃದ್ಧಿಗಾಗಿ ದುಡಿದಿದ್ದರು. ಬಹಳ ಪ್ರಾಮಾಣಿಕವಾಗಿ ದುಡಿದು ತನ್ನ ಕ್ಷೇತ್ರದ ಅಭಿವೃದ್ಧಿಗೂ ಕಾರಣಕರ್ತರಾಗಿದ್ದರು. ಸನ್ಮಾನ್ಯ ಗೂಡ್‌ವಾಲಾರವರ ಅಧ್ಯಕ್ಷತೆಯಲ್ಲಿ ನಾವು ರಾಜ್ಯದಲ್ಲಿ ಮೈನಾರಿಟಿ ಕಮೀಷನ್ ರಚನೆ ಮಾಡಿದ್ದನ್ನು ತಾವುಗಳು ಬಲ್ಲವರಾಗಿದ್ದೀರಿ. ಅವರು ತಮ್ಮ ವರದಿಯ ಮೂಲಕ ಮೈನಾರಿಟಿ ಸಮುದಾಯಕ್ಕೆ ಎಕ್‌ನಾಮಿಕ್ಸ್ ಅಪ್‌ಲಿಫ್ಟ್‌ಮೆಂಟ್‌ಗೆ ಬಹಳ ಸಹಾಯಕವಾಗುಂಥ ಕೆಲಸವನ್ನು ಮಾಡಿದ್ದರು. ಶ್ರೀಮಾನ್ ಶಿವಣ್ಣನವರು ನಮಗೆಲ್ಲರಿಗೂ ಬಹಳ ಬೇಕಾಗಿದ್ದಂಥವರು. ಅವರು ವಿಶೇಷವಾಗಿ ಹಸ್ತಸಾಮುದ್ರಿಕ ಶಾಸ್ತ್ರದಲ್ಲಿ ಪರಿಣತರಾಗಿದ್ದರು. ಅವರು ಅತ್ಯಂತ ಸ್ನೇಹಮಯಿಗಳಾಗಿದ್ದರು. ಭಗವಂತನು ಅವರಿಗೆ ಅಂತ್ಯಕಾಲದಲ್ಲಿ ಹಿಂಸೆಯಿಂದ ನರಳತಕ್ಕಂಥ ಕಾಯಿಲೆಯನ್ನು ಕೊಡಬಾರದಾಗಿತ್ತು; ಅವರು ಈ ಸದನಕ್ಕೆ ಮತ್ತು ರಾಜ್ಯಕ್ಕೆ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಹಾಗೆಯೇ ಶ್ರೀಮಾನ್ ಕಾಳಮರಿಗೌಡರು ಪಿರಿಯಾಪಟ್ಟಣ ಕ್ಷೇತ್ರದ ಅಭಿವೃದ್ಧಿಗಾಗಿ ಬಹಳಷ್ಟು ದುಡಿದಿದ್ದರು. ಮಾನ್ಯ ಜಯಣ್ಣನವರು ಕೂಡ ತುಂಬಾ ಶ್ರಮವಹಿಸಿ ದುಡಿದಿದ್ದರು. ಹಾಗೆಯೇ ಶ್ರೀಮತಿ ಹೇಮಾವತಿಯವರು ತುಂಬಾ ಒಳ್ಳೆಯ ಶಾಸಕಿಯಾಗಿ ಕೆಲಸ ಮಾಡಿದವರಾಗಿದ್ದರು. ಅವರ ತಂದೆಯವರು ಕೂಡ ಇದೇ ಸದನದಲ್ಲಿ ಶಾಸಕರಾಗಿ ಕೆಲಸ ಮಾಡಿದ್ದರು. ದುರ್ಬಲ ವರ್ಗದ ಮಹಿಳೆಯಾದ ಶ್ರೀಮತಿ ಹೇಮಾವತಿಯವರು ಒಳ್ಳೆಯ ಕೆಲಸಗಳನ್ನು ಮಾಡಿದ್ದರು. ಎಂಟು ತಿಂಗಳುಗಳ ಕಾಲ ಕ್ಯಾನ್ಸರ್ ರೋಗದಿಂದ ನರಳಿ ಕೊನೆಯುಸಿರನ್ನು ಎಳೆದಿದ್ದಾರೆ . ಅವರ ಮಕ್ಕಳು ತುಂಬಾ ಕಷ್ಟದಲ್ಲಿದ್ದಾರೆ. ಈ ಸಂದರ್ಭದಲ್ಲಿ ನಾನು ಅವರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರುತ್ತೇನೆ. ಕೊನೆಯದಾಗಿ ಮಾನ್ಯಶ್ರೀ ಎಂ.ಎಸ್. ಕೃಷ್ಣನ್‌ರವರು; ಅವರು ವಿದ್ಯಾವಂತ ಶಾಸಕರು. ಅವರು ಈ ಸದನದಲ್ಲಿ ಕಾರ್ಮಿಕರ ಪರವಾಗಿ, ರೈತರ ಪರವಾಗಿ ತಮ್ಮ ಧ್ವನಿ ಎತ್ತದೇ ಇರತಕ್ಕಂಥ ದಿನಗಳೇ ಇರಲಿಲ್ಲ. ನಾನು ಸಾರಿಗೆ ಸಚಿವನಾಗಿದ್ದಾಗ ಅವರು ಕೆ.ಎಸ್.ಆರ್.ಟಿ.ಸಿ. ಎಂಪ್ಲಾಯೀಸ್ ಯೂನಿಯನ್‌ನ ಅಧ್ಯಕ್ಷರಾಗಿದ್ದರು. ಪಾರ್ಶ್ವವಾಯು ಪೀಡಿತರಾಗಿ ನಂತರ ಅಧ್ಯಕ್ಷ ಸ್ಥಾನವನ್ನು ಬಿಟ್ಟುಕೊಟ್ಟಿದ್ದರು.

ಅವರೊಬ್ಬ ರಚನಾತ್ಮಕ ರೀತಿಯ ಹೋರಾಟಗಾರರು, ಸಂಸ್ಥೆಯ ಉಳಿವಿಗಾಗಿ ಅವರು ಅವಿರತವಾಗಿ ಹೋರಾಟ ಮಾಡುತ್ತಿದ್ದರು. ತಮ್ಮ ಜೀವನದ ಉದ್ದಕ್ಕೂ ಪ್ರಾಮಾಣಿಕವಾಗಿ ದುಡಿದವರು. ದು:ಖವನ್ನು ಭರಿಸುವ ಶಕ್ತಿಯನ್ನು ಕೊಡಲಿ ಎಂದು ಹೇಳಿ ನಾನು ನಮ್ಮ ಪಕ್ಷದ ವತಿಯಿಂದ ಮತ್ತು ನನ್ನ ವತಿಯಿಂದ ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಇವೊತ್ತು ತಾವುಗಳು ಮಂಡಿಸಿರತಕ್ಕಂಥ ಈ ಸಂತಾಪ ಸೂಚಕ ನಿರ್ಣಯಕ್ಕೆ ನಮ್ಮ ಬೆಂಬಲವನ್ನು ಸೂಚಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ಅಭಿನಂಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ)

ಸನ್ಮಾನ್ಯ ಅಧ್ಯಕ್ಷರೇ, ಹೋದ ಅಧಿವೇಶನಕ್ಕೂ ಈ ಅಧಿವೇಶನಕ್ಕೂ ಸುಮಾರು ೬ ತಿಂಗಳುಗಳ ಅಂತರದಲ್ಲಿ ಈ ಶಾಸನ ಸಭೆಯಲ್ಲಿ ಕೆಲಸ ಮಾಡಿ ಅಗಲಿದ ಗಣ್ಯ ವ್ಯಕ್ತಿಗಳ ಬಗ್ಗೆ ತಾವುಗಳು ಸಂತಾಪ ಸೂಚನೆಯ ನಿರ್ಣಯವನ್ನು ಸದನದಲ್ಲಿ ಮಂಡಿಸಿದ್ದೀರಿ. ಅದರಲ್ಲೂ ವಿಶೇಷವಾಗಿ ಶ್ರೀಮಾನ್ ಸಿದ್ದವನಹಳ್ಳಿ ನಿಜಲಿಂಗಪ್ಪನವರ ಬಗ್ಗೆ ಎಲ್ಲರೂ ತುಂಬಾ ಸಂತಾಪವನ್ನು ಸೂಚಿಸಿದ್ದಾರೆ. ನಾವುಗಳು ತುಂಬಾ ಚಿಕ್ಕವರು. ಅವರು ಶತಾಯುಷಿಗಳಾಗುತ್ತಾರೆ ಎಂದು ನಾವುಗಳು ಅಂದುಕೊಂಡಿದ್ದೆವು. ಅವರು ಶತಾಯುಷಿಗಳಾದ ವರ್ಷದಲ್ಲಿ ರಾಜ್ಯದಲ್ಲಿ ಬಹಳ ವಿಜೃಂಭಣೆಯಿಂದ ಸಂತೋಷವನ್ನು ಆಚರಿಸಬೇಕೆಂದು ಆಸೆ ಇಟ್ಟುಕೊಂಡಿದ್ದೆವು. ಆದರೆ ದುರ್ದೈವವಶಾತ್ ಇನ್ನೂ ಒಂದೂವರೆ ವರ್ಷ ಇರುವಾಗಲೇ ಕಾಲು ಜಾರಿ ಬಿದ್ದು ಇವೂತ್ತು ನಮ್ಮ ಕಣ್ಮುಂದೆ ಇಲ್ಲವಾಗಿದ್ದಾರೆ. ಅವರ ವ್ಯಕ್ತಿತ್ವದ ಬಗ್ಗೆ ನಾವು ಎಷ್ಟು ಹೇಳಿದರೂ ಸಾಲದು. ಸಾರ್ವಜನಿಕ ಜೀವನದಲ್ಲಿ ಹಿರಿಯ ಮುತ್ಸದ್ದಿಗಳಾಗಿ, ರಾಷ್ಟ್ರ ಪ್ರೇಮಿಗಳಾಗಿ, ಬಹಳ ವಿಶಾಲ ಮನೋಭಾವದ ವ್ಯಕ್ತಿತ್ವವುಳ್ಳವರಾಗಿದ್ದರು. ಅನೇಕ ಮುಖಂಡರುಗಳ ಬಗ್ಗೆ ನಾವು ವಿವೇಚಿಸಿದಾಗ ಒಂದಲ್ಲ ಒಂದು ನ್ಯೂನತೆಗಳನ್ನು ಹೊಂದಿದ್ದರು ಎಂದು ಅನ್ನಿಸುತ್ತದೆ. ಆದರೆ ಮಾನ್ಯ ನಿಜಲಿಂಗಪ್ಪನವರನ್ನು ಒರೆಗೆ ಹಚ್ಚಿ ನೋಡಿದಾಗ ಯಾವುದೇ ನ್ಯೂನತೆಗಳನ್ನು ಅವರು ಹೊಂದಿರಲಿಲ್ಲ ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಅವರು ಸರಳ ಸಜ್ಜನರಾಗಿದ್ದರೂ ಅವರು ತೆಗೆದುಕೊಳ್ಳುತ್ತಿದ್ದಂಥ ತತ್ವಾಧರಿತ ನಿಲುವುಗಳು ಮತ್ತು ಜೀವನ ಮೌಲ್ಯಗಳಿಗೆ ಕಟಿಬದ್ಧರಾಗಿದ್ದಂಥ ಅವರ ವ್ಯಕ್ತಿತ್ವ ತುಂಬಾ ಅನುಕರಣೀಯ. ಯಾವುದೇ ಒತ್ತಡಗಳಿಗೂ ತಮ್ಮ ತತ್ವಗಳೊಂದಿಗೆ ಅವರು ರಾಜಿಯಾಗುತ್ತಿರಲಿಲ್ಲ. ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿ ಐದಾರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಕೇಂದ್ರದಲ್ಲಿ ಅವರು ಮುಂತ್ರಿಗಳಾಗಿರಲಿಲ್ಲ. ಆದರೆ ಅವರ ವ್ಯಕ್ತಿತ್ವ ಎಷ್ಟಿತ್ತು ಅಂದರೆ ಒಬ್ಬ ರಾಷ್ಟ್ರಪತಿಯವರಾಗಿದ್ದವರು ಕೂಡ ಇಷ್ಟೊಂದು ಮೇಲ್ಪಂಕ್ತಿಯಲ್ಲಿ ಕಾಣಿಸುತ್ತಿರಲಿಲ್ಲ. ನಿಜವಾಗಿಯೂ ನಮ್ಮ ರಾಷ್ಟ್ರದ ರಾಷ್ಟ್ರಪತಿಗಳಾಗಿದ್ದರೋ ಏನೋ ಎಂಬ ಭಾವನೆ ನಮ್ಮಲ್ಲಿ ಇವೊತ್ತು ಬರುತ್ತಾ ಇದೆ. ನಾನು ಅವರನ್ನು ಹತ್ತಿರದಲ್ಲಿ ನೋಡಿದವನು ಅಲ್ಲ. ನಾನು ಮಂತ್ರಿಯಾಗಿದ್ದಾಗ ಕೆಲವು ನಿರ್ಧಾರಗಳನ್ನು ತೆಗೆದುಕೊಂಡಾಗ ದೂರವಾಣಿಯ ಮುಖಾಂತರ ನಮ್ಮ ಹೇಳಿಕೆಗಳನ್ನು ಆಧರಿಸಿ ನಮಗೆ ಉತ್ತೇಜನವನ್ನು ಕೊಡುತ್ತಾ ಇದ್ದರು. ನೀನು ತೆಗೆದುಕೊಂಡ ತೀರ್ಮಾನಗಳು ತುಂಬಾ ಜನೋಪಕಾರಿಯಾಗಿವೆ, ಈ ಕೆಲಸಗಳನ್ನು ಮುಂದುವರಿಸು ಎಂದು ಉತ್ತೇಜನ ಕೊಡುತ್ತಿದ್ದರು. ಅವರು ತೀರಿಕೊಂಡ ದಿನವೇ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ ಬಂತು. ಅದರಲ್ಲಿ ಮಾನ್ಯ ಹಿರಿಯ ಅಧಿಕಾರಿಗಳಾದ ವರದನ್ ಬಗ್ಗೆ ಒಂದು ಉದಾಹರಣೆಯನ್ನು ಕೊಟ್ಟಿದ್ದರು. ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಶ್ರೀ ವರದನ್‌ರವರು ಆಗ ಉತ್ತರ ಕನ್ನಡ ಜಿಲ್ಲಾಧಿಕಾರಿಗಳಾಗಿದ್ದರು. ಆಗಿನ ಕಾಲದ ಮಂತ್ರಿಗಳು ಯಾವುದೋ ಒಂದು

ರೆವಿನ್ಯೂ ವಿಚಾರದಲ್ಲಿ ಒಂದು ಶಿಫಾರಸ್ಸು ಮಾಡುತ್ತಾರೆ. ಆಗ ಆ ಅಧಿಕಾರಿ ಈ ವಿಚಾರದಲ್ಲಿ ಕೈ ಹಾಕಬಾರದು ಎಂದು ನೇರವಾಗಿ ಪತ್ರವನ್ನು ಬರೆದಿದ್ದಾರೆ. ಆ ಮಂತ್ರಿಗಳು ಬಂದು ಮುಖ್ಯಮಂತ್ರಿಗಳ ಹತ್ತಿರ ಅಧಿಕಾರಿಯಿಂದ ನನಗೆ ಈ ರೀತಿಯ ಅಪಮಾನವಾಗಿದೆ, ಕ್ಯಾಬಿನೆಟ್ ಸಚಿವನಾದ ನನಗೆ ಜಿಲ್ಲಾಧಿಕಾರಿಯೊಬ್ಬ ಪತ್ರ ಬರೆದು ಅವಮಾನ ಮಾಡಿದ್ದಾರೆ ಎಂದು ಅರಿಕೆ ಮಾಡಿಕೊಂಡರು. ಆ ಮೂಲಕ ತತ್‌ಕ್ಷಣ ಅಧಿಕಾರಿಯನ್ನು ವರ್ಗಾವಣೆ ಮಾಡುತ್ತಾರೆ. ಆಗ ರಾಜ್ಯದ ಮುಖ್ಯ ಕಾರ್ಯದರ್ಶಿಯವರು ಆ ಅಧಿಕಾರಿಯನ್ನು ಮುಖ್ಯಮಂತ್ರಿಯವರ ಹತ್ತಿರ ಕರೆದುಕೊಂಡು ಬರುತ್ತಾರೆ. ಆಗ ಮಾನ್ಯ ನಿಜಲಿಂಗಪ್ಪನವರು ವರದನ್ ರವರನ್ನು ನೋಡಿ ನೀವೇನಾ ನಮ್ಮ ಮಂತ್ರಿಗಳಿಗೆ ಬುದ್ಧಿವಾದ ಹೇಳತಕ್ಕಂಥವರು? ಎಂದು ಹೇಳಿದಾಗ ಆ ಅಧಿಕಾರಿ ಸ್ವಾಮಿ, ನನಗೆ ನನ್ನ ವಿಚಾರಗಳನ್ನು ಹೇಳಲು ಐದು ನಿಮಿಷಗಳ ಕಾಲಾವಕಾಶ ಮಾಡಿಕೊಡಿ ಎಂದು ಕೇಳಿಕೊಂಡರು. ಅವರು ಅನುಮತಿಸಿದಾಗ ಪ್ರಕರಣದ ವಿವರ ನೀಡಿ ಕಾನೂನು ಈ ರೀತಿಯಾಗಿ ಹೇಳುತ್ತದೆ, ಮಂತ್ರಿಗಳು ಇದಕ್ಕೋಸ್ಕರ ಹೀಗೆ ಶಿಫಾರಸ್ಸು ಮಾಡಿದ್ದಾರೆ, ಇದು ಸಾರ್ವಜನಿಕರ ಹಿತಕ್ಕೆ ವಿರುದ್ಧವಾದ ವಿಚಾರ, ಎಂಬಿತ್ಯಾದಿ ಹೇಳಿದಾಗ ಮುಖ್ಯಮಂತ್ರಿಯವರು ತುಂಬಾ ಸಂತೋಷಪಟ್ಟುಕೊಂಡರಂತೆ. ನಾನು ಈ ವಿಚಾರದಲ್ಲಿ ತಪ್ಪುಮಾಡಿದ್ದೇನೆ. ನಿಮ್ಮನ್ನು ವರ್ಗ ಮಾಡಿದ್ದೇನೆ. ನೀವು ಈಗ ನನ್ನ ಸಚಿವಾಲಯಕ್ಕೆ ಬಂದು ಕೆಲಸ ಮಾಡಬೇಕು. ಮುಖ್ಯಮಂತ್ರಿಯವರ ಕಾರ್ಯಾಲಯಕ್ಕೆ ಬಂದು ಕೆಲಸ ಮಾಡಬೇಕು ಎಂದು ಹೇಳಿದು. ಆಗ ಅಧಿಕಾರಿಗೆ ಮತ್ತು ಮುಖ್ಯಮಂತ್ರಿಗಳಿಗೆ ಉಂಟಾದ ಭಾವನೆಗಳನ್ನು ಪತ್ರಿಕೆಯ ಲೇಖನದಲ್ಲಿ ಹೇಳಿಕೊಂಡಿದ್ದಾರೆ. ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಯವರಾಗಿದ್ದಾಗ ರೂಲ್ ಆಫ್ ಲಾ ಕುರಿತು ಯಾವುದೇ ಒಂದು ಒತ್ತಡ ಬಂದರೂ ಕೂಡ, ಕಾನೂನು ವಿಚಾರ ಬಂದಾಗ ತಮ್ಮ ಕಟ್ಟಿಬದ್ಧತೆಯನ್ನು ಹೇಗೆ ನಿರ್ವಹಿಸುತ್ತಿದ್ದರು ಎಂಬ ವಿಚಾರವನ್ನು ನಾವು ಗಮನಿಸಿ ಅನುಸರಿಸಬೇಕಾದ ವಿಚಾರವಾಗಿದೆ. ಆಗ ಒಬ್ಬ ಚಂಪಾಬಾಯಿ ಭೋಗಲೆ ಎಂಬ ದಲಿತ ಮಹಿಳೆ ಶಾಸಕಿಯಾಗಿದ್ದರು. ಅವರು ಜಿಲ್ಲಾಧಿಕಾರಿಗಳನ್ನು ನೋಡುವುದಕ್ಕೆ ಬೆಳಗಾಂಗೆ ಹೋಗುತ್ತಾರಂತೆ. ಅಲ್ಲಿಯ ಜಿಲ್ಲಾಧಿಕಾರಿಗಳಿಗೆ ಶಾಸಕರಾದ ಚಂಪಾಭೋಗಲೆರವರು ನಿಮ್ಮನ್ನು ನೋಡುವುದಕ್ಕೆ ಬರುತ್ತಿದ್ದಾರೆ ಎಂದು ಹೇಳುತ್ತಾರೆ. ಏಕೆ ಆ ಎಮ್ಮೆ ಬರುತ್ತಿದೆ ನನ್ನನ್ನು ನೋಡುವುದಕ್ಕೆ ಎಂದು ಅವರು ಬಹಳ ತುಚ್ಛವಾಗಿ ಮಾತನಾಡುತ್ತಾರೆ. ಜಿಲ್ಲಾಧಿಕಾರಿಯನ್ನು ಭೇಟಿ ಮಾಡಿ ಅವರು ಹೊರಗಡೆ ಬರುವಾಗ ಅಟೆಂಡರ್ ಶಾಸಕರಿಗೆ ಜಿಲ್ಲಾಧಿಕಾರಿಗಳು ನಿಮ್ಮನ್ನು ಬಹಳ ತುಚ್ಛವಾಗಿ ಈ ರೀತಿ ಹೇಳಿದ್ದಾರೆಂದು ಹೇಳಿಬಿಡುತ್ತಾರೆ. ಆಗ ಇಲ್ಲಿಯೂ ಸಭೆ ನಡೆಯುತ್ತಿರುತ್ತದೆ. ಆಗ ಅವರು ಏನು ಹೇಳಿದ್ದರು ಎಂಬುದು ಇಲ್ಲಿ ರೆಕಾರ್ಡ್‌ನಲ್ಲಿರಬೇಕು. ಶ್ರೀಮತಿ ಚಂಪಾಭೋಗಲೆಯವರು ಈ ಸಭೆಗೆ ಬಂದು ಹೇಳುವ ವಿಚಾರವನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ವಿಧಾನಸಭೆಗೆ ಬಂದು ಶಾಸಕರು ಮುಖ್ಯಮಂತ್ರಿಗಳಿಗೆ ಹೇಳುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳೇ, ನಿಮ್ಮ ಜಿಲ್ಲಾಧಿಕಾರಿಗಳು ನನ್ನನ್ನು ಎಮ್ಮೆ ಎಂದು ಕರೆದಿದ್ದಾರೆ ಇದರಿಂದ ನನಗೆ ಅವಮಾನವಾಗಿದೆ. ನೀವು ಅವರನ್ನು ಎಮ್ಮೆ ಇಲಾಖೆಗೆ ವರ್ಗ ಮಾಡಬೇಕು. ಇವತ್ತೇ ಆ ಕೆಲಸ ಆಗಬೇಕು ಎಂದು ಒತ್ತಾಯಿಸುತ್ತಾರೆ ಆಗಬೇಕು. ಇವತ್ತು ಮಾಡಿದರೆಮಾತ್ರ ನಾನು ಹೊರಗಡೆ ಬರುತ್ತೇನೆ ಎಂಗು ಬಾವಿಯಲ್ಲಿ ಧರಣೆಗೆ ಕುಳಿತುಕೊಳ್ಳುತ್ತಾರೆ. ಆಗ ಮಾನ್ಯ ಮುಖ್ಯ ಮಂತ್ರಿಗಳು ಸಾಯಂಕಾಲದೊಳಗೆ ಒಂದು ಆದೇಶವನ್ನು ಹೊರಡಿಸಿ ಅವರನ್ನು ಪಶುಸಂಗೋಪನಾ ಇಲಾಖೆಗೆ ವರ್ಗ ಮಾಡುತ್ತಾರೆ. ಆ ರೀತಿ ಮಾಡಿದಾಗ ಅವರು ಧರಣೆಯಿಂದ ಹೊರಗೆ ಬರುತ್ತಾರೆ. ಇದು ಏನನ್ನು ತೋರಿಸುತ್ತದೆಂದರೆ ಮಾನವೀಯ ಮೌಲ್ಯಗಳಿಗೆ ಬೆಲೆಕೊಟ್ಟು ಒಬ್ಬ ಪ್ರಜಾಪ್ರತಿನಿಧಿಗೆ ಆದಂಥ

ಅವಮಾನವನ್ನು ಎಷ್ಟರಮಟ್ಟಿಗೆ ಅವರು ಸಹಿಸಿಕೊಳ್ಳದೆ ಒಂದು ದಿಟ್ಟ ನಿಲುವನ್ನು ತೆಗೆದುಕೊಳ್ಳುತ್ತಾರೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ, ಎರಡು ಉದಾಹರಣೆಗಳನ್ನು ಹೇಳಿದ ಉದ್ದೇಶವಿಷ್ಟು; ಅವರು ರೂಲ್ ಆಫ್ ಲಾ ಗೆ ಎಷ್ಟು ಬೆಲೆಯನ್ನು ಕೊಡುತಿದ್ದರು, ಪ್ರಾಮಾಣಿಕ ಅಧಿಕಾರಿಗಳಿಗೆ ಎಷ್ಟೊಂದು ಗೌರವವನ್ನು ಕೊಡುತ್ತಿದ್ದರು, ಮತ್ತೊಂದು ಕಡೆ ಚುನಾಯಿತ ಪ್ರತಿನಿಧಿಗಳಿಗೂ ಸಹಾ ಅವರ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕೆ ಎಷ್ಟು ಬೆಲೆಯನ್ನು ಕೊಡುತ್ತಿದ್ದರು ಎಂಬುದು ಇದರಿಂದ ಗೊತ್ತಾಗುತ್ತದೆ. ಇವತ್ತು ಮಾನ್ಯ ನಿಜಲಿಂಗಪ್ಪನವರು ನಮ್ಮ ಕಣ್ಮುಂದೆ ಇಲ್ಲ. ಆದರೆ ಅವರು ನಡೆದುಕೊಂಡಂಥ ರೀತಿ, ಅವರು ತೆಗೆದು ಕೊಂಡ ತೀರ್ಮಾನಗಳು ಇನ್ನು ನೂರು ವರ್ಷಗಳಾದರೂ ನಮ್ಮಿಂದ ಮರೆಯಾಗುವುದಿಲ್ಲ. ಅವರು ವಿದ್ಯುಚ್ಛಕ್ತಿಗೆ, ನೀರಾವರಿಗೆ ಹಾಕಿದ ಭದ್ರ ಬುನಾದಿ ಇವತ್ತು ನಮ್ಮ ಕಣ್ಮುಂದೆ ಅಭಿವೃದ್ಧಿಗೋಸ್ಕರ ನಿಂತಿದೆ. ಮಾನ್ಯ ನಿಜಲಿಂಗಪ್ಪನವರ ಸಾವು ಇಡೀ ಕರ್ನಾಟಕಕ್ಕೇ ಅಲ್ಲ ಇಡೀ ಭಾರತಕ್ಕೇ ಬಹಳ ತುಂಬ ಲಾರದ ನಷ್ಟವಾಗಿದೆ. ಕೇವಲ ಎರಡು ಮೂರು ಜನರು ಉಳಿದುಕೊಂಡಿದ್ದರು ಆ ಒಂದು ಕಾಲದಲ್ಲಿ. ಅವರೆ ಸ್ವಾತಂತ್ರ್ಯದ ನಾಯಕರಲ್ಲಿ ಕೊನೆಯ ಕೊಂಡಿ ನಿಜಲಿಂಗಪ್ಪನವರನ್ನು ಕಳೆದುಕೊಂಡಿರುವುದು ನಮಗೆಲ್ಲರಿಗೂ ಬಹಳ ನಷ್ಟವಾಗಿದೆ. ಈಗಾಗಲೇ ನಮ್ಮ ಸಿಂಧ್ಯಾರವರು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಅವರಿಗೆ ಭಾರತರತ್ನವನ್ನು ಕೊಟ್ಟರೂ ಕೂಡ ಅದು ಸಾಲದೆಂದು ನಾನು ಅಂದುಕೊಳ್ಳುತ್ತೇನೆ. ನಮ್ಮ ಸರ್ಕಾರ ಅದಕ್ಕೆ ಶಿಫಾರಸ್ಸು ಮಾಡಬೇಕು. ಅವರು ಅತ್ಯಂತ ಪ್ರಾಮಾಣಿಕ ಮುತ್ಸದ್ಧಿ, ರಾಷ್ಟ್ರಪ್ರೇಮಿ. ಅವರಿಗೆ ನಾವು ಆ ಗೌರವವನ್ನು ಸಲ್ಲಿಸಬೇಕೆಂದು ಹೇಳುತ್ತೇನೆ. ಇವತ್ತು ಮಾನ್ಯ ಧರ್ಮವೀರರು ನಮ್ಮನ್ನೆಲ್ಲಾ ಅಗಲಿದ್ದಾರೆ. ಉತ್ತಮ ಆಡಳಿತಗಾರರು ಎಂದರೆ ಧರ್ಮವೀರರು. ನಮ್ಮ ಕರ್ನಾಟಕ ರಾಜ್ಯದಲ್ಲಿ ಅವರು ಮೂರು ವರ್ಷಗಳ ಕಾಲ ಇದ್ದಾಗ ಎಷ್ಟೊಂದು ಹೆಸರುವಾಸಿಯಾಗಿದ್ದರು ಕೇವಲ ಅವರಿಗೆ ಸಿಕ್ಕಿದ ಆರು ತಿಂಗಳ ಅವಧಿಯಲ್ಲಿ ಅವರು ಅತ್ಯಂತ ಜನಪ್ರಿಯ ರಾಜ್ಯಪಾಲರಾಗಿದ್ದರು. ಅವರು ಕೂಡ ಇವತ್ತು ನಮ್ಮ ಕಣ್ಮುಂದೆ ಇಲ್ಲ. ಅವರನ್ನು ಕೂಡ ನಾವು ಇವತ್ತು ನೆನಸಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಹಾಗೆಯೇ ನಮ್ಮ ಜೊತೆಯಲ್ಲಿ ಕೆಲಸ ಮಾಡಿದ ಮಾನ್ಯ ಚಂದ್ರಶೇಖರಯ್ಯನವರು ಇರಬಹುದು, ಮಾನ್ಯ ಓಂಕಾರ್ ಮೂರ್ತಿಯವರಿರಬಹುದು, ಮಾನ್ಯ ಎಂ.ಎಸ್.ಕೃಷ್ಣನ್‌ರವರು ಇರಬಹುದು ಮತ್ತು ನಮ್ಮ ಮಾನ್ಯ ಬಿ. ಶಿವಣ್ಣನವರು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರೊಬ್ಬ ದಲಿತ ನಾಯಕರಾಗಿದ್ದರು. ಅವರು ಮಂತ್ರಿಗಳಾಗಿ ಕೆಲಸ ಮಾಡಿದವರು; ಬಹಳ ಸರಳಜೀವಿಗಳು. ವಿದ್ಯಾವಂತರು ಅವರು ಇವತ್ತು ನಮ್ಮ ಕಣ್ಮುಂದೆ ಇಲ್ಲ. ಮಾನ್ಯ ಬಸನಗೌಡರು ಇವತ್ತು ನಮ್ಮ ಮುಂದೆ ಇಲ್ಲ. ಮಾನ್ಯ ಪಾಸಗೌಡರು ನಮ್ಮ ಜೊತೆಯಲ್ಲಿಯೇ ಇದ್ದು ಇವತ್ತು ಅವರು ಇಲ್ಲ ಎಂದು ಹೇಳಿದರೆ ನಮಗೆ ಬಹಳ ನೋವಾಗುತ್ತಿದೆ. ಅವರು ಒಂದು ಅಧಿವೇಶನವನ್ನು ಮುಗಿಸುವುದಕ್ಕಾಗಲಿಲ್ಲ. ಅವರು ಅಪಘಾತಕ್ಕೆ ಈಡಾಗಿ ಮರಣವನ್ನಪ್ಪಿದ್ದರಿಂದ ನಾವು ಅವರನ್ನು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಸಹಾ ಶಾಂತಿ ಸಿಗಲಿ ಎಂದು ಇವತ್ತು ನಾನು ಕೇಳುತ್ತಿದ್ದೇನೆ. ಹಾಗೆಯೇ ನಮ್ಮ ಮಾನ್ಯ ಕವಿಶೆಟ್ಟರು, ಅವರು ನಮಗಿಂತ ಹಿರಿಯರು ನಾನು ರಾಜಕೀಯಕ್ಕೆ ಪ್ರವೇಶ ಮಾಡಿದಾಗ ಅವರು ಹಿಂದೆ ಶಾಸಕರಾಗಿ ನನ್ನನ್ನು ಬಹಳ ಪ್ರೀತಿಸುತ್ತಿದ್ದರು. ಅವರದು ಬಹಳ ಸುಂದರವಾದಂಥ ಹೃದಯ; ತುಂಬಾ ನಿಷ್ಕಲ್ಮಷವಾದ ಹೃದಯ. ಅಂತಹ ವ್ಯಕ್ತಿಗಳನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಹಾಗೆಯೇ ಮಾನ್ಯ ಅನಂತರಾಮನ್‌ರವರು, ಹಾಗೆಯೇ ಮಾನ್ಯ ಕಾಳಮರಿಗೌಡರು ಕೂಡ ನಮ್ಮ ಜೊತೆಗೆ ಶಾಸಕರಾಗಿದ್ದರು. ಅದೇ ರೀತಿ ಮಾನ್ಯ ಮುನಿಚಿನ್ನಪ್ಪನವರು ದಲಿತವರ್ಗದಲ್ಲಿ ಬಹಳ ಸೇವೆಯನ್ನು ಮಾಡಿದಂಥವರು. ಮಾನ್ಯ ಜಯಣ್ಣನವರು ನಮ್ಮನ್ನು

ಅಗಲಿದ್ದಾರೆ. ಹಾಗೆಯೇ ಮಾನ್ಯ ನಾಡಕರ್ಣಿಯವರು, ಹೀಗೆ ಸುಮಾರು ೧೭ ಜನರು ಇವತ್ತು ನಮ್ಮ ಕಣ್ಮುಂದೆ ಇಲ್ಲ. ಶ್ರೀಮತಿ ಹೇಮಾವತಿಯವರು, ಅವರು ನಮ್ಮ ಜೊತೆಗೆ ಶಾಸಕರಾಗಿ ಕೆಲಸ ಮಾಡಿದ್ದಾರೆ ಅವರು ಬಹಳ ಸರಳ ಜೀವಿಗಳು ಸ್ನೇಹಪರರು, ಹೇಮಾವತಿಯವರು ಯಾವಾಗಲೂ ನಗುನಗುತ್ತಾ ಇರುತ್ತಿದ್ದರು. ಅವರನ್ನು ನಾವು ಅಕಾಲಿಕವಾಗಿ ಕಳೆದುಕೊಂಡಿದ್ದೇವೆ. ಇವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂದು ದೇವರಲ್ಲಿ ಪ್ರಾರ್ಥಿಸುತ್ತಾ ತಾವು ಮುಂಡಿಸಿರುವ ಸಂತಾಪಸೂಚನೆಯನಿರ್ಣಯವನ್ನು ಬೆಂಬಲಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್)

ಮಾನ್ಯ ಅಧ್ಯಕ್ಷರೇ ಇವತ್ತು ತಾವು ನಮ್ಮ ಮುಂದೆ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿದ್ದೀರಿ. ಇದರಲ್ಲಿ ಮುಖ್ಯವಾಗಿ ಹಿಂದೆ ಮಾತನಾಡಿದ ಎಲ್ಲಾ ಸ್ನೇಹಿತರು ಎಲ್ಲ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರಲ್ಲಿ ನಾನು ಇಬ್ಬರ ಹೆಸರುಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ; ಮಾನ್ಯ ನಿಜಲಿಂಗಪ್ಪನವರು ಮತ್ತು ಸ್ನೇಹಿತರಾಗಿದ್ದ ಎಂ.ಎಸ್. ಕೃಷ್ಣನ್‌ರವರು. ಮಾನ್ಯ ನಿಜಲಿಂಗಪ್ಪನವರನ್ನು ನಾನು ಸಣ್ಣ ಹುಡುಗನಾಗಿದ್ದಾಗ, ಆ ಸಂದರ್ಭದಲ್ಲಿ ಅವರ ಬಗ್ಗೆ ಪತ್ರಿಕೆಗಳಲ್ಲಿ ಓದುತ್ತಿದ್ದೆ. ಮತ್ತು ನಂತರ ಅನೇಕ ಬದಲಾವಣೆಗಳಾಯಿತು. ಆದರೆ ನಾನು ಈ ಸಂದರ್ಭದಲ್ಲಿ ಅವರನ್ನು ಸ್ಮರಿಸಿಕೊಳ್ಳತಕ್ಕಂಥದ್ದು ಯಾವ ದೃಷ್ಟಿಯಿಂದ ಎಂದರೆ, ನಮ್ಮ ದೇಶದ ರಾಜಕೀಯ ಪರಿಸ್ಥಿತಿ ಏನಿತ್ತು, ಮೌಲ್ಯಾಧರಿತ ರಾಜಕೀಯದ ಪರಿಸ್ಥಿತಿ ಏನಿತ್ತು? ಆ ಪೀಳಿಗೆಯ ಪ್ರತೀಕವಾಗಿ, ಆ ಪೀಳಿಗೆಯ ಆಧಾರಸ್ತಂಭವಾಗಿದ್ದಂಥವರು ಮಾನ್ಯ ನಿಜಲಿಂಗಪ್ಪನವರು. ಅವರ ನಂತರ ಬಂದಿರುವ ಪೀಳಿಗೆ ನಮ್ಮ ಪೀಳಿಗೆ. ಈ ಹಳೆಯ ಪೀಳಿಗೆಯ ಕೊನೆಯ ಕೊಂಡಿಯಾಗಿ ಮಾನ್ಯ ನಿಜಲಿಂಗಪ್ಪನವರು ಆದರ್ಶವಾದಿಗಳಾಗಿ ನಮ್ಮ ಮುಂದೆ ಅನೇಕ ಆದರ್ಶಗಳನ್ನು ಬಿಟ್ಟು ಹೋಗಿದ್ದಾರೆ. ಮತ್ತು ಹಳೆಯ ಮೈಸೂರು ಕರ್ನಾಟಕವಾದ ಸಂದರ್ಭದಲ್ಲೂ ಸಹಾ ಅವರು ತಮ್ಮದೇ ಆದ ಹೋರಾಟವನ್ನು ನಡೆಸಿ ಆ ಹೋರಾಟದ ಪ್ರತಿಫಲವಾಗಿ ಅವತ್ತು ಮೈಸೂರು ಇದ್ದುದ್ದು ಇವತ್ತು ವಿಶಾಲ ಕರ್ನಾಟಕವಾಯಿತು. ಇವತ್ತು ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರನ್ನು ಪಡೆದಿದ್ದೇವೆ. ಅವರ ಜೊತೆಯಲ್ಲಿ ಕರ್ನಾಟಕ ಏಕೀಕರಣ ನಡೆಸಿದ ಸಂದರ್ಭದಲ್ಲಿ ಅಂದು ಹಳೆಯ ಮೈಸೂರು ಭಾಗದಲ್ಲಿ ಬಹಳ ಪ್ರಭಾವಿ ರಾಜಕಾರಣಿಗಳಾಗಿದ್ದ ಮಾನ್ಯ ಕೆಂಗಲ್ ಹನುಮಂತಯ್ಯವನರೂ ಸಹಾ ಅವರ ಜೊತೆಗೆ ನಿಂತು ಅವರೂ ಸಹ ವಿಶಾಲ ಕರ್ನಾಟಕವಾಗಬೇಕು ಎನ್ನುವ ಮುಂಚೂಣಿಯಲ್ಲಿದ್ದರು. ನಾನು ಆಗ ವಿದ್ಯಾರ್ಥಿಯಾಗಿದ್ದೆ. ಆಗ ಜಾತಿವಾದ ಎದ್ದು ಕುಣಿದಾಡುತ್ತಿತ್ತು. ಒಕ್ಕಲಿಗರೆಲ್ಲಾ ಒಂದು ಕಡೆಯಾದರೆ ಲಿಂಗಾಯಿತರೆಲ್ಲಾ ಮತ್ತೊಂದು ಕಡೆ ಎನ್ನುವುದು ಬಂದುಬಿಟ್ಟಿತ್ತು. ನಾನು ಒಕ್ಕಲಿಗ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಯಾಗಿದ್ದೆ. ಆ ಸಂದರ್ಭದಲ್ಲಿ ಸುಮಾರು ೨೫೦ ಜನ ವಿದ್ಯಾರ್ಥಿಗಳಿದ್ದರು. ಆ ವಿದ್ಯಾರ್ಥಿನಿಲಯದಲ್ಲಿ ನಾನೊಬ್ಬನೇ ಅವತ್ತು ಕರ್ನಾಟಕವಾಗಬೇಕು ಎಂದು ಹೇಳಿದಂಥವನು. ಅವತ್ತು ನನಗೆ ಅದಕ್ಕೆ ಹೊಡೆತವೂ ಸಹಾ ಬಿತ್ತು. ಅವತ್ತು ಮಾನ್ಯ ಕೃಷ್ಣರವರು, ಮಾನ್ಯ ಲಕ್ಕಪ್ಪನವರು ಹೀಗೆ ಅನೇಕರ ಹೆಸರುಗಳು ಜ್ಞಾಪಕಕ್ಕೆ ಬರುತ್ತಿವೆ. ಅವತ್ತು ಇವರೆಲ್ಲರೂ ಸಹಾ ಮೈಸೂರು, ಮೈಸೂರು ಆಗಿಯೇ ಉಳಿಯಬೇಕು ಎನ್ನುವ ಒಂದು ವಾದವನ್ನು ಮಂಡಿಸಿರತಕ್ಕಂಥವರು. ಕೊನೆಗೆ ಅದು ನಿರ್ಣಯವಾಗಿ ಮಾನ್ಯ ಹನುಮಂತಯ್ಯನವರು ಮತ್ತು ಮಾನ್ಯ ನಿಜಲಿಂಗಪ್ಪನವರ ಪ್ರಭಾವದಿಂದ ಕೇಂದ್ರಸರ್ಕಾರ ವಿಶಾಲ ಕರ್ನಾಟಕ ಆಗತಕ್ಕ ವ್ಯವಸ್ಥೆಯನ್ನು

ಜಾರಿಗೆ ತಂದಿತ್ತು. ಅವತ್ತು ಎಷ್ಟೊಂದು ದೂರ ದೃಷ್ಟಿಯಿಂದ ವಿಶಾಲ ಮೈಸೂರನ್ನು ಮತ್ತೆ ಕರ್ನಾಟಕವನ್ನಾಗಿ ಮಾಡುವುದಕ್ಕೆ ನಿಜಲಿಂಗಪ್ಪನವರು ಎಷ್ಟೊಂದು ಶ್ರಮವಹಿಸಿದ್ದರು ಉನ್ನುವುದನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಅದರ ಜೊತೆಯಲ್ಲಿ ಅಂದಿನ ಹಳೆಯ ಮೈಸೂರು ಭಾಗದಲ್ಲಿ ಬಹಳ ದಿಗ್ಗಜಗಳಾಗಿರತಕ್ಕಂಥವರು ರಾಜಕೀಯದಲ್ಲಿದ್ದರು. ಮಾನ್ಯ ಚನ್ನಬಸಪ್ಪನವರು, ಮಾನ್ಯ ಸಿದ್ದವೀರಪ್ಪನವರು ಮಾನ್ಯ ಚನ್ನಯ್ಯನವರು ಮತ್ತು ಮಾನ್ಯ ವೀರಣ್ಣಗೌಡರು ಹೀಗೆ ಅನೇಕ ದಿಗ್ಗಜಗಳಾಗಿರತಕ್ಕಂಥವರು ಇದ್ದರು. ಇವರೆಲ್ಲರ ಬಗ್ಗೆ ನಾವು ಪತ್ರಿಕೆಗಳ ಮೂಲಕ ಓದಿ ಅವರ ವಿಚಾರಧಾರೆಗಳನ್ನು ತಿಳಿದುಕೊಳ್ಳುತ್ತಿದ್ದೆವು. ಒಂದು ಕಡೆ ಸಿದ್ದವೀರಪ್ಪನವರು ಒಂದು ಗುಂಪಾದರೆ, ಮತ್ತೊಂದು ಕಡೆ ನಿಜಲಿಂಗಪ್ಪನವರದು ಮತ್ತೊಂದು ಗುಂಪಾಗಿ, ಆ ಗುಂಪು ರಾಜಕೀಯ ಇಡೀ ಹಳೆಯ ಮೈಸೂರು ಭಾಗ ಮತ್ತು ಕರ್ನಾಟಕದಲ್ಲಿ ತನ್ನದೇ ಆದ ಪ್ರಭಾವವನ್ನು ಕೂಡ ಬೀರಿರುವುದನ್ನು ನಾವು ಚಿಕ್ಕಂದಿನಲ್ಲಿಯೇ ಓದಿರತಕ್ಕಂಥದ್ದು ಇದೆ. ಅದರ ಜೊತೆಗೆ ಅವರು ಅಧಿಕಾರದಲ್ಲಿದ್ದಾಗಲೂ ಕೂಡ, ಅವರು ಸೋತಂಥ ಸಂದರ್ಭದಲ್ಲಿ ಇಲ್ಲಿ ಮಾನ್ಯ ಎಸ್.ಆರ್. ಕಂಠಿಯವರು ಇಲ್ಲಿ ಮುಖ್ಯಮಂತ್ರಿಗಳಾಗಿ ಭರತ ಎನ್ನುವ ಟೈಟಲ್ ಕೂಡ ನಿಜಲಿಂಗಪ್ಪನವರಿಗೆ ಬಂದಿತ್ತು. ಹೀಗೆ ಒಂದು ಪರ್ವಕಾಲದಲ್ಲಿ ಅವರು ತನ್ನದೇ ಆದ ಪ್ರಭಾವವನ್ನು ಬೀರಿ ನಿಜಲಿಂಗಂಪನವರು ಕರ್ನಾಟಕ ರಾಜ್ಯದಲ್ಲಿ ಅಲ್ಲದೇ ಇಡೀ ದೇಶದಲ್ಲಿ ಹಳೆಯ ಪರಂಪರೆ ಮತ್ತು ಮೌಲ್ಯಾಧರಿತ ರಾಜಕೀಯದ ಒಂದು ಕೊಂಡಿಯಾಗಿ ಒಂದು ಹೆಮ್ಮರವಾಗಿದ್ದಂಥವರ. ಇವತ್ತು ಆ ಕೊನೆಯ ಕೊಂಡಿ ಕಳಚಿಕೊಂಡಿದೆ. ದೇಶದ ಒಂದು ರಾಜಕೀಯದ ಚರಿತ್ರೆಯೇ ಬದಲಾವಣೆಯಾಯಿತು. ಅವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕಾಲದಲ್ಲಿ ಕಾಂಗ್ರೆಸ್ ಇಬ್ಬಗವಾಗಬೇಕಾಗಿದ್ದರೆ ಈ ಘರ್ಷಣೆ ಹಳೆಯದು, ಮೌಲ್ಯಾಧಾರಿತ ರಾಜಕಾರಣ ಮತ್ತು ಇತ್ತೀಚಿನ ರಾಜಕಾರಣ ಎರಡಕ್ಕೂ ಆದ ಘರ್ಷಣೆಯ ಫಲವಾಗಿ ಕಾಂಗ್ರೆಸ್ ಒಡೆದಿರತಕ್ಕಂಥದ್ದು

3. 30 ಪಿ.ಎಂ.

ಮತ್ತು ಈ ದೇಶದ ಚರಿತ್ರೆಯಲ್ಲಿ ಒಂದು ಮುಖ್ಯವಾದ ಘಟ್ಟ ಎನ್ನತಕ್ಕದ್ದು; ಆ ಘಟ್ಟಕ್ಕೆ ಕಾರಣಕರ್ತರಾಗಿರತಕ್ಕವರು ನಿಜಲಿಂಗಪ್ಪನವರು. ಅವರ ಜೊತೆಯಲ್ಲಿ ಅಂದಿನ ರಾಷ್ಟ್ರಮಟ್ಟದಲ್ಲಿ ಇದ್ದಂತಹ ನಾಯಕರುಗಳು ಕೂಡ ಕಾರಣಕರ್ತರು. ಶ್ರೀಯುತ ಕಾಮರಾಜನಾಡಾಗರ್ ಅವರು ಹಾಗೂ ಅನೇಕರು ಕಾರಣಕರ್ತರಾಗಿದ್ದವರು. ಅದರಲ್ಲಿ ಪ್ರಮುಖರಾಗಿದ್ದವರು ನಿಜಲಿಂಗಪ್ಪನವರು ಎನ್ನತಕ್ಕದ್ದನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸುವುದಕ್ಕೆ ಇಷ್ಟಪಡುತ್ತೇನೆ. ಅವರು ಅಧಿಕಾರದಲ್ಲಿ ಇದ್ದಂತಹ ಕಾಲದಲ್ಲೂ ಕೂಡ ಅವರ ಮೇಲೆ ಅನೇಕ ಆರೋಪಗಳು ಇದ್ದಂತಹದು ನಿಜ. ಇದು ಈ ದೇಶದ ಜಾಯಮಾನ ಎಂದು ಹೇಳುತ್ತೇನೆ. ಯಾರಾದರೂ ಒಬ್ಬರು ಆದರ್ಶಪ್ರಾಯವಾಗಿರತಕ್ಕವರು ಆಡಳಿತವನ್ನು ನೀಡುತ್ತಾರೆ, ಮುಂದಾಲೋಚನೆ ಮಾಡಿ ಅಧಿಕಾರವನ್ನು ನಡೆಸುತ್ತಾರೆ ಎಂದರೆ ಅವರ ಮೇಲೆ ಆರೋಪಗಳ ಸರಮಾಲೆಯನ್ನು ಹೊರಿಸತಕ್ಕಂಥಹದು ಒಂದು ಹವ್ಯಾಸ ಆಗಿದೆ. ಮಾನ್ಯ ನಿಜಲಿಂಗಪ್ಪನವರು ಅಧಿಕಾರವನ್ನು ನಡೆಸಿದಂತಹ ಕಾಲದಲ್ಲಿ, ಆಗಿನ ಸನ್ನಿವೇಶದಲ್ಲಿ ಎಲ್ಲರ ಬಾಯಿಮಾತು ಆಗಿರತಕ್ಕದ್ದು ಏನು ಎಂದರೆ "ಶರಾವತಿ ಕರ್ಮಕಾಂಡ", ಅಮಾನಿ ಕೆರೆ ಪ್ರಕರಣ, ಹೀಗೆ ಅನೇಕ ಪ್ರಕರಣಗಳಲ್ಲಿ ಅವರ ಮೇಲೆ ಆರೋಪವನ್ನು ಹೊರಿಸುತ್ತಿದ್ದರು. ಆದರೆ ನಾವು ಇತ್ತೀಚೆಗೆ ಬಂದಮೇಲೆ ನಮಗೆಲ್ಲ ತಿಳುವಳಿಗೆ ಬಂದಮೇಲೆ ಇದರಲ್ಲಿ ಎಷ್ಟರಮಟ್ಟಿಗೆ ಹುರುಳು ಇದೆ? ಎಷ್ಟರಮಟ್ಟಿಗೆ ಇದರಲ್ಲಿ ಸತ್ಯ ಇದೆ ಎಂದು ನಾವು ಅವಲೋಕಿಸಿದಾಗ ಈ ಮಿಥ್ಯಾರೋಪಗಳನ್ನು

ಅಧಿಕಾರದಲ್ಲಿದ್ದಂತಹವರಿಗೆ ಹೊರಿಸುತ್ತಾರೆ ಎನ್ನತಕ್ಕದ್ದು ಮತ್ತು ಈ ಮಿಥ್ಯಾರೋಪಗಳೆಲ್ಲವೂ ಮಿಥ್ಯ ಎನ್ನತಕ್ಕದ್ದು ನಮಗೆ ಗೊತ್ತಾಗುತ್ತದೆ. ನಿಜಲಿಂಗಪ್ಪನವರು ಒಂದು ಆದರ್ಶಪ್ರಾಯವಾದಂತಹ ಜೀವನವನ್ನು ನಡೆಸಿದ್ದಲ್ಲದೆ ಒಂದು ಸ್ವಚ್ಛವಾದಂತಹ ಆಡಳಿತವನ್ನು ನೀಡತಕ್ಕದ್ದಕ್ಕೆ ಭ್ರಷ್ಟಾಚಾರ ರಹಿತವಾದಂತಹ ಆಡಳಿತವನ್ನು ನೀಡುವುದರಲ್ಲಿ ಅವರು ಪ್ರಮುಖರಾಗಿದ್ದರು ಎನ್ನತಕ್ಕ ವಿಚಾರ ನನ್ನದು. ಅವರು ಆ ಆದರ್ಶಗಳನ್ನು ನಮ್ಮ ಮುಂದೆ ಬಿಟ್ಟು ಹೋಗಿದ್ದಾರೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ ಈ ದೇಶದ ರಾಜಕೀಯದಲ್ಲಿಯೇ ಅತ್ಯಂತ ಪ್ರಭಾವಿತವಾದಂತಹ ಒಂದು ಪ್ರಭಾವವನ್ನು ಅವರು ಬೀರಿ ಹೋಗಿದ್ದಾರೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇವತ್ತು ನಮ್ಮ ಸ್ನೇಹಿತರಾಗಿದ್ದಂತಹ ಮಾನ್ಯ ಎಂ.ಎಸ್. ಕೃಷ್ಣನ್ ಅವರು ಈ ಸಭೆಯಲ್ಲಿದ್ದರು. ಅವರು ಈ ಸಭೆಯ ಸದಸ್ಯರಾಗಿದ್ದಂತಹ ಕಾಲದಲ್ಲಿ ನಾನು ಸಹ ಅವರ ಪಕ್ಕದಲ್ಲಿ ಕುಳಿತುಕೊಳ್ಳುವಂತಹ ಅವಕಾಶ ವಿರೋಧಪಕ್ಷದಲ್ಲಿ ನಾನು ಇದ್ದ ಕಾರಣ ಇತ್ತು. ಇವತ್ತು ದುರಾದೃಷ್ಟ ಎಂದರೇ ಇಡೀ ಪ್ರಪಂಚದಲ್ಲಿಯೇ ಪುರೋಗಾಮಿ ಆಲೋಚನೇ ಮಾಡತಕ್ಕಂತಹ ಶಕ್ತಿಗಳು, ಪುರೋಗಾಮಿ ಆಲೋಚನೆ ಮಾಡತಕ್ಕಂತಹ ವ್ಯಕ್ತಿಗಳು ಕಣ್ಮರೆ ಆಗುತ್ತಿದ್ದಾರೆ. ಅದರಲ್ಲೂ ಸಹ ಈ ಸೋವಿಯತ್ ಒಕ್ಕೂಟ ಒಡೆದ ಮೇಲೆ ಇವತ್ತು ಪ್ರಪಂಚದಲ್ಲಿಯೇ ಒಂದು ಜೂಲಿ - ಪೋಲಾರ್ ವ್ಯವಸ್ಥೆ ಜಾರಿಗೆ ಬರುತ್ತಿರತಕ್ಕದ್ದನ್ನು ನಾವು ನೋಡುತ್ತಿದ್ದೇವೆ. ಅದಕ್ಕೆ ವಿರುದ್ಧವಾಗಿರತಕ್ಕ ದಿಕ್ಕಿನಲ್ಲಿ ಮಾನ್ಯ ಕೃಷ್ಣನ್ ಅವರು ತಾವು ಅಪಾರವಾಗಿ ನಂಬಿದಂತಹ ಮಾರ್ಕ್ಸ್‌ವಾದಿ ಸಿದ್ಧಾಂತದಲ್ಲಿ ವಾದ ಮಂಡಿಸುತ್ತಿದ್ದರು. ಶ್ರಮಜೀವಿ ವರ್ಗ, ಜೊತೆಗೆ ಶೋಷಿತ ವರ್ಗಗಳ ಧ್ವನಿಯಾಗಿ ಇಲ್ಲಿ ಗಂಟೆಗಟ್ಟಲೆ ಈ ಸದನದಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದರು. ಅವರು ಮಾತನಾಡುತ್ತಿದ್ದಂತಹದರಲ್ಲಿ ವಿಶೇಷವೇನೆಂದರೆ, ಅವರು ಯಾವತ್ತೂ ಕೂಡ ನಿಜವನ್ನು ಮತ್ತು ಸತ್ಯಾಂಶಗಳಿಂದ ಕೂಡಿದ, ಅಂಕಿಅಂಶಗಳಿಂದ ಕೂಡಿರತಕ್ಕಂತಹ ಅವರ ಪ್ರಭುದ್ಧವಾದಂತಹ ಭಾಷಣವನ್ನು ಇಲ್ಲಿ ಸಭೆಯಲ್ಲಿ ಕೇಳಿತಕ್ಕಂತಹ ಅದೃಷ್ಟ ನನಗೂ ಸಹ ಇತ್ತು. ಕರ್ನಾಟಕ ರಾಜ್ಯದಲ್ಲಿ ಈ ಶ್ರಮಜೀವಿ ವರ್ಗಗಳನ್ನು ಸುಮಾರು ೨೦-೨೫ ವರ್ಷಗಳ ಕಾಲ ಒಬ್ಬ ಹಿರಿಯ ನಾಯಕರಾಗಿ ಪ್ರತಿನಿಧಿಸತಕ್ಕಂತಹ ಒಂದು ಅಮೋಘವಾದ ಕೆಲಸವನ್ನು ಮಾಡಿ, ಆ ವರ್ಗಗಳನ್ನು ಪ್ರತಿನಿಧಿಸಿ, ಆ ವರ್ಗಗಳಿಗೆ ರಕ್ಷಣೆ ಕೊಡತಕ್ಕಂತಹ ಕೆಲಸವನ್ನು ಮಾನ್ಯ ಎಂ.ಎಸ್.ಕೃಷ್ಣನ್ ಅವರು ಮಾಡಿದ್ದಾರೆ. ಅವರು ಮುಂದೆ ಬರತಕ್ಕಂತಹ ಪೀಳಿಗೆಗೆ ಮತ್ತು ಯಾರು ಇವತ್ತಿನ ದಿವಸ ಕಾರ್ಮಿಕವರ್ಗಗಳ, ಶೋಷಿತ ವರ್ಗಗಳ ಪ್ರತಿನಿಧಿಗಳಾಗಿ ಪ್ರತಿಬಿಂಬಿಸುತ್ತಾರೆ ಮತ್ತು ಆ ಸಂಘಟನೆಗಳಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ ಅವರಿಗೆ ಆದರ್ಶಪ್ರಾಯವಾಗಿರತಕ್ಕಂಥ ಅನೇಕ ವಿಚಾರಗಳನ್ನು ಮಾನ್ಯ ಎಂ.ಎಸ್.ಕೃಷ್ಣನ್ ಅವರು ಬಿಟ್ಟು ಹೋಗಿದ್ದಾರೆ. ಅವರು ಬಿಟ್ಟು ಹೋಗಿರತಕ್ಕಂತಹ ದಾರಿಯಲ್ಲಿ ಇವತ್ತು ಕಾರ್ಮಿಕವರ್ಗ ಬೆಳೆದರೆ ನಿಜವಾಗಿಯೂ ಅದು ಕಾರ್ಮಿಕ ವರ್ಗಕೆಕ ಶ್ರೇಯಸ್ಸು ಮತ್ತು ರಾಜ್ಯದ, ದೇಶದ ಅಭಿವೃದ್ಧಿಗೂ ಕೂಡ ಶ್ರೇಯಸ್ಸು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸದನದ ಸದಸ್ಯರಾಗಿದ್ದಂತಹ ಮಾನ್ಯ ಪಾಪಗೌಡರು ಇವತ್ತಿನ ದಿವಸ ನಮ್ಮ ಕಣ್ಮುಂದೆ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಹೇಳಿದ್ದಾರೆ; ನಮ್ಮ ರಾಷ್ಟ್ರೀಯ ಹೆದ್ದಾರಿಗಳು ಮತ್ತು ರಸ್ತೆಗಳ ಪರಿಸ್ಥಿತಿ ಏನಾಗಿದೆ ಎಂದು ಹೇಳಿದ್ದಾರೆ. ಮಾನ್ಯ ಗೃಹ ಸಚಿವರಲ್ಲಿ ಇದೇ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅನೇಕ ಜನ ಈ ಸದನದ ಸದಸ್ಯರಾಗಿದ್ದವರು ಅಪಘಾತದಲ್ಲಿ ಸತ್ತಿದ್ದಾರೆ. ಅನೇಕ ಜನರ ಪ್ರಾಣ ಹೋಗಿದೆ. ದಿನನಿತ್ಯ ಇವತ್ತು ಅಪಘಾತಗಳು ಆಗುತ್ತಿವೆ. ಇದಕ್ಕೆ ಕಾರಣ ಏನು ಇದೆ, ಇದರ ಬಗ್ಗೆ ಹೇಳುವವರು ಕೇಳುವವರು ಯಾರು ಇಲ್ಲ ಎನ್ನತಕ್ಕದ್ದನ್ನು ನಾವು ಗಮನಿಸಲೇಬೇಕಾಗಿದೆ. ಆ ಪರಿಸ್ಥಿತಿ ಇವತ್ತು ಉಂಟಾಗಿದೆ. ಅಲ್ಲೊಬ್ಬರು

ಶಾಸಕರು ಇವತ್ತು ಅಲ್ಲಿ ಮಡಿದಿರುವ ಕಾರಣದಿಂದ ನಾನು ಈ ಮಾತನ್ನು ಹೇಳುತ್ತಿಲ್ಲ. ಸಾಮಾನ್ಯ ಜನ ಸಹ ಸತ್ತರು ಎಂದರೆ ೧೦,೧೫,೨೦, ೫೦, ೧೦೦ ಜನ ಸಾಯತಕ್ಕಂತಹ ಪರಿಸ್ಥಿತಿ ಇದೆ. ಇದನ್ನು ಸರಿಪಡಿಸಬೇಕಾಗಿರತಕ್ಕದ್ದು ಆಡಳಿತಗಾರರ ಕರ್ತವ್ಯ. ಆಗಿರತಕ್ಕ ವಿಫಲತೆ ಇವತ್ತು ಅದನ್ನು ಎತ್ತಿ ತೋರಿಸುತ್ತಿದೆ. ಇದನ್ನೂ ಸಹ ಮಾನ್ಯ ಗೃಹ ಮಂತ್ರಿಗಳು ಗಮನಿಸಿ ಸಂಚಾರ ವ್ಯವಸ್ಥೆಯನ್ನು ಸರಿಪಡಿಸಬೇಕು. ಮಾನ್ಯ ಪಾಸಗೌಡರು ಸತ್ತಿರತಕ್ಕಂತಹ ಸಂದರ್ಭದಲ್ಲಿಯಾದರೂ ಕೂಡ ನೀವು ಈ ಸಂಚಾರ ವ್ಯವಸ್ಥೆಯನ್ನು, ಸಂಚಾರ ವ್ಯವಸ್ಥೆಯ ನಿಯಮಾವಳಿಗಳು ಏನು ಇವೆ? ಈ ನಿಯಮಗಳನ್ನು ಪಾಲಿಸತಕ್ಕದ್ದಕ್ಕೆ ತಾವು ಮುಂದಾಗಬೇಕು ಎನ್ನುವ ಮನವಿಯನ್ನು ಈ ಸಂದರ್ಭದಲ್ಲಿ ಮಾಡುತ್ತಾ ಮಾನ್ಯ ಸಿಂಧ್ಯಾರವರು ಉಳಿದಿರತಕ್ಕಂತಹ ಮಾನ್ಯ ಸದಸ್ಯರುಗಳ ವಿಚಾರಗಳನ್ನು ತಿಳಿಸಿರುವ ಕಾರಣದಿಂದ ತಾವು ನನಗೆ ಇಷ್ಟು ವಿಚಾರಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಇಲ್ಲಿ ಮುಖ್ಯವಾದ ವಿಷಯವೇನೆಂದರೆ ೪.೦೦ ಗಂಟೆಗೆ ಬಿ.ಎ.ಸಿ. ಮೀಟಿಂಗ್ ಇದೆ. ೪.೩೦ಕ್ಕೆ ಸರ್ವ ಪಕ್ಷಗಳ ನಾಯಕರ ಸಭೆ ಇದೆ. ಮಾನ್ಯ ಸದಸ್ಯರು ಸ್ವಲ್ಪ ಬ್ರೀಫಾಗಿ ಹೇಳಿಮುಗಿಸಬೇಕು.

+ ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ)

ಸನ್ಮಾನ್ಯ ಅಧ್ಯಕ್ಷರೆ, ಸಂತಾಪ ಸೂಚನೆಯ ನಿರ್ಣಯದ ವಿಚಾರವಾಗಿ ಹೇಳಬೇಕೆಂದರೆ, ನಮ್ಮ ರಾಜ್ಯದ, ರಾಷ್ಟ್ರದ ನಾಯಕರಲ್ಲಿ ಬಹಳ ಮಹತ್ವದ ಜೀವಿಗಳು ಇವತ್ತು ನಮ್ಮಿಂದ ಅಗಲಿದ್ದಾರೆ. ಅವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ನಮ್ಮ ರಾಷ್ಟ್ರದ ನಾಯಕರಲ್ಲಿ ಒಬ್ಬರಾದಂತಹ ನಮ್ಮ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳೂ ಆಗಿ ಕಾರ್ಯ ಮಾಡಿದಂತಹ ಸನ್ಮಾನ್ಯ ಎಸ್.ನಿಜಲಿಂಗಪ್ಪನವರ ಬಗ್ಗೆ ಈಗಾಗಲೇ ಸನ್ಮಾನ್ಯ ಮುಖ್ಯಮುಂತ್ರಿಗಳಾದಿಯಾಗಿ ಅನೇಕ ಜನ ಮಾತನಾಡಿದ್ದಾರೆ. ಬಹುಶ: ರಾಷ್ಟ್ರದ ರಾಜಕಾರಣಿಗಳಲ್ಲಿ ಸನ್ಮಾನ್ಯ ಎಸ್.ನಿಜಲಿಂಗಪ್ಪನವರು ಕೆಲವೇ ಕೆಲವು ರಾಷ್ಟ್ರದ ನಾಯಕರಲ್ಲಿ ಅದೂ ಬೆರಳೆಣಿಕೆಯ ನಾಯಕರಲ್ಲಿ ಒಬ್ಬರು ಎಂದು ನಾವು ಹೆಮ್ಮೆಯಿಂದ ಹೇಳಬೇಕಾಗುತ್ತದೆ. ಬಹುಶ: ರಾಷ್ಟ್ರದಲ್ಲಿ ಬಹಳ ದೂಡ್ಡ ದೊಡ್ಡವರು ಮಹಾತ್ಮಾ ಗಾಂಧಿಯವರ ಸಾಲಿನಲ್ಲಿ ಕೆಲಸ ಮಾಡಿದಂತಹವರು ಅನೇಕರು ಇದ್ದಾರೆ. ಅದರಲ್ಲಿ ಮಾನ್ಯ ನಿಜಲಿಂಗಪ್ಪನವರು ಆ ದಾರಿಯಲ್ಲಿಯೇ ತಮ್ಮ ಜೀವನದ ಉದ್ದಕ್ಕೂ ತಮ್ಮ ಕಾರ್ಯವನ್ನು ಮಾಡಿ ಒಬ್ಬ ಆದರ್ಶವಾದಿ ರಾಜಕಾರಣಿ ಎಂದು ಕೇವಲ ರಾಜ್ಯಕ್ಕೆ ಮಾತ್ರವಲ್ಲ, ರಾಷ್ಟ್ರಕ್ಕೇ ಕೊಟ್ಟಂತಹ ಕೊಡುಗೆಯನ್ನು ನಾವ್ಯಾರೂ ಮರೆಯಲಿಕ್ಕೆ ಸಾಧ್ಯ ಇಲ್ಲ. ಅವರು ಪ್ರಾರಂಭದಿಂದ ಒಬ್ಬ ಉತ್ತಮವಾದಂತಹ ನ್ಯಾಯವಾದಿವಾಗಿ ತಮ್ಮ ಕಾಯಕವನ್ನು ಶುರು ಮಾಡಿದಂತಹವರು. ಸ್ವಾತಂತ್ರ ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಒಬ್ಬ ರಾಷ್ಟ್ರ ಭಕ್ತರಾಗಿ, ಸ್ವಾತಂತ್ರ ಸೇನಾನಿಯಾಗಿ ನಿಷ್ಕಳಂಕವಾದಂತಹ ಒಬ್ಬ ಪ್ರಾಮಾಣಿಕ ರಾಜಕಾರಣಿಯವಾಗಿ ಕಾರ್ಯ ಮಾಡಿದ್ದಾರೆ. ರಾಜ್ಯದ ಮುಖ್ಯಮಂತ್ರಿಗಳಾಗಿ ಈ ಸಂಪೂರ್ಣ ಕರ್ನಾಟಕವನ್ನು ನಿರ್ಮಾಣ ಮಾಡುವ ರೂವಾರಿ ಆಗಿ ಕಾರ್ಯ ಮಾಡಿದಂತಹವರು ಸನ್ಮಾನ್ಯ ಎಸ್.ನಿಜಲಿಂಗಪ್ಪನವರು. ಬಹುಶ: ಅಂತಹ ರಾಜಕಾರಣಿಗಳನ್ನು ನಾವು ಇವತ್ತು ಹುಡುಕುವುದಕ್ಕೆ ಸಾಧ್ಯ ಇಲ್ಲ. ಬಹುಶ: ಅಂದಿನ ಕಾಲದಲ್ಲಿಯೂ ಸಹ ಒಬ್ಬ ಆದರ್ಶ ರಾಜಕಾರಣಿ ಆಗಿದ್ದರು. ಹಿಂದಿನ ಯಾವ ಸ್ವಾತಂತ್ರ ಪೂರ್ವದಲ್ಲಿ ಸ್ವಾತಂತ್ರ್ಯದ ನಂತರವೂ ಸಹಿತ ಇದ್ದಂತಹ ರಾಜಕಾರಣಿಗಳಲ್ಲಿ ಎದ್ದು ಕಾಣುವಂತಹ ವ್ಯಕ್ತಿತ್ವ ಸನ್ಮಾನ್ಯ ಎಸ್.ನಿಜಲಿಂಗಪ್ಪನವರದು.

ಇವತ್ತಿಗೂ ಅವರು ಆದರ್ಶವಾದಂತಹ ವ್ಯಕ್ತಿ; ಮುಂದೆಯೂ ಸಹ ಆದರ್ಶವಾದಂತಹ ವ್ಯಕ್ತಿ. ಬಹುಶಃ ಇಂತಹ ಒಬ್ಬ ಆದರ್ಶವಾದಂತಹ ರಾಜಕಾರಣಿ ಹಿಂದೆ ಇರಲಿಲ್ಲ ಮುಂದೆಯೂ ಸಹಿತ ಇರುವುದಿಲ್ಲ ಎನ್ನುವ ಮಾತನ್ನು ನಾನು ಅವರ ಬಗ್ಗೆ ಹೇಳಬೇಕಾಗುತ್ತದೆ. ಅಂತಹವರಲ್ಲಿ ಸ್ವಾತಂತ್ರ್ಯದ ನಂತರ ರಾಷ್ಟ್ರದ ಸಂವಿಧಾನದ ರಚನೆಯಲ್ಲಿ ಸಹ ತಮ್ಮನ್ನು ತಾವು ತೊಡಗಿಸಿಕೊಂಡು, ಡಾ|| ಬಿ.ಆರ್ ಅಂಬೇಡ್ಕರ್ ಅವರ ಜೊತೆಯಲ್ಲಿ ಕೆಲಸ ಮಾಡಿದಂತಹವರು. ಗ್ರಾಮೀಣ ಅಭಿವೃದ್ಧಿಯ ವಿಚಾರದಲ್ಲಿ ಮಹಾತ್ಮಾ ಗಾಂಧಿಯವರ ಕನಸು ಏನು ಇತ್ತು, ಆ ಗ್ರಾಮೀಣಾಭಿವೃದ್ಧಿ ಬಗ್ಗೆ ಅವರು ಸತತವಾಗಿ ಮಾಡಿದಂತಹ ಕಾರ್ಯ ಎಂದರೆ ರೈತರ ಅಭಿವೃದ್ಧಿ ಆಗಬೇಕು, ರೈತ ಕೂಲಿಕಾರರ ಅಭಿವೃದ್ಧಿ ಆಗಬೇಕು; ನೀರಾವರಿಯಿಂದ ಜನರಿಗೆ, ಭೂಮಿಗೆ ನೀರು ಸಿಗಬೇಕು; ಎಲ್ಲರಿಗೂ ಉದ್ಯೋಗಾವಕಾಶಗಳು ಸಿಗಬೇಕು, ಗುಡಿಕೈಗಾರಿಕೆಗಳು ಬೆಳೆಯಬೇಕು ಎನ್ನುವಂತಹ ಕನಸು, ಅವರ ಕೊನೆಯ ಹಂತವರೆಗೆ ಅವರು ತಮ್ಮ ಕಾಲದಲ್ಲಿ ನೆನೆಸುತ್ತಿದ್ದರು. ಇಷ್ಟೇ ಅಲ್ಲ, ಅವರು ಪ್ರತಿ ಒಬ್ಬ ರಾಜಕಾರಣಿಗೂ ಹೇಳುತ್ತಿದ್ದರು. ಬಹುಶಃ ನೀವೆಲ್ಲ ರೈತರ ಹೊಲಕ್ಕೆ ನೀರು ಕೊಡಬೇಕು. ರೈತನ ಹೊಲಕ್ಕೆ ನೀರು ಮುಟ್ಟಿಸಬೇಕು. ರೈತರ ಅಭಿವೃದ್ಧಿ ಆಗಬೇಕು. ಗ್ರಾಮೀಣ ಜನರ ಬದುಕು ಹಸನಾಗಬೇಕು ಎಂಬ ಅವರ ವಿಚಾರ ಸತತವಾಗಿತ್ತು. ಅಷ್ಟೇ ಅಲ್ಲ, ಶಿಕ್ಷಣದ ಬಗ್ಗೆ ಅಪಾರವಾದ ಒಲವು ಇಟ್ಟುಕೊಂಡಿದ್ದರು. ಶಿಕ್ಷಣಕ್ಕೆ ಅವರು ಸಂವಿಧಾನದಲ್ಲಿ ಏನು ಫ್ರೀ ಎಜುಕೇಶನ್ ಕೊಡಬೇಕೆಂಬ ಉದ್ದೇಶ ಇದೆ? ಆ ಫ್ರೀ ಎಜುಕೇಶನ್ ಎಲ್ಲರಿಗೂ ಸಿಗಬೇಕೆಂಬ ಆಸೆ ಅವರಲ್ಲಿತ್ತು. ಅವರು ಒಬ್ಬ ಜಾತ್ಯಾತೀತವಾದಂತಹ ರಾಜಕಾರಣಿ; ಅಷ್ಟೇ ಅಲ್ಲ, ಅವರು ನೀರಾವರಿಗೆ ನೀಡಿದಂತಹ ಕೊಡುಗೆ ವಿಚಾರ, ಅವರು ನೀಡಿದಂತಹ ಕಾರ್ಯಗಳನ್ನು ನಾವು ಇವತ್ತಿಗೂ ಮುಗಿಸಬೇಕಾಗಿದೆ. ಅವರ ಕಾಲದಲ್ಲಿ ಪ್ರಾರಂಭವಾದಂಥ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಇವೊತ್ತಿಗೂ ರಾಜ್ಯ ಸರ್ಕಾರ ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಅದೇ ರೀತಿ ಅಂದು ಕೈಗೊಂಡ ಶರಾವತಿ ಜಲವಿದ್ಯುತ್ ಯೋಜನೆಯ ಕರ್ಮಕಾಂಡದ ಬಗ್ಗೆ ಅವರ ಮೇಲೆ ಸಾಕಷ್ಟು ರೀತಿಯಲ್ಲಿ ಅಪಾದನೆಗಳು ಬಂದವು. ಅಷ್ಟೇ ಅಲ್ಲದೆ, ಅವರ ಕಾಲದಲ್ಲಿ ರಾಜಾಜಿನಗರದಲ್ಲಿ ನಿರ್ಮಾಣಕೊಂಡಂಥ ಅನೇಕ ಕಟ್ಟಡಗಳು ಎಸ್.ನಿಜಲಿಂಗಪ್ಪನವರ ಕಟ್ಟಡಗಳು ಎಂದೇ ಕೆಲವರು ಆಪಾದನೆಗಳನ್ನು ಮಾಡಿದರು. ಬಹುಶಃ ಅವೊತ್ತಿನವರೆವಿಗೆ ಅವರಿಗೆ ಬೆಂಗಳೂರು ನಗರದಲ್ಲಿ ಒಂದು ಮನೆಯೂ ಇರಲಿಲ್ಲ. ದಿವಂಗತ ಎಸ್. ನಿಜಲಿಂಗಪ್ಪನವರ ಧರ್ಮಪತ್ನಿಯವರು ನಿಧನರಾದಂಥ ಸಮಯದಲ್ಲಿ ನಿಮ್ಮಂಥ ರಾಷ್ಟ್ರನಾಯಕರೆನಿಸಿರುವ ರಾಜಕಾರಣಿಗಳು ಬೆಂಗಳೂರಿನಲ್ಲಿರಬೇಕು, ನಿಮ್ಮಿಂದ ದೇಶದಲ್ಲಿರುವ ಅನೇಕ ರಾಜಕಾರಣಿಗಳಿಗೆ ಅನೇಕ ರೀತಿಯಲ್ಲಿ ಸಲಹೆ-ಸೂಚನೆಗಳು ಬೇಕಾಗುತ್ತದೆ, ನೀವು ಚಿತ್ರದುರ್ಗದಲ್ಲಿದ್ದರೆ ನಿಮ್ಮನ್ನು ಕಾಣುವುದಕ್ಕೆ ಅಲ್ಲಿಗೆ ಬಂದು ಹೋಗವುದಕ್ಕೆ ಕಷ್ಟವಾಗುತ್ತದಾದ್ದರಿಂದ ಬೆಂಗಳೂರಿನಲ್ಲಿಯೇ ಒಂದು ಮನೆ ಕೊಡುತ್ತೇವೆ. ಎಂದರೂ ಬೇಡವೆಂದು ಹೇಳಿದಂಥ ರಾಜಕಾರಣಿಗಳು ರಾಷ್ಟ್ರದಲ್ಲಿ ಯಾರಾದರೂ ಇದ್ದರೆ ಅದು ಎಸ್. ನಿಜಲಿಂಗಪ್ಪನವರೇ! ಅವರಿಗೆ ರಾಷ್ಟ್ರಪತಿಯಾಗುವಂಥ ಅವಕಾಶ ಸಿಕ್ಕಿದ್ದರೂ ಸಹ ಅದನ್ನು ಕಡೆಗಣಿಸಿ ಬೇರೆಯವರಿಗೆ ಬಿಟ್ಟುಕೊಟ್ಟಿರುವುದೂ ಸಹ ಗೊತ್ತಿದೆ. ಅವರ ಮಾತಿನಂತೆ ಯಾರನ್ನು ರಾಷ್ಟ್ರಾಧ್ಯಕ್ಷರನ್ನಾಗಿ ಮಾಡಬೇಕಾಗುತ್ತೋ, ತಮ್ಮನ್ನು ಹುಡುಕೊಂಡು ಬಂದ ರಾಷ್ಟ್ರಾಧ್ಯಕ್ಷರ ಸ್ಥಾನವನ್ನು ಕಡೆಗಣಿಸಿ ಅವರು ಮಾನ್ಯ ನೀಲಂ ಸಂಜೀವರೆಡ್ಡಿಯವರಿಗೆ ಆ ಸ್ಥಾನವನ್ನು ಬಿಟ್ಟುಕೊಟ್ಟರೇ ಹೊರತು ಆ ಸ್ಥಾನವನ್ನು ಅವರೆಂದೂ ಇಷ್ಟಪಡಲಿಲ್ಲ. ಈ ರಾಷ್ಟ್ರದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಜನ್ಮ ತಾಳುವುದಕ್ಕೆ ಅವರೇ

ಮುಖ್ಯ ಕಾರಣಕರ್ತರು ಎನ್ನಬಹುದು. ೧೯೬೯ನೇ ಇಸವಿಯಲ್ಲಿ ಕಾಂಗ್ರೆಸ್ ಪಕ್ಷ ಒಡೆದು ಹೋಳಾದಂಥ ಸಂದರ್ಭದಲ್ಲಿ ರಾಷ್ಟ್ರದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ನಿರ್ಮಾಣವಾಗುವುದಕ್ಕೆ ಅವರು ಅವಕಾಶ ಮಾಡಿಕೊಟ್ಟರು ಎಂಬುದನ್ನು ನಾವು ನಿಸ್ಸಂಶಯವಾಗಿ ಹೇಳಬೇಕಾಗುತ್ತದೆ. ಅವರು ಸಮಗ್ರ ಕರ್ನಾಟಕದ ಬಗ್ಗೆ ಯಾವಾಗಲೂ ಚಿಂತನೆ ನಡೆಸುತ್ತಿದ್ದಂಥ ಒಬ್ಬ ಅಪ್ಪಟ ರಾಜಕಾರಣಿಯಾಗಿದ್ದರಷ್ಟೇ ಅಲ್ಲ ಇವೊತ್ತು ಉತ್ತರ ಕರ್ನಾಟಕ ಭಾಗದಲ್ಲಿ ಅಭಿವೃದ್ಧಿ ದೃಷ್ಟಿಯಿಂದ ಸಾಕಷ್ಟು ಅನ್ಯಾಯವಾಗಿದೆಯೆಂಬ ಕೂಗು ಏನು ಕೇಳಿಬರುತ್ತಿದೆ ಹಾಗೂ ಪ್ರತ್ಯೇಕ ಕರ್ನಾಟಕವಾಗಬೇಕೆಂಬ ಚಳುವಳಿ ಏನು ನಡೆಯುತ್ತಿದೆ ಇದಕ್ಕೆ ನಾವ್ಯಾರೂ ಸಹ ಒತ್ತು ಕೊಡುತ್ತಿಲ್ಲ. ಇಡೀ ಕರ್ನಾಟಕ ಸಮಗ್ರ ಕರ್ನಾಟಕ, ಅಖಂಡ ಕರ್ನಾಟಕವಾಗಿ ಉಳಿಯಬೇಕೆಂದು ಅವರು ಏನು ಕನಸು ಕಂಡಿದ್ದರು, ಅವರ ಕನಸನ್ನು ನನಸಾಗಿಸುವುದು ನಮ್ಮೆಲ್ಲರ ಗುರಿಯಾಗಿದೆ. ಕರ್ನಾಟಕದಲ್ಲಿ ನೈರುತ್ಯ ರೈಲ್ವೆ ವಲಯ ಪ್ರಾರಂಭವಾಗಬೇಕೆಂದಾಗ ಅದು ಹುಬ್ಬಳ್ಳಿಯಲ್ಲಿಯೇ ಆಗಬೇಕೆಂದು ಅವರು ಕೇಂದ್ರದ ರೈಲ್ವೆ ಸಚಿವರಾಗಿದ್ದ ಶ್ರೀ ಜಾಫರ್ ಷರೀಫ್‌ರವರಿಗೆ ಹೇಳುತ್ತಿದ್ದರು ಮತ್ತು ಹೈಕೋರ್ಟ್ ಪೀಠ ಸ್ಥಾಪಿಸಬೇಕೆಂದಾಗಲೂ ಕೂಡ ಅದು ಉತ್ತರ ಕರ್ನಾಟಕದ ಹುಬ್ಬಳ್ಳಿಯಲ್ಲಿಯೇ ಆಗಬೇಕೆಂದು ಹೇಳುತ್ತಿದ್ದರು. ಈ ರೀತಿ ಸಮಗ್ರ ಕರ್ನಾಟಕ ಅಭಿವೃದ್ಧಿ ಬಗ್ಗೆ ಯಾವಾಗಲೂ ಚಿಂತನೆ ನಡೆಸುತ್ತಿದ್ದಂಥ ಒಬ್ಬ ಸಜ್ಜನ ರಾಜಕಾರಣಿಯಾಗಿದ್ದರು. ಅವರು ಕೇವಲ ಒಬ್ಬ ರಾಜಕಾರಣಿಯಾಗಿರದೇ ನಾಡಿನ, ದೇಶದ ಸಮಗ್ರ ಜನರ ಚಿಂತಕರಾಗಿ, ಬಸವ ತತ್ವದಲ್ಲಿ, ವಿಚಾರದಲ್ಲಿ ನಂಬಿಕೆಯಿಟ್ಟು ಅವರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸತತವಾಗಿ ಅದನ್ನು ಪಾಲಿಸಿ ಅದರಂತೆ ಬಾಳಿನುದ್ದಕ್ಕೂ ಬದುಕಿದಂಥ ಪ್ರಾಮಾಣಿಕ ರಾಜಕಾರಣಿ ಸನ್ಮಾನ್ಯ ಎಸ್. ನಿಜಲಿಂಗಪ್ಪನವರು. ಅವರು ನಾಡಿನ, ದೇಶದ ಸರ್ವಾಂಗೀಣ ಅಭಿವೃದ್ಧಿ ಕಂಡಂಥ ಕನಸುಗಳನ್ನು ನನಸು ಮಾಡುವುದಕ್ಕೆ ಅವರ ಹೆಸರಿನಲ್ಲಿ ಒಂದು ಟ್ರಸ್ಟ್ ಸ್ಥಾಪಿಸಬೇಕೆಂದು ಹತ್ತು ವರ್ಷಗಳ ಹಿಂದೆ ಏನು ಯೋಜನೆ ಹಮ್ಮಿಕೊಳ್ಳಲಾಗಿತ್ತು ನನ್ನ ಸದಸ್ಯ ಸ್ನೇಹಿತರು ತಿಳಿಸಿರುವಂತೆ ಸದರಿ ಟ್ರಸ್ಟ್ ಅನ್ನು ರಾಷ್ಟ್ರಮಟ್ಟದಲ್ಲಿ ಸ್ಥಾಪಿಸುವ ಅಗತ್ಯವಿದೆ ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾವೂ ಸಹ ವಿನಂತಿಸಿಕೊಳ್ಳುತ್ತಿದ್ದೇವೆ. ಏಕೆಂದರೆ, ಟ್ರಸ್ಟ್ ಸ್ಥಾಪಿಸುವ ಮೂಲಕ ಇಂತಹ ರಾಜಕಾರಣಿಗಳನ್ನು ರಾಷ್ಟ್ರದ ಒಬ್ಬ ನೇತಾರರನ್ನಾಗಿ ಬಿಂಬಿಸುವಂಥ ಅಗತ್ಯವಿದೆ, ಅವರು ನಾಡಿಗೆ, ದೇಶಕ್ಕೆ ಸಲ್ಲಿಸಿರುವ ಸೇವೆಗೆ ಅವರಿಗೆ ಭಾರತ ರತ್ನದಂಥ ಪರಮ ಪ್ರಶಸ್ತಿ ಸಿಗಬೇಕಾಗಿತ್ತು. ಅವರು ಇಂದು ನಮ್ಮನ್ನು ಅಗಲಿದ್ದರೂ ಸಹ ಮರಣೋತ್ತರವಾಗಿ ಅವರಿಗೆ ಭಾರತ ರತ್ನ ಪ್ರಶಸ್ತಿ ಕೊಡಿಸುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಆಶಿಸುವಂಥ ಕೆಲಸ ಮಾಡಬೇಕು. ಇವೊತ್ತು ನಮಗೆಲ್ಲರಿಗೂ ಹಾಗೂ ಮುಂದಿನ ಜನಾಂಗಕ್ಕೂ ಆದರ್ಶಪ್ರಾಯರಾಗಿರುವ ಇಂತಹ ಒಬ್ಬ ರಾಜಕಾರಣಿ, ನಾಡು-ನುಡಿಗಾಗಿ ಮತ್ತು ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಂಥ ವ್ಯಕ್ತಿಗಳನ್ನು ಸ್ಮರಿಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವೆಂದು ಭಾವಿಸುತ್ತೇನೆ. ನಿಧನರಾಗಿರುವ ೧೯,೨೦ ಜನ ಗಣ್ಯರ ಬಗ್ಗೆ ಈಗಾಗಲೇ ಅನೇಕ ಸದಸ್ಯ ಸ್ನೇಹಿತರು ಮಾತನಾಡಿದ್ದಾರೆ. ದಿವಂಗತ ಧರ್ಮವೀರರವರು ಈ ರಾಜ್ಯದ ರಾಜ್ಯಪಾಲರಾಗಿ ಉತ್ತಮ ಆಡಳಿತ ನೀಡಿದಂತಹವರಾಗಿದ್ದಾರೆ. ಇನ್ನು ಅಪಘಾತದಲ್ಲಿ ಮಡಿದ ಕಾಗವಾಡದ ಕ್ಷೇತ್ರದ ಶಾಸಕರಾಗಿದ್ದ ದಿವಂಗತ ಪಾಸಗೌಡ ಉರುಫ್ ಅಪ್ಪಾಗೌಡ ಪಾಟೀಲ್ ಅವರ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿ ರಾಷ್ಟ್ರೀಯ ಹೆದ್ದಾರಿ ಬಗ್ಗೆ ತಿಳಿಸಿದ್ದಾರೆ. ಬಹುಶಃ ಇವೊತ್ತು ರಾಷ್ಟ್ರೀಯ ಹೆದ್ದಾರಿಯ ಸ್ಥಿತಿ-ಗತಿ ಗಮನಿಸಿದರೆ ನಮಗೆಲ್ಲರಿಗೂ ಭಯವಾಗುತ್ತದೆ. ಯಾರೂ ಕೂಡ ಕಾರಿನಲ್ಲಾಗಲೀ, ಮತ್ತೊಂದು ವಾಹನದಲ್ಲಾಗಲೀ ರಾಷ್ಟ್ರೀಯ

ಹೆದ್ದಾರಿ ಮೇಲೆ ಪ್ರಯಾಣಿಸುವಂಥ ಸ್ಥಿತಿಯಲ್ಲಿಲ್ಲ. ಪ್ರತಿನಿತ್ಯವೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಒಂದಲ್ಲ ಒಂದು ಅಪಘಾತದ ಪ್ರಕರಣವಾಗುತ್ತಿರುವುದು ಪತ್ರಿಕೆಗಳಲ್ಲಿ ವರದಿಯಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿಯ ಗುಣಮಟ್ಟವನ್ನು ಸುಧಾರಿಸುವಲ್ಲಿ, ವಿಸ್ತರಿಸುವಲ್ಲಿ ಮತ್ತು ನಿಯಂತ್ರಿಸುವಲ್ಲಿ ಸರ್ಕಾರ ತನ್ನ ಆದ್ಯ ಗಮನ ನೀಡಿ ಕೆಲಸ ಮಾಡಬೇಕಾಗಿದೆ. ಇನ್ನು ಮಾನ್ಯ ಎ. ಆರ್. ಪಂಚಗಾವಿಯವರ ಬಗ್ಗೆ ಹಾಗು ಮಾನ್ಯ ಬಿ.ಎಸ್. ಚಂದ್ರಶೇಖರ್‌ರವರ ಬಗ್ಗೆ ಹೇಳಬೇಕೆಂದರೆ, ಇವರುಗಳು ನಮ್ಮ ಜೊತೆ ೧೯೮೫ ರಿಂದ ೧೯೮೯ ರವರೆಗೆ ಶಾಸಕರಾಗಿ ಕಾರ್ಯನಿರ್ವಹಿಸಿದಂಥವರು. ಮಾನ್ಯ ಪಿ. ಬಿ. ಓಂಕಾರಮೂರ್ತಿಯವರು ಒಬ್ಬ ಸಜ್ಜನ ರಾಜಕಾರಣಿಯಾಗಿ ಸೇವೆ ಮಾಡಿದಂತಹವರು.

ಶ್ರೀ ಆರ್.ಹೆಚ್. ಗೂಡವಾಲರವರು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರುವ, ತಮ್ಮ ಇಳಿ ವಯಸ್ಸಿನಲ್ಲೂ ನ್ಯಾಯವಾದಿಗಳಾಗಿ ಉತ್ತಮವಾಗಿ ಕೆಲಸ ನಿರ್ವಹಿಸಿದಂತಹವರು. ಅದೇ ರೀತಿ ಶ್ರೀ ಬಸನಗೌಡರು, ಶ್ರೀ ಬಿ. ಶಿವಣ್ಣನವರು, ಶ್ರೀ ಶಂಕರಪ್ಪ ಸುಗುರಪ್ಪ ಕವಿಶೆಟ್ಟಿ, ಶ್ರೀ ಎಸ್. ಇಸಾಮಿಯಾ, ಶ್ರೀ ಕೆ. ಎಸ್. ಕಾಳುಮರಿಗೌಡ ಮತ್ತು ಶ್ರೀ ಆರ್. ಅನಂತರಾಮನ್ ಇವರುಗಳ ಸಮಾಜಕ್ಕೆ ತಮ್ಮ ಕೈಲಾದಷ್ಟು ಸೇವೆ ಸಲ್ಲಿಸಿದ್ದಾರೆ. ಮಾನ್ಯ ಎಂ. ಎಸ್. ಕೃಷ್ಣನ್‌ರವರು ೧೯೮೫ರಿಂದ ೧೯೮೯ ರವರೆಗೆ ಈ ಸದನದಲ್ಲಿದ್ದರು. ಇವರು ಕಾರ್ಮಿಕ ಮತ್ತು ಕಮ್ಯುನಿಸ್ಟ್ ನಾಯಕರಾಗಿ ಉತ್ತಮ ಕಾರ್ಯವೆಸಗಿದ್ದಾರೆ. ಶ್ರೀ ಡಿ. ಎಸ್. ನಾಡಕರ್ಣಿಯವರು ೧೯೬೩ರಲ್ಲಿ ಅಂಕೋಲದಲ್ಲಿ ಟಿ. ಡಿ. ಬಿ. ಅಧ್ಯಕ್ಷರಾಗಿದ್ದಂಥ ಒಬ್ಬ ಆದರ್ಶ ರಾಜಕಾರಣಿಯಾಗಿದ್ದರು. ಶ್ರೀ ಡಿ. ಮುನಿಚಿನ್ನಪ್ಪ, ಶ್ರೀ ಎಸ್. ಜಯಣ್ಣನವರು ನಮ್ಮನ್ನು ಅಗಲಿದ್ದಾರೆ. ಶ್ರೀಮತಿ ಡಿ. ಜಿ. ಹೇಮಾವತಿಯವರು ಸಹ ನಮ್ಮನ್ನು ಅಗಲಿದ್ದು ಇವರು ಕಳೆದ ಸಲದ ಚುನಾವಣೆಯಲ್ಲಿ ಬೆಂಗಳೂರಿನ ಶಾಂತಿನಗರ ಕ್ಷೇತ್ರದಿಂದ ಆರಿಸಿ ಬಂದು ಉತ್ತಮ ಕಾರ್ಯ ಮಾಡುತ್ತಿದ್ದರು. ಇವರು ಇವೊತ್ತು ನಮ್ಮೊಂದಿಗಿಲ್ಲ. ನಿಧನರಾಗಿರುವ ಇವರೆಲ್ಲರ ಆತ್ಮಕ್ಕೆ ನಾನು ಶಾಂತಿ ಕೋರುತ್ತಾ ಇವರುಗಳು ಸಮಾಜಕ್ಕೆ ಮಾಡಿರುವ ಉತ್ತಮ ಕೆಲಸ-ಕಾರ್ಯಗಳನ್ನು ಸ್ಮರಿಸಿಕೊಳ್ಳುತ್ತಾ, ಮುಖ್ಯವಾಗಿ ಸನ್ಮಾನ್ಯ ಎಸ್. ನಿಜಲಿಂಗಪ್ಪನವರು ಬಿಟ್ಟು ಹೋಗಿರುವ ಧ್ಯೇಯ ಆದರ್ಶಗಳನ್ನು ನಾವುಗಳು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಸುಂದರ ರಾಜ್ಯ, ರಾಷ್ಟ್ರವನ್ನು ನಿರ್ಮಿಸುವಲ್ಲಿ ಟೊಂಕ ಕಟ್ಟಿ ದುಡಿಯೋಣವೆನ್ನುತ್ತಾ ನನಗೆ ಇಷ್ಟು ಹೊತ್ತು ನಾಲ್ಕು ಮಾತುಗಳನ್ನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ)

ಸನ್ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಅತ್ಯಂತ ಹಿರಿಯ ರಾಜಕಾರಣಿಗಳಾಗಿದ್ದ ದಿವಂಗತ ಎಸ್. ನಿಜಲಿಂಗಪ್ಪನವರ ಹಾಗೂ ನಿಧನರಾಗಿರುವ ನನ್ನ ಅನೇಕ ಸಹೋದ್ಯೋಗಿ ಶಾಸಕರುಗಳ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ಮಾಡಿರುವವರಲ್ಲಿ ಪ್ರಮುಖರಾಗಿದ್ದಂಥ ಸನ್ಮಾನ್ಯ ಎಸ್. ನಿಜಲಿಂಗಪ್ಪನವರ ಜೊತೆಯಿದ್ದಂಥ ಕಾಲ ನನ್ನ ನೆನಪಿಗೆ ಸ್ವಲ್ಪ ಬರುತ್ತದೆ. ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ಮಾಡುತ್ತಿದ್ದಂಥ ಸಂದರ್ಭದಲ್ಲಿ ಅವರ ಮೇಲೆ ಪೋಲೀಸ್ ವಾರೆಂಟ್ ಇತ್ತು. ನಿಜಲಿಂಗಪ್ಪನವರನ್ನು ಯಾವುದೇ ಸಂದರ್ಭದಲ್ಲಿ ಬಂಧಿಸಬಹುದು, ಅವರು ಬಂಧನಕ್ಕೊಳಗಾಗುತ್ತಾರೆಂಬ ವಾತಾವರಣ ನಿರ್ಮಾಣವಾಗಿದ್ದಂಥ ಸಂದರ್ಭದಲ್ಲಿ ಅವರು ಕೊಡಗಿಗೆ ಬಂದು ನನ್ನ ಮಾವನವರಾದ ಮಾಜಿ ಮುಂತ್ರಿಗಳಾದ ಕೆ. ಮಲ್ಲಪ್ಪನವರ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದರು. ಆಗ ನಾಲ್ಕು ದಿವಸಗಳ ಕಾಲ ಅವರೊಂದಿಗೆ ಇರತಕ್ಕ ಅವಕಾಶ ನನಗೆ ಸಿಕ್ಕಿದ್ದು

ಈ ಜನ್ಮದಲ್ಲಿ ನನ್ನ ಪುಣ್ಯವೆಂದು ತಿಳಿಸಿದ್ದೇನೆ. ಐದನೆಯ ದಿವಸ ಅವರು ಬಂಧನಕ್ಕೊಳಗಾಗುತ್ತಾರೆ. ದಿವಂಗತ ಸನ್ಮಾನ್ಯ ನಿಜಲಿಂಗಪ್ಪನವರ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅವರು ಮಾತನಾಡಿದ್ದನ್ನೇ ನಾನೂ ಕೂಡ ಮತ್ತೆ ಮತ್ತೆ ಹೇಳಲು ಇಚ್ಛಿಸುವುದಿಲ್ಲ. ಅವರ ಜ್ಞಾಪಕ ಶಕ್ತಿ ಎಷ್ಟರಮಟ್ಟಿಗೆ ಇತ್ತೆಂದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ತಿಳಿಸಿರುವಂತೆ, ಅವರ ಕೊನೆಯ ಕಾಲದಲ್ಲಿ ಅವರ ಬಳಿಗೆ ಹೋದ ಜನರನ್ನು ಅವರು ಗುರ್ತಿಸುತ್ತಿದ್ದರಂತೆ! ೬-೭ ತಿಂಗಳ ಹಿಂದೆ ನಡೆದ ಒಂದು ಘಟನೆ ಬಗ್ಗೆ ತಿಳಿಸುವುದಾದರೆ, ವಿಧಾನಸಭೆಯ ಗ್ರಂಥಾಲಯ ಸಮಿತಿ ವತಿಯಿಂದ ಅವರ ಕುರಿತು ಒಂದು ಪುಸ್ತಕವನ್ನು ಹೊರತರಬೇಕೆಂದು ನಾವು ನಿರ್ಧಾರ ಮಾಡಿದ ಸಂದರ್ಭದಲ್ಲಿ ಅವರ ಚರಿತ್ರೆಯನ್ನೊಳಗೊಂಡ ಒಂದು ಪುಸ್ತಕವನ್ನು (ಅವರನ್ನು ಭೇಟಿ)ಯಾಗುವ ಎಂಟು ದಿವಸಗಳ ಮೊದಲು ಅವರಿಗೆ ಕಳುಹಿಸಿಕೊಟ್ಟೆವು. ಎಂಟು ದಿವಸಗಳಾದ ಬಳಿಕ ಅವರನ್ನು ಭೇಟಿ ಮಾಡುವಸಲುವಾಗಿ ಚಿತ್ರದುರ್ಗಕ್ಕೆ ಹೋದವು. ಅವರಿಗೆ ಜ್ಞಾಪಕ ಶಕ್ತಿ ಎಷ್ಟರಮಟ್ಟಿಗೆ ಇತ್ತೆಂದರೆ ನಾವು ಅವರ ಕುರಿತು ರಚಿಸಿದಂಥ ಪುಸ್ತಕದ ಪ್ರೂಫ್ ಅನ್ನು ಸಂಪೂರ್ಣವಾಗಿ ಓದಿದ್ದರು. ನಾವು ಅವರನ್ನು ಭೇಟಿಯಾಗಿ ಮಾತಕತೆ ನಡೆಸುವಂಥ ಸಂದರ್ಭದಲ್ಲಿ ಅವರು ಈ ಪುಸ್ತಕ ತುಂಬಾ ಚೆನ್ನಾಗಿ ಬಂದಿದೆ, ಇದನ್ನು ಭಾರಿ ಕಷ್ಟಪಟ್ಟು ಸಂಪಾದಿಸಿದ್ದೀರಿ. ಇದರಲ್ಲಿ ಸೇರಿಸಬೇಕಾದ ಒಂದು ವಿಚಾರವನ್ನು ಬಿಟ್ಟಿದ್ದೀರೆಂದೆನಿಸುತ್ತದೆ, ಯೋಚನೆ ಮಾಡಿ ನೋಡಿ, ಆ ಮಾಹಿತಿ ಸಿಕ್ಕಿದರೆ ಸೇರಿಸಿ. ಎಂದು ಹೇಳಿದರು. ಬಿಟ್ಟುಹೋಗಿರುವ ವಿಚಾರ ಏನೆಂದು ಅವರನ್ನು ಕೇಳಿದಾಗ ನಾನು ಪಾರ್ಲಿಮೆಂಟ್ ಮೆಂಬರ್ ಆಗಿದ್ದಂಥ ಸಂದರ್ಭದಲ್ಲಿ ಲೋಕಸಭೆಯಲ್ಲಿ ಮಾತನಾಡುವುದಕ್ಕೆ ನನಗೆ ಕಡಿಮೆ ಸಮಯವನ್ನು ನಿಗದಿಪಡಿಸುತ್ತಿದ್ದರು, ನಮ್ಮ ರಾಜ್ಯದ ಬಗ್ಗೆ ಮಾತನಾಡುವುದಕ್ಕೆ ನನಗೆ ಸಾಕಷ್ಟು ಸಮಯ ಬೇಕಾಗಿದ್ದುದರಿಂದ ನನ್ನ ಜೊತೆಗಿದ್ದಂಥ ಎಲ್ಲಾ ಸದಸ್ಯರುಗಳನ್ನು "ನನಗೆ ಮಾತನಾಡಲು ಹೆಚ್ಚು ಸಮಯ ಬೇಕಾಗಿರುವುದರಿಂದ ನಿಮ್ಮೆಲ್ಲಾ ಸಮಯವನ್ನು ನನಗೆ ಕೊಡಿ" ಎಂದು ಕೇಳಿಕೊಂಡು ತದನಂತರ ವಿಚಾರವನ್ನು ಸಭಾಧ್ಯಕ್ಷರ ಮುಂದಿಟ್ಟಾಗ ಅವರೂ ಕೂಡ ಒಪ್ಪಿ ನನಗೆ ಸುಮಾರು ಒಂಬತ್ತು ಗಂಟೆಗಳ ಕಾಲ ಅವಕಾಶ ಮಾಡಿಕೊಟ್ಟಾಗ ನಾನು ಕರ್ನಾಟಕ ಬಗ್ಗೆ ಮಾತನಾಡಿದ್ದೇನೆ, ಈ ಅಂಶ ನೀವು ಹೊರತರಬೇಕೆಂದಿರುವ ಈ ಪುಸ್ತಕದಲ್ಲಿ ಎಲ್ಲಿಯೂ ಕಂಡುಬರುತ್ತಿಲ್ಲವಾದ್ದರಿಂದ, ಇದ್ದರೆ ಅದನ್ನು ಸ್ವಲ್ಪ ಸೇರಿಸಿ; ಎಂದರು. ನಂತರ ಅವರನ್ನು ಬೀಳ್ಕೊಟ್ಟು ಅವರು ತಿಳಿಸಿದ್ದ ವಿಷಯಗಳನ್ನು ಹುಡುಕಿ ಪುಸ್ತಕದಲ್ಲಿ ಸೇರಿಸಿದೆವು. ಪುಸ್ತಕ ಪೂರ್ಣಗೊಂಡು ಮುದ್ರಣವಾದ ಬಳಿಕ ಅದನ್ನು ಅವರಿಗೆ ಕೊಟ್ಟಾಗ ಸೇರಿಸಿದೆವು. ಪುಸ್ತಕ ಪೂರ್ಣಗೊಂಡು ಮುದ್ರಣವಾದ ಬಳಿಕ ಅದನ್ನು ಅವರಿಗೆ ಕೊಟ್ಟಾಗ ಅವರು ತುಂಬಾ ಸಂತೋಷಪಟ್ಟರು. ಗ್ರಂಥಾಲಯ ಸಮಿತಿಯಲ್ಲಿದ್ದ ನಾವುಗಳು ಅವರಲ್ಲಿಗೆ ಹೋಗಿ ಪರಿಚಯಿಸಿಕೊಂಡಾಗ ಅವರು ನಮ್ಮನ್ನು ಗುರ್ತಿಸಿದರು. ಅಷ್ಟು ಚೆನ್ನಾಗಿ ಅವರಿಗೆ ಜ್ಞಾಪಕ ಶಕ್ತಿ ಇತ್ತು. ಮಾನ್ಯ ನಿಜಲಿಂಗಪ್ಪನವರು ಅಖಿಲ ಕರ್ನಾಟಕ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದಾಗ ನಮ್ಮ ಮನೆಗೆ ಬಂದು ಎರಡು ದಿವಸಗಳ ಕಾಲ ತಂಗಿದ್ದರು. ಅವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಒಂದು ಸಾರಿ ಅವರೊಂದಿಗೆ ಉಳಿಯುವಂಥ ಅವಕಾಶ ಸಿಕ್ಕಿತ್ತು. ನಾನು ಅವರೊಂದಿಗೆ ಮಾತನಾಡುತ್ತಾ ನಾನು ಶಿವಪ್ಪ, ಸಕಲೇಶಪುರದವನು ಉಂದು ಪರಿಚಯಿಸಿಕೊಂಡೆ. ನಾನು ಅವರಿಗೆ ಪರಿಚಯ ಮಾಡಿಕೊಂಡ ತಕ್ಷಣ ಅವರು ಬಿ. ಬಿ. ಶಿವಪ್ಪ ಎಂದು ಸಕಲೇಶಪುರದಲ್ಲಿ ನನಗೆ ಯಾರೋ ಒಬ್ಬರು ಪರಿಚಯದವರು ಇದ್ದಾರೆ, ಅವರು ಕಾಫಿ ಬೆಳೆಗಾರರು ಎಂದು ಹೇಳಿದರು. ನಾನೇ ಆ ಬಿ. ಬಿ. ಶಿವಪ್ಪ ಎಂದು ಅವರಿಗೆ ಹೇಳಿದಾಗ ನಮ್ಮ ಇಡೀ ಕುಟುಂಬದ ಸದಸ್ಯರ ಹೆಸರುಗಳನ್ನು ಹೇಳಿ

ಅವರುಗಳ ಬಗ್ಗೆ ವಿಚಾರಿಸಿದರು. ಅಷ್ಟೊಂದು ಜ್ಞಾಪಕ ಶಕ್ತಿ ಅವರಿಗೆ ಇತ್ತು. ಅಂತಹ ಒಬ್ಬ ಮಹಾನ್ ವ್ಯಕ್ತಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ನಮ್ಮ ರಾಜ್ಯದ ಹೆಸರಿನಲ್ಲಿ ಕರ್ನಾಟಕ ಎಂಬ ಶಬ್ದ ತರುವುದಕ್ಕೆ ಅವರ ಪಾತ್ರ ಅತ್ಯಂತ ಮಹತ್ವದ್ದಾಗಿತ್ತು. ನಮ್ಮ ಗ್ರಾಮಾಂತರ ಪ್ರದೇಶದಲ್ಲಿ 'ಸತ್ತ ಎಮ್ಮೆ ಹಾಲು ಜಾಸ್ತಿ' ಎಂಬ ಒಂದು ಗಾದೆ ಮಾತು ಇದೆ. ಅಂದರೆ ಎಮ್ಮೆ ಸತ್ತು ಹೋದ ಮೇಲೆಯೇ ನಮಗೆ ಅದು ಜಾಸ್ತಿ ಹಾಲು ಕೊಡುತ್ತಿತ್ತು ಎಂದು ಗೊತ್ತಾಗುತ್ತದೆ. ಎಮ್ಮೆ ಬದುಕಿದ್ದಾಗ ಅದು ಕೊಡತಕ್ಕ ಹಾಲಿನ ಬಗ್ಗೆ ನಮಗೆ ಗಮನ ಇರುತ್ತದೆಯೇ ವಿನ: ಅದನ್ನು ನಾವು ಹೇಗೆ ಸಾಕಿದೆವು ಎಂಬ ಕಡೆ ಅಷ್ಟಾಗಿ ಗಮನ ಇರುವುದಿಲ್ಲ. ಸನ್ಮಾನ್ಯ ನಿಜಲಿಂಗಪ್ಪನವರು ಮಾನ್ಯ ಸದಸ್ಯರಾದ ಸೋಮಶೇಖರ್‌ರವರು ಹೇಳಿದಂತೆ 'ಕರ್ನಾಟಕ ರತ್ನ ಪ್ರಶಸ್ತಿ'ಯ ಜೊತೆಗೆ ಭಾರತ ರತ್ನ ಪ್ರಶಸ್ತಿ ಪಡೆಯಲು ಅರ್ಹರಿದ್ದರು. ಆ ಕೀರ್ತಿ ಅವರಿಗೆ ಸಲ್ಲಬೇಕಾಗಿತ್ತು. ಆದರೆ ಅದು ಅವರಿಗೆ ಸಲ್ಲಲಿಲ್ಲ. ಅದಕ್ಕೆ ಹಲವಾರು ಕಾರಣಗಳಿರಬಹುದು. ನಾನು ಅದರ ಬಗ್ಗೆ ವಿಶ್ಲೇಷಣೆಗೆ ಹೋಗುವುದಿಲ್ಲ. ಈಗಲಾದರೂ ಕರ್ನಾಟಕ ಸರ್ಕಾರ ಅವರಿಗೆ 'ಭಾರತ ರತ್ನ' ಪ್ರಶಸ್ತಿ ಕೊಡಿಸುವ ಪ್ರಯತ್ನ ಮಾಡಬೇಕು. ಅವರೆಂದೂ ಅದನ್ನು ಅಪೇಕ್ಷೆ ಪಟ್ಟಿರಲಿಲ್ಲ. ಬಹುಶ: ಅವರು ಜೀವಂತವಿದ್ದಾಗ ಈ ರೀತಿಯ ಒಂದು ಪ್ರಯತ್ನನಡೆದಿದ್ದರೆ ಅವರು ಅದಕ್ಕೆ ಒಪ್ಪುತ್ತಿದ್ದರೋ ಇಲ್ಲವೋ ಗೊತ್ತಿಲ್ಲ. ಅವರಿಗೆ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ಕೊಡಿಸುವ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಕೋರುತ್ತೇನೆ. ಹುಟ್ಟು ಅನಿಶ್ಚಿತ, ಸಾವು ನಿಶ್ಚಿತ. ಹುಟ್ಟುತ್ತಾರೋ ಇಲ್ಲವೋ ಗೊತ್ತಿಲ್ಲ. ಹುಟ್ಟಿದ ಮೇಲೆ ಎಂದೋ ಒಂದು ದಿವಸ ಸಾಯಲೇಬೇಕು. ಆದರೆ ಹುಟ್ಟು ಅನಿಶ್ಚಿತ, ಸಾವು ನಿಶ್ಚಿತ, ಇದರ ಮಧ್ಯೆ ನಾವು ಏನು ಬಿಟ್ಟು ಹೋಗುತ್ತೇವೋ ಅದು ಶಾಶ್ವತ. ಅಂತಹ ಶಾಶ್ವತವಾದಂತಹ ಜೀವನವನ್ನು ಮಾನ್ಯ ನಿಜಲಿಂಗಪ್ಪನವರು ನಡೆಸಿದ್ದರು. ಈ ರಾಜ್ಯಕ್ಕೆ ಅವರು ಕೀರ್ತಿಯನ್ನು ತಂದಿದ್ದರು. ಅದರ ಜೊತೆಗೆ ಅನೇಕ ಗಣ್ಯರು ತೀರಿಕೊಂಡಿರುವ ವಿಚಾರ ಈ ವಿಚಲಿತರಾಗಿದ್ದಾರೋ ನನಗೆ ಗೊತ್ತಿಲ್ಲ. ಸತ್ತವರ ಬಗ್ಗೆ ಸಂತಾಪ ಸೂಚನೆ ನಿರ್ಣಯ ಮಂಡಿಸಿ ಮಾತನಾಡಿ ಎಂದರೆ ಅವರು ಇದ್ದವರ ಬಗ್ಗೆಯೇ ಶ್ರದ್ಧಾಂಜಲಿ ಅರ್ಪಿಸಿ ಬಿಡುತ್ತಾರೆ. ಏಕೆ ಹೀಗೆ ಎಂದು ಗೊತ್ತಿಲಾಲ. ಏಕೆ ಈ ತರಹ ಆಗಿದೆಯೊ ಗೊತ್ತಿಲ್ಲಾ. ಅವರು ಏನೋ ಒಂದು ತರಹದ ಗೊಂದಲದಲ್ಲಿದ್ದಾರೆ.

ಅಧ್ಯಕ್ಷರು : ಮಾನ್ಯ ಶಿವಪ್ಪನವರೇ, ಸಂತಾಪ ಸೂಚಕ ನಿರ್ಣಯದ ಮೇಲೆ ಮಾತನಾಡುವಾಗ ಕಾಂಟ್ರವರ್ಸಿ ಕ್ರಿಯೇಟ್ ಮಾಡಬೇಡಿ. ಅದನ್ನು ಬಿಟ್ಟು ತಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀ ಬಿ. ಬಿ. ಶಿವಪ್ಪ: ಅವರು ಏನೋ ಒಂದು ತರಹ ವಿಚಲಿತರಾಗಿದ್ದಾರೆ. ಆದರೆ ಈ ಸಂದರ್ಭದಲ್ಲಿ ವಿರೋಧ ಪಕ್ಷದವರು ವಿಚಲಿತರಾಗಬಾರದು. ಈ ಸಭೆ ೧೪ ದಿವಸಗಳ ಕಾಲ ನಡೆಯಲಿದೆ. ಈ ಸಮಯದಲ್ಲಿ ವಿರೋಧ ಪಕ್ಷದವರು ಸರ್ಕಾರ ವಿರುದ್ಧ ಭಾರೀ ಹೋರಾಟವನ್ನೇ ಮಾಡಬೇಕಾದಂತಹ ಸಂದರ್ಭ ಇದೆ. ಆಡಳಿತ ಪಕ್ಷದವರು ನಗುತ್ತಲೇ ಇದ್ದಾರೆ. ಆದರೆ ವಿರೋಧ ಪಕ್ಷದವರು ಏಕೆ ವಿಚಲಿತರಾದರೋ ಗೊತ್ತಿಲ್ಲ. ಪಾಪ ಮಾನ್ಯ ಅವರಿಗೆ ಮಾನ್ಯ (XXX) ಏನು ಗ್ರಹಚಾರ ಇತ್ತೋ ಅದರಿಂದ ಅವರಿಗೆ ಬಿಡುಗಡೆಯಾಯಿತು ಎಂದು ಕಾಣುತ್ತದೆ. (XXX) ಅವರೇನೋ ಅದನ್ನು ಅಷ್ಟು ಗಂಭೀರವಾಗಿ ತೆಗೆದುಕೊಂಡಂತೆ ಕಾಣಲಿಲ್ಲ. ಭೋಜರಾಜನ ಕಾಲದಲ್ಲಿ ಕವಿರತ್ನ ಕಾಳಿದಾಸ ಚರಮಗೀತೆ.....

(XXX) ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ ಇದು ಅಭಾಸ. ಮಾನ್ಯ ಸದಸ್ಯರು ಆ ರೀತಿ ಹೇಳಬಾರದು.

Mr. Speaker : There was no intention for his saying. ಮಾನ್ಯ ಶಿವಪ್ಪನವರು ದಯವಿಟ್ಟು ಇದನ್ನು ಅರ್ಥ ಮಾಡಿಕೊಳ್ಳಬೇಕು. ಅವರು ಬೈ ಮಿಸ್ಟೇಕ್ ಆ ರೀತಿ ಮಾತನಾಡಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಸದಸ್ಯರು ಬೈ ಮಿಸ್ಟೇಕ್ ಆ ಧಾತುಗಳನ್ನು ಆಡಿದ್ದಾರೆ. ಅದಕ್ಕಾಗಿ ಅವರು ತಕ್ಷಣ ಕ್ಷಮೆಯನ್ನು ಕೇಳಿದ್ದಾರೆ. ಆ ಮಾತುಗಳನ್ನು ಮಾನ್ಯ ಅಧ್ಯಕ್ಷರು ದಯವಿಟ್ಟು ಕಡತದಿಂದ ತೆಗೆದು ಹಾಕಬೇಕು.

ಅಧ್ಯಕ್ಷರು : ಕಡತದಿಂದ ಆ ಪದಗಳನ್ನು ತೆಗೆದು ಹಾಕಿ.

ಶ್ರೀ ಬಿ.ಬಿ.ಶಿವಪ್ಪ : ಯಾವುದೇ ಉದ್ದೇಶ ಇಟ್ಟುಕೊಂಡು ನಾನು ಆ ಮಾತನ್ನು ಹೇಳಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸಿಂಧ್ಯಾರವರೂ ಸಹಾ ಆ ರೀತಿ ಹೇಳಿದ್ದಾರೆ. ಅದೆಲ್ಲವನ್ನೂ ಕೂಡ ಕಡೆದಿಂದ ತೆಗೆದು ಹಾಕುತ್ತೀರಾ? ನಮ್ಮ ಜೊತೆಗತ ಕೆಲಸ ಮಾಡಿದಂತಹ ಅನೇಕ ಸಹೋದ್ಯೋಗಿ ಶಾಸಕರುಗಳು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರೆಲ್ಲರಿಗೂ ನನ್ನ ಶ್ರದ್ಧಾಂಜಲಿಗಳನ್ನು ಅರ್ಪಿಸುತ್ತಾ, ಸಭೆಯ ಮುಂದೆ ತಾವೇನು ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿದ್ದೀರೋ ಅದನ್ನು ಬೆಂಬಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ) : ಸನ್ಮಾನ್ಯ ಸಭಾಧ್ಯಕ್ಷರೇ, ಅರಸನಾಗಲಿ, ತಿರುಕನಾಗಲಿ, ಧನಿಕನಾಗಲಿ, ನಾನಾಗಲೀ, ನೀವಾಗಲೀ ಎಲ್ಲರೂ ಇಲ್ಲಿ ಇಂದು ಅಳಿಯಲೇಬೇಕು. ಹೂಸಬರು ಬರುವುದಾದರೂ ಹೇಗೆ? ಹೊಸಬರು ಬರಲೇಬೇಕು. ಹಾಗೆಯೇ ಮರಣವೇ ಮಹಾನವಮಿ. ಜನನ ಎಂದು ಮೂರಕ್ಷದಿ ಜೀವನ ಎಂಬ ಮೂರಕ್ಷರದಿ ಜೀವಿಸಿ 'ಮಾನವ' ಎಂಬ ಮೂರಕ್ಷರ ನೀನು ಮರಣ ಎಂಬ ಮೂರಕ್ಷರ ಬಂದಾಗ ನೀನು ಏನನ್ನು ಸಮಾಜಕ್ಕೆ ಬಿಟ್ಟು ಹೋದೆ ಎಂಬುದು ಬಹು ಮುಖ್ಯ. ಬೆತ್ತಲೆಯೇ ನೀ ಬಂದೆ, ಬೆತ್ತಲೆಯೇ ನೀ ಪೋಪೆ, ವಸ್ತು ವೇಷಗಳೆಲ್ಲಾ ನಾಲ್ಕು ದಿವಸ, ಚಟ್ಟಕ್ಕೆ ನೀನೇರುವ ಮುನ್ನ, ಕಿತ್ತೆಸೆಯೋ ಕಂತೆಗಳ ಮರುಳ ಮುನಿಯ. ಇಂತಹ ಪವಿತ್ರವಾದ ೬೪ ಕೋಟಿ ಜೀವರಾಶಿಗಳಲ್ಲಿ ಶ್ರೇಷ್ಠವಾದ ಮಾನವ ಜನ್ಮದಲ್ಲಿ ನಾವು ಎಷ್ಟು ಕಾಲ ಜೀವಿಸುತ್ತೇವೆ ಎನ್ನುವುದು ಮುಖ್ಯವಲ್ಲ, ಹೀಗೆ ಜೀವಿಸಿದೆವು ಎನ್ನುವುದು ಮುಖ್ಯ. ನಮ್ಮ ಬದುಕಿನಲ್ಲಿ ಸರಿ ಸರಿಯಾಗಿ ಇದ್ದರೆ, ಪರಿ ಪರಿಯಾಗಿ ನೆಂಟರಂತೆ. ಸಾಹುಕಾರರ ಮನೆ ನಾಯಿ ಸತ್ತರೆ ಅದನ್ನು ನೋಡಲು ಊರಿನವರೆಲ್ಲಾ ಹೋದರು, ಆದರೆ ಸಾಹುಕಾರ ಸತ್ತಾಗ ಯಾರು ಹೋಗಲಿಲ್ಲ. ಏಕೆಂದರೆ ಆತ ಅಂತಹ ಪಾಪ ಮಾಡಿದ್ದ. ಜೀವನದಲ್ಲಿ ನಾವು ಏನನ್ನು ಬಿಟ್ಟು ಮಾಡಿರುತ್ತೇವೊ ಅವು ನಮ್ಮನ್ನು ಹುಡುಕುತ್ತವೆ. ಕರುವು ಮಂದೆಯಾಳು ನಮ್ಮನ್ನು ಹುಡುಕಿಕೊಳ್ಳುತ್ತದೆ. ಅಂತಹ ಕೆಲಸವನ್ನು ಈ ಸಂತಾಪ ಸೂಚಕ ನಿರ್ಣಯದಲ್ಲಿ ಹೆಸರಿಸಿರತಕ್ಕ ಎಲ್ಲಾ ವ್ಯಕ್ತಿಗಳೂ ಕೂಡ ಮಾಡಿದ್ದಾರೆ. ಶ್ರೇಷ್ಠ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ನಿಜಲಿಂಗಪ್ಪನವರು ಈ ನಾಡಿನ ನಿಜವಾದ ಸುಪುತ್ರರು ಎಂದರೆ ತಪ್ಪಾಗಲಾರದು. ಅಧಿಕಾರ ಬಂದಾಗ ಯಾರಿಂದ ಬಂತು, ಯಾರಿಗಾಗಿ ಅಧಿಕಾರ ಎಂಬುದನ್ನು ಅರ್ಥೈಸಿಕೊಂಡು ಅರ್ಥಪೂರ್ಣವಾಗಿ, ಸೇವೆ ಎನ್ನತಕ್ಕಂಥ ಜೀವವನ್ನು ನೆಟ್ಟು, ತ್ಯಾಗ ಎನ್ನತಕ್ಕಂಥ ನೀರನ್ನು ಎರೆದು, ಅದನ್ನು ಹೆಮ್ಮರವಾಗಿ ಬೆಳೆಸಿ ಸಮಾಜಕ್ಕೆ ಬಿಟ್ಟು ಹೋಗಿರತಕ್ಕಂಥ ಮಾನ್ಯ

ನಿಜಲಿಂಗಪ್ಪನವರು ನಿಜವಾಗಿಯೂ ಒಬ್ಬ ಶ್ರೇಷ್ಠ ವ್ಯಕ್ತಿ. ಸಂತಾಪ ಸೂಚಕ ನಿರ್ಣಯದಲ್ಲಿ ಹೆಸರಿಸಿರತಕ್ಕ ಎಲ್ಲರ ಆತ್ಮಕ್ಕೆ ಶಾಂತಿಯನ್ನು ನೀಡುವಂತೆ ಭಗವಂತನಲ್ಲಿ ಪ್ರಾರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ)** : ಮಾನ್ಯ ಅಧ್ಯಕ್ಷರೇ, ಇವತ್ತು ನಾವು ಇಲ್ಲ ಒಬ್ಬರು ಮಾಜಿ ರಾಜ್ಯಪಾಲರು, ಒಬ್ಬರು ಮಾಜಿ ಮುಖ್ಯಮಂತ್ರಿಗಳು ಮತ್ತು ಸುಮಾರು ೧೮ ಜನ ವಿಧಾನಸಭಾ ಸದಸ್ಯರುಗಳ ನಿಧನಕ್ಕೆ ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳು ದಿವಂಗತ ನಿಜಲಿಂಗಪ್ಪನವರ ಬಗ್ಗೆ ತಮ್ಮ ವೈಯುಕ್ತಿಕ ಸಂಬಂಧ ಹಾಗೂ ಅವರ ಬಗ್ಗೆ ಸಾಮಾನ್ಯವಾಗಿರುವ ಭಾವನೆಗಳನ್ನು ವ್ಯಕ್ತಪಡಿಸಿದಾಗ ನನ್ನ ಮನಸ್ಸಿನಲ್ಲಿ ಒಂದು ವಿಚಾರ ಬಂತು. ಇವತ್ತಿನ ಸಮಾಜದಲ್ಲಿ ರಾಜಕಾರಣ ಬಗ್ಗೆ ಒಂದು ರೀತಿಯ ಭಾವನೆ ಇದೆ. 'Politician', what is the defination? "A Politician is a person who shakes your hands before elections and shakes your confidence after elections". ಎಂಬ ಭಾವನೆ ಇವತ್ತು ರಾಜಕಾರಣಗಳ ಬಗ್ಗೆ ಜನರಲ್ಲಿ ಇದೆ. ಇಂತಹ ಒಂದು ಭಾವನೆ ಇವತ್ತು ಸಾಮಾನ್ಯವಾಗಿ ಬಂದಿರುವಾಗ ಮಾನ್ಯ ನಿಜಲಿಂಗಪ್ಪನವರಂತಹ ವ್ಯಕ್ತಿ ನಿಜಕ್ಕೂ ಇದ್ದರೆ ಎಂದು ಪ್ರಾಯಶ: ಇನ್ನು ೮-೧೦ ವರ್ಷಗಳಾದ ಮೇಲೆ ರಾಜಕೀಯದಲ್ಲಿರುವವರಿಗೂ ಕೂಡ ಸಂಶಯ ಬಂದು ಬಿಡಬಹುದು. ಅಂತಹ ಒಬ್ಬ ವ್ಯಕ್ತಿ ಇದ್ದರೋ ಅಥವಾ ದಂತ ಕಥೆಯೋ, ಸುಮ್ಮನೆ ಆ ರೀತಿ ಹೇಳುತ್ತಿದ್ದಾರೋ ಎಂದು ಅನಿಸಬಹುದು. ಸಂದರ್ಭದಲ್ಲಿ ಮಾನ್ಯ ನಿಜಲಿಂಗಪ್ಪನವರ ವ್ಯಕ್ತಿತ್ವದ ಬಗ್ಗೆ ಎಲ್ಲರೂ ಕೂಡ ಗುಣಗಾನವನ್ನು ಮಾಡಿದ್ದಾರೆ. ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಈಗ ತಾವು ಐ.ಟಿ.ಪಾರ್ಕ್ ಎಂದು ಜನರನ್ನು ಆಕರ್ಷಿಸುವುದಕ್ಕೋಸ್ಕರ ಮಾಡುತ್ತಿದ್ದೀರಿ. ಅದೇ ತರಹದ ಇನ್ನೊಂದು ಪಾರ್ಕ್‌ನ ಅಗತ್ಯ ಇದೆ. ವಿಧಾನಸೌಧದ ಸುತ್ತಲೂ ನಾವು ವಿಗ್ರಹ ಪ್ರತಿಮೆಗಳನ್ನು ಸ್ಥಾಪಿಸತಕ್ಕಂಥ ಸಂಪ್ರದಾಯಕ್ಕೆ ಇವತ್ತು ಇತಿಶ್ರೀ ಹಾಡಬೇಕಾಗಿದೆ. ಮಾನ್ಯ ಮಂತ್ರಿಗಳು ಲಂಡನ್ ಅನ್ನು ನೋಡಿದ್ದಾರೆ. ನಾನಂತೂ ಅದನ್ನು ನೋಡಿಲ್ಲ. ಅಲ್ಲಿ ಹಾಲ್ ಆಫ್ ಫೇಮ್ ಎಂಬುದು ಇದೆಯಂತೆ. ಅದರ ಬಗ್ಗೆ ಮಾತನಾಡುತ್ತ ಮಾನ್ಯ ಭೈರೇಗೌಡರು ಆಗಲೇ ಅನೇಕ ವ್ಯಕ್ತಿಗಳ ಹೆಸರುಗಳನ್ನು ಇಲ್ಲ ಮಾತನಾಡುತ್ತಾ ಮಾನ್ಯ ಆ ವ್ಯಕ್ತಿಗಳ ಹೆಸರನ್ನು ನಾವು ಕೇಳೇ ಇಲ್ಲವಲ್ಲ ಎಂದು ನನಗೆ ಅನಿಸಿತು. ಆ ವ್ಯಕ್ತಿಗಳ ಒಂದು ಸಣ್ಣ ಪ್ರತಿಮೆಯನ್ನು ಇಟ್ಟು, ಅವರ ಜೀವನ ಚರಿತ್ರೆಯನ್ನು ಇಟ್ಟು Let it become a source of inspitation for our coming generation. ಎಂದು ಮಾಡಿದ್ದಾರಂತೆ. ಆದರೆ ಇವತ್ತು ನಮ್ಮಲ್ಲಿ ಎಲ್ಲೂ ಕೂಡ ಇನ್‌ಸ್ಪಿರೇಷನ್ ಎಂಬುದೇ ಸಿಗುತ್ತಿಲ್ಲ. ನಿರಾಶೆಯ ವಾತಾವರಣವೇ ಎಲ್ಲೆಡೆ ಇರುವಾಗ ಯಾರು ತಮ್ಮ ಇಡೀ ಜೀವನದಲ್ಲಿ ನುಡಿದಂತೆ ನಡೆದರೋ ಅವರ ಜೀವನ ನಮಗೆ ಆದರ್ಶಪ್ರಾಯವಾಗಬೇಕು. ಆ ಮನವಿಯನ್ನು ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಮುಂದಿಡುತ್ತಾ ಈ ವಿಚಾರದಲ್ಲಿ ಸ್ವಲ್ಪ ಗಮನ ಹರಿಸಬೇಕೆಂದು ಕೋರುತ್ತೇನೆ. ನಾನು ಮುಖ್ಯವಾಗಿ ಇಲ್ಲಿ ಒಂದು ವಿಚಾರದ ಬಗ್ಗೆ ಮಾತನಾಡಲು ಎದ್ದು ನಿಂತಿದ್ದೇನೆ. ನನ್ನದೊಂದು ಜವಾಬ್ದಾರಿ ಇದೆ. ನಾನು ಯಾವ ರಾಜಾಜಿನಗರ ವಿಧಾನಸಭಾ ಕ್ಷೇತ್ರವನ್ನು ಇವತ್ತು ಪ್ರತಿನಿಧಿಸುತ್ತಿದ್ದೇನೋ ಅದೇ ರಾಜಾಜಿನಗರ ವಿಧಾನಸಭಾ ಕ್ಷೇತ್ರದಿಂದ ದಿವಂಗತ ಎಂ.ಎಸ್.ಕೃಷ್ಣನ್‌ರವರು ೧೯೬೭,೧೯೭೨, ೧೯೮೩ ಮತ್ತು ೧೯೮೫ರಲ್ಲಿ ಸದಸ್ಯರಾಗಿ ಆರಿಸಿ ಇಲ್ಲಿಗೆ ಬಂದಿದ್ದರು. ಪ್ರಾಯಶ: ಕರ್ನಾಟಕ ಕಂಡ ಅತ್ಯುತ್ತಮ ಕಾರ್ಮಿಕ ನಾಯಕರಲ್ಲಿ ಅವರು ಒಬ್ಬರಾಗಿದ್ದರು. ಅವರು ಮಾನವೀಯತೆ ಇಟ್ಟುಕೊಂಡ ಒಬ್ಬ ರಾಜಕಾರಣಿಯಾಗಿದ್ದರು ಎಂದರೆ

ತಪ್ಪಾಗಲಾರದು. ಅವರೊಬ್ಬ ಸಜ್ಜನ ವ್ಯಕ್ತಿಯಾಗಿದ್ದರು. ನಾವು ಬಹಳ ಸಲ ನೋಡುತ್ತಿರುತ್ತೇವೆ, ಟ್ರೇಡ್ ಯೂನಿಯನ್ ಮೂವ್‌ಮೆಂಟ್‌ನಲ್ಲಿ there are more traders than trade-union leaders. ಆದರೆ ಒಬ್ಬ ಅಪ್ಪಟ ಟ್ರೇಡ್ ಯೂನಿಯನ್ ಲೀಡರ್ ಆಗಿ ಕಾರ್ಮಿಕರ ಬಗ್ಗೆ, ಸಮಾಜದ ಬಗ್ಗೆ ಮತ್ತು ನಾಡಿನ ಬಗ್ಗೆ ಅವರು ಅನುಕಂಪ ಇಟ್ಟುಕೊಂಡು ಕೆಲಸ ಮಾಡುತ್ತಿದ್ದರು. ನಮ್ಮ ರಾಜಕೀಯ ಜೀವನದಲ್ಲಿ ನಾವು ಮಾನ್ಯ ನಿಜಲಿಂಗಪ್ಪನವರ ತರಹ ನಡೆಯಬೇಕು ಎಂಬ ಸವಾಲು ನಮ್ಮ ಮುಂದಿದೆ. ಅದು ಬಹಳ ಸುಲಭವಾದುದಲ್ಲ ಅಥವಾ ಸರಳವಾದುದೂ ಸಹಾ ಅಲ್ಲ. ನನಗೆ ರಾಜಾಜಿನಗರದಲ್ಲಿ ಮಾನ್ಯ ಎಂ.ಎಸ್. ಕೃಷ್ಣನ್‌ರವರು ಕೆಲಸ ಮಾಡಿದ ರೀತಿಯಲ್ಲಿ ಕೆಲಸ ಮಾಡುವಂತಹ ಒಂದು ಸವಾಲು ಇದೆ. ಸವಾಲುಗಳನ್ನು ನಾನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದೇನೆ. ಇನ್ನು ದಿವಂಗತ ಹೇಮಾವತಿಯವರ ಬಗ್ಗೆ ಹೇಳುವುದಾದರೆ, ಅವರು ಶೇಕಡ ೩೩ರಷ್ಟು ಮಹಿಳಾ ಮೀಸಲಾತಿ ಬರುವುದಕ್ಕೆ ಮುಂದೆಯೇ ಪುರುಷರ ಜೊತೆಗೆ ಸ್ಪರ್ಧಿಸಿ ಗೆದ್ದು ಇಲ್ಲಿಗೆ ಸದಸ್ಯರಾಗಿ ಬಂದಿದ್ದರು. ಇದೇನೂ ಹುಡುಗಾಟಿಕೆಯ ಮಾತಲ್ಲ. ನಮ್ಮ ಜೊತೆ ಒಂದು ಅವಧಿಯಲ್ಲಿ ಅವರು ಸದಸ್ಯರಾಗಿ ಕೆಲಸ ಮಾಡಿದ್ದರು. ಅವರೆಲ್ಲರ ಆತ್ಮಕ್ಕೆ ನಾನು ಶ್ರದ್ಧಾಂಜಲಿ ಕೋರುತ್ತಾ, ಅವರ ಕೆಲಸಗಳು ನಮಗೆ ಮಾರ್ಗದರ್ಶನವಾಗಲೀ ಎಂದು ಆಶಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ)

ಮಾನ್ಯ ಅಧ್ಯಕ್ಷರೇ, ಘನತೆವೆತ್ತ ಈ ಸದನದಲ್ಲಿ ನಮ್ಮನ್ನು ಅಗಲಿದ ಎಲ್ಲಾ ನಾಯಕರನ್ನು ಸ್ಮರಿಸಿಕೊಂಡು ಅವರ ಆದರ್ಶವನ್ನು ಪಾಲನೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ವಿಧಾನಸಭೆಯು ಎರಡನೇ ಬಾರಿಗೆ ಸೇರಿರುವ ಈ ಸಂದರ್ಭದಲ್ಲಿ ಸುಮಾರು ೧೭ ಜನ ನಾಯಕರುಗಳನ್ನು ಕಳೆದುಕೊಂಡು ನಾವುಗಳು ಈ ರಾಜ್ಯದಲ್ಲಿ ನಿಜವಾಗಿ ತಬ್ಬಲಿಗಳಾಗಿದ್ದೇವೆ. ಅದರಲ್ಲೂ ಉತ್ತಮವಾದಂತಹ ಆಡಳಿತ ನಡೆಸಿ, ನಮ್ಮೆಲ್ಲರಿಗೂ ಆದರ್ಶಪ್ರಾಯರಾದ, ನಿಜವಾದ ಪಿತೃಗಳಾಗಿದ್ದ ಮಾನ್ಯ ಎಸ್. ನಿಜಲಿಂಗಪ್ಪನವರ ಅಗಲಿಕೆಯಿಂದ ಈ ರಾಜ್ಯಕ್ಕೆ ಭಾರೀ ಅನ್ಯಾಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಆಗಲೇ ಹೇಳಿದ ಹಾಗೆ ಅವರು ಯಾರ ಹೆಸರಿನಲ್ಲಿ ಏನು ಮಾಡುತ್ತೇನೆ ಎಂದು ಭರವಸೆ ನೀಡಿರುತ್ತಿದ್ದರೋ ಅದೇ ರೀತಿ ನಡೆದುಕೊಳ್ಳುತಿದ್ದರು. ಅವರು ಬಹಳ ಚಿಂತನೆಯಲ್ಲಿ ನಡೆಸುತ್ತಿದ್ದರು. ಈ ರಾಜ್ಯದ ರೈತರ ಬಗ್ಗೆ, ಬಡವರ ಬಗ್ಗೆ, ರೈತನಿಗೆ ಆಗುವಂತಹ ಅನುಕೂಲತೆಗಳ ಬಗ್ಗೆ ಮತ್ತು ಅಭಿವೃದ್ಧಿ ಕೆಲಸಕಾರ್ಯಗಳ ಬಗ್ಗೆ ಅವರು ಸದಾ ಚಿಂತನೆ ನಡೆಸುತ್ತಿದ್ದರು.

4.00 ಪಿ.ಎಂ.

ಅವರು ಹಗಲಿರುಳೂ ಬಡವರ ಬಗ್ಗೆ ಮತ್ತು ರೈತರ ಬಗ್ಗೆ ಚಿಂತಿಸುತ್ತಿದ್ದರು ಮತ್ತು ಅವರ ಸರ್ವಾಂಗೀಣ ಏಳಿಗೆಗಾಗಿ ಕೆಲಸ ಮಾಡುತ್ತಿದ್ದರು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬಯಸುವುದೇನೆಂದರೆ, ನಮಗೆಲ್ಲರಿಗೂ ಆದರ್ಶಪ್ರಾಯರಾದಂಥ ಒಬ್ಬ ರಾಜಕಾರಣಿ ಈ ರಾಜ್ಯಕ್ಕೆ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿರುವುದು ನಮ್ಮ ರಾಜ್ಯದ ಅದೃಷ್ಟವಾಗಿದೆ. ಅವರ ಉತ್ತಮವಾದ ಧ್ಯೇಯ-ಧೋರಣೆ ಮತ್ತು ಕನಸುಗಳನ್ನು ನಮ್ಮಲ್ಲಿ ಬಿತ್ತಿ ಆದರ್ಶಗಳನ್ನು ಏನು ಬಿಟ್ಟು ಹೋಗಿದ್ದಾರೆ ಅದನ್ನು ಉಳಿಸಿ ಅವರ ಕನಸುಗಳನ್ನು ಸಾಕಾರಗೊಳಿಸುವುದಕ್ಕೆ ಅವರ ಹೆಸರಿನಲ್ಲಿ ಒಂದು ಟ್ರಸ್ಟ್ ಅನ್ನು ಪ್ರತಿಷ್ಠಾಪಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದಕ್ಕೆ, ಸಂಪೂರ್ಣ ಸಹಮತ ವ್ಯಕ್ತಪಡಿಸುತ್ತಾ ಟ್ರಸ್ಟಿನಲ್ಲಿ ನೂರು ಕೋಟಿ ರೂಪಾಯಿಗಳಲ್ಲ ಇನ್ನೂರು ಕೋಟಿ ರೂಪಾಯಿಗಳನ್ನು ಅದರಲ್ಲಿ ತೊಡಗಿಸಿ ಅವರ ಉತ್ತಮ

ಸೇವೆಗಳನ್ನು ಸ್ಮರಿಸುತ್ತಾ ಅವರು ತೋರಿಸಿ ಕೊಟ್ಟಂಥ ಮಾರ್ಗದಲ್ಲಿ ಸಾಗುವುದು ನಮ್ಮೆಲ್ಲರ ಕರ್ತವ್ಯವಾಗಬೇಕು. ಪ್ರಜಾಪ್ರಭುತ್ವದಲ್ಲಿ ಅವರು ಅನುಸರಿಸಿದ ರಾಜಕೀಯ ನೀತಿ ಇರಬಹುದು, ರಾಜ್ಯದ, ರಾಷ್ಟ್ರದ ಆರ್ಥಿಕ ನೀತಿ ಇರಬಹುದು, ಇದನ್ನು ಅನುಸರಿಸಿಕೊಂಡು ಕೆಲಸ ಮಾಡುವಲ್ಲಿ ನಾವು ಮುಂದಾಗಬೇಕೆಂಬ ಮಾತನ್ನು ಹೇಳುತ್ತಾ, ಶಾಸಕಾರಾಗಿದ್ದಂಥ ನಮ್ಮ ಅನೇಕ ಸ್ನೇಹಿತರು ಇವೊತ್ತು ನಮ್ಮನ್ನು ಅಗಲಿದ್ದಾರೆ. ಶಾಸಕರಾಗಿ ಆರಿಸಿ ಬರುವುದು ಅಷ್ಟು ಸುಲಭದ ಕೆಲಸವಲ್ಲ. ಶಾಸಕರಾದ ಬಳಿಕ ತಮ್ಮ ಅಮೂಲ್ಯ ಸೇವೆಯನ್ನು ಜನರಿಗೆ ಮಾಡುತ್ತಾರೆ. ಕೊನೆಗೆ ಅವರು ಉಸಿರೆಳೆದಂಥ ಸಂದರ್ಭದಲ್ಲಿ ಅವರು ಸಮಾಜಕ್ಕೆ ಮಾಡಿರುವ ಅಮೂಲ್ಯ ಸೇವೆಯನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಬೇಕು. ನಮ್ಮನ್ನು ೧೯ ಜನ ಗಣ್ಯರು ಅಗಲಿದ್ದಾರೆ. ಅಗಲಿದವರಲ್ಲಿ ಶಾಸಕರುಗಳು ಹಾಗೂ ರಾಜಕಾರಣಿಗಳು ಸೇರಿದ್ದು, ಅಗಲಿದವರಲ್ಲಿ ಮುಖ್ಯರಾದ ದಿವಂಗತ ಧರ್ಮವೀರರವರು ನಮ್ಮ ರಾಜ್ಯದ ರಾಜ್ಯಪಾಲರಾಗಿದ್ದಂಥ ಸಂದರ್ಭದಲ್ಲಿ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸಿ ಪೋಲೀಸ್ ಇಲಾಖೆಯ ಸುಧಾರಣೆ ಕುರಿತಂತೆ ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸಿದರು. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗುತ್ತಿರುವಂಥ ಈ ಸಂದರ್ಭದಲ್ಲಿ ದಿವಂಗತ ಧರ್ಮ ಸವೀರರವರು ಕೊಟ್ಟಿರುವಂಥ ಅಮೂಲ್ಯವಾದ ವರದಿಯನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ಅನುಷ್ಠಾನಕ್ಕೆ ತಂದಲ್ಲಿ ಪೋಲೀಸ್ ಇಲಾಖೆಯನ್ನು ಬಲಪಡಿಸಿ ಕಾನೂನು ಹಾಗೂ ಸುವ್ಯವಸ್ಥೆಯನ್ನು ಸರಿಪಡಿಸಿ ಕಾಪಾಡಿಧಂತಾಗುತ್ತದಾದ್ದರಿಂದ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಾ ಮಹನೀಯರುಗಳ ಅಗಲಿಕೆಯಿಂದ ಈ ರಾಜ್ಯಕ್ಕೆ ಆಗಿರುವ ನಷ್ಟವನ್ನು ಭರಿಸಲೆಂದು ನಾನು ಪರಮಾತ್ಮನಲ್ಲಿ ಬೇಡುತ್ತಾ ಅವರ ಆತ್ಮಕ್ಕೆ ಶಾಂತಿ ಕೋರುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಿದರು)

ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ ೧೧-೦೦ಗಂಟೆಗೆ ಸೇರುವುದು.

(ಸದನವು ಸಂಜೆ ೪ ಗಂಟೆ ೩ ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ ೨೪ನೇ ಅಕ್ಟೋಬರ್ ೨೦೦೦ ಮಂಗಳವಾರದಂದು ಬೆಳಿಗ್ಗೆ ೧೧-೦೦ ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)